

ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 33-34 ಆಗಸ್ಟ್ 22, 2004 ಬೆಲೆ ರೂ. 3.00







ಆಗಸ್ಟ್ 15 ಆತ್ಮಾವಲೋಕನದ ದಿನ

ಬೆಳಕಿನೆಡೆಗೆ ಮಹಿಳಾ ನಡಿಗೆ



ಶಿಕ್ಷಣದ ವ್ಯಾಪಾರದಲ್ಲಿ ಪ್ರತಿಭಾ ಬಲಿ !

ಭಾರತದ ನವ ಚೈತನ್ಯಕ್ಕಾಗಿ ಜನಾಂದೋಲನ

ಅಥೆನ್ಸ್ ಒಲಿಂಪಿಕ್ 2004

- ಅಭಿವೃದ್ಧಿಯ ಮಾತು - ಅವನತಿಯ ಹಾದಿ
- ಭೂಪಾಲ್ ದುರಂತ ಮತ್ತು ಪರಿಹಾರ ?
- ಕಳ್ಳನೋಟು ಮತ್ತು ಬಿಜೆಪಿ ನಾಯಕರು
- ವೆನಿಜುವೆಲಾ - ಚವೇಝ್‌ಗೆ ಸವಾಲು

ಭೂಪಾಲ್ ವಿಷಾನಿಲ ದುರಂತ

ಇಪ್ಪತ್ತು ವರ್ಷಗಳ ನಂತರ ಪರಿಹಾರದ ಬಗ್ಗೆ ತೀರ್ಪು

ಭೂಪಾಲ್ ದುರಂತ ಪರಿಹಾರದ ಬಗ್ಗೆ ಸುಪ್ರಿಂ ಕೋರ್ಟು ಜುಲೈ 19 ರಂದು ಸ್ವಾಗತಾರ್ಹ ತೀರ್ಪು ಇತ್ತಿದೆ. ಇತ್ತೀಚೆಗೆ ತೀರ್ಪು ಏನು ಹೇಳುತ್ತದೆ? ಅದರ ಮಹತ್ವವೇನು? ಭೂಪಾಲ್ ದುರಂತದಲ್ಲಿ ನಡೆದದ್ದಾದರೂ ಏನು? ಪರಿಹಾರದ ಬಗ್ಗೆ ತೀರ್ಪು ನೀಡಲು ಇಪ್ಪತ್ತು ವರ್ಷಗಳು ಯಾಕೆ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಇಲ್ಲಿದೆ.

ಜುಲೈ 19 ರಂದು ಸುಪ್ರಿಂ ಕೋರ್ಟು ಹಲವು ವರ್ಷಗಳಿಂದ ನಡೆಯುತ್ತಿದ್ದ ಭೂಪಾಲ್ ದುರಂತದ ಪರಿಹಾರದ ಬಗೆಗಿನ ಕೇಸ್‌ನಲ್ಲಿ ತೀರ್ಪು ಕೊಟ್ಟಿತು. ರಿಸರ್ವ್ ಬ್ಯಾಂಕ್ ಬಳಿ ಇರುವ 1500 ಕೋಟಿ ರೂ. ಹಣವನ್ನು 5.7 ಲಕ್ಷ ದುರಂತ ಪೀಡಿತರ ಮಧ್ಯೆ ಹಂಚಬೇಕು ಎಂಬುದು ತೀರ್ಪಿನ ಮುಖ್ಯ ಅಂಶ. ಈ ಹಣ 1989 ರಲ್ಲಿ ಕೇಂದ್ರ ಸರ್ಕಾರ ಮತ್ತು ಯೂನಿಯನ್ ಕಾರ್ಬೈಡ್ ನಡುವೆ ಆದ ಒಪ್ಪಂದದ ಭಾಗವಾಗಿ ಕಂಪನಿ ಪಾವತಿ ಮಾಡಿದ 47 ಕೋಟಿ ಡಾಲರುಗಳಲ್ಲಿ ಎರಡು ಹಂತಗಳಲ್ಲಿ ಪರಿಹಾರ ಕೊಟ್ಟಾದ ಮೇಲೆ ಉಳಿದ ಹಣ ದುರಂತ ನಡೆದು ಇಪ್ಪತ್ತು ವರ್ಷಗಳ ನಂತರ, ಪರಿಹಾರ ನೀಡಿಯಾದ ಮೇಲೆ ಇಷ್ಟು ದುಡ್ಡು ಉಳಿಯುವುದು ಹೇಗೆ? ರಿಸರ್ವ್‌ಬ್ಯಾಂಕ್ ಬಳಿ ಕಾರ್ಬೈಡ್ ಪಾವತಿ ಮಾಡಿದ ಹಣ ಪರಿಹಾರಕ್ಕೆ ಎಂದ ಮೇಲೆ ಪುನಃ ಆ ಬಗ್ಗೆ ತೀರ್ಪಿನ ಅಗತ್ಯವೇನು? ಎಂಬುದು ಯಾರಿಗಾದರೂ ಅರ್ಥವಾಗದ ಅಂಶ.



ತೀರ್ಪು ಏನು ಹೇಳುತ್ತದೆ?

1989 ರಲ್ಲಿ ಕಾರ್ಬೈಡ್ ಕೊಟ್ಟ ಹಣ (ಆಗಿನ ಡಾಲರ್ ಬೆಲೆ 15 ರೂಪಾಯಿ) ರೂ.710 ಕೋಟಿ. ಇದನ್ನು ಒಪ್ಪಂದ ಪ್ರಕಾರ ಮೂರು ಸಾವಿರ ಸತ್ತವರು ಮತ್ತು ಸುಮಾರು ಒಂದು ಲಕ್ಷ ನೊಂದವರಿಗೆ ಪರಿಹಾರವಾಗಿ ಕೊಡಬೇಕಿತ್ತು. ನೊಂದವರನ್ನು ಗುರುತಿಸುವ ಕ್ರಮ ಆರಂಭವಾದದ್ದೇ 1992 ರಲ್ಲಿ. ಇನ್ನು ಆ ಪ್ರಕ್ರಿಯೆ ಆರಂಭವಾಗಿಲ್ಲ. ಇನ್ನೂ 16 ಸಾವಿರ ಪರಿಹಾರದ ಅರ್ಜಿಗಳು ಇತ್ಯರ್ಥವಾಗದೆ ಕೂತಿವೆ. 1992 ರ ಹೊತ್ತಿಗೆ ಡಾಲರು ಬೆಲೆ 30 ಕ್ಕೆ ಏರಿ (ಅಂದರೆ ಇಮ್ಮಡಿಯಾಗಿ) ಮತ್ತು ಬಡ್ಡಿ ಸೇರಿ ಹಣ ಇನ್ನಷ್ಟು ಹೆಚ್ಚಿತ್ತು. 2000ದ ಹೊತ್ತಿಗೆ ಡಾಲರು ಬೆಲೆ ರೂ.45 ಕ್ಕೇರಿತ್ತು. ಆದ್ದರಿಂದ 2003 ಕೊನೆ ಹೊತ್ತಿಗೆ 15,310 ಸತ್ತವರ ಹಾಗೂ ಐದೂವರೆ ಲಕ್ಷ ನೊಂದಾವರಿಗೆ ಸುಮಾರು 1520 ಕೋಟಿ ರೂ. ಪರಿಹಾರ ಪಾವತಿ ಮಾಡಿದ ಮೇಲೂ, ಸುಮಾರು ಅಷ್ಟೇ ಹಣ ಪರಿಹಾರ ನಿಧಿಯಲ್ಲಿ ಉಳಿದಿತ್ತು. ಆದರೆ ಸರ್ಕಾರ ಆ ಹಣವನ್ನು ಲೆಕ್ಕಹಾಕದೆ, ಹಿಂದಿನ ನಿಧಿಯ ಆಧಾರದ ಮೇಲೆ ಪರಿಹಾರ ವಿತರಿಸುತ್ತಿದೆ. ಇದನ್ನು ಪ್ರಶ್ನಿಸಿ 30 ದುರಂತ ಪೀಡಿತರು ಸುಪ್ರಿಂ ಕೋರ್ಟ್ ಮೆಟ್ಟಿಲು ಹತ್ತಿದರು. ಇವರ ಕೇಸನ್ನು ಭೂಪಾಲ್ ಗ್ಯಾಸ್ ಪೀಡಿತ ಮಹಿಳಾ ಉದ್ಯೋಗ ಸಂಘಟನೆ(ಭೂಪಾಲ್) ಮತ್ತು ಭೂಪಾಲ್ ಗ್ಯಾಸ್ ಪೀಡಿತ ಸಂಘರ್ಷ ಸಹಯೋಗ ಸಮಿತಿ (ದೆಹಲಿ) ಎಂಬ ಎರಡು ಸಂಘಟನೆಗಳು ನಡೆಸಿದವು. ಈ ಎರಡೂ ಸಂಘಟನೆಗಳ 1984 ರಿಂದಲೇ ದುರಂತದಲ್ಲಿ ನೊಂದವರಿಗೆ ನ್ಯಾಯಯುತ ಪರಿಹಾರಕ್ಕೆ ಹೋರಾಟ ಮತ್ತು ರಚನಾತ್ಮಕ ಕೆಲಸ ನಡೆಸಿಕೊಂಡು ಬಂದಿವೆ.

ತೀರ್ಪಿನ ಮಹತ್ವವೇನು?

ಈಗ ಪರಿಹಾರ ಖಾತೆ ಪರಿಹಾರ ನೀಡಿರುವ 15,310 ಸತ್ತವರ ಹಾಗೂ ಐದುವರೆಲಕ್ಷ ನೊಂದವರ ಪಟ್ಟಿಯನ್ನು ಒಪ್ಪಿಕೊಂಡಿದೆ. ಇವರೆಲ್ಲರನ್ನೂ ಮತ್ತು ಇನ್ನೂ ಪರಿಹಾರ ಅರ್ಜಿ ಇತ್ಯರ್ಥವಾಗದವರನ್ನು ಸೇರಿಸಿ ಉಳಿಯುವ ಹಣವನ್ನು ವಿತರಿಸಬೇಕು ಎಂದು ತೀರ್ಪು ಸ್ಪಷ್ಟವಾಗಿ ಹೇಳಿದೆ. ಇದರಿಂದ 1989 ರ ಮೂಲ ಭೂಪಾಲ್ ಒಪ್ಪಂದದಲ್ಲಿ ನಮೂದಿಸಿದ್ದ ನೊಂದವರ ಸಂಖ್ಯೆ (3 ಸಾವಿರ ಸತ್ತವರು, ಒಂದು ಲಕ್ಷ ಘಾಸಿಗೊಂಡವರ) ಸರಿಯಾದದ್ದಲ್ಲ ಎಂದು ಸುಪ್ರಿಂ ಕೋರ್ಟ್ ಹೇಳಿದಂತಾಗಿದೆ.



ಒಟ್ಟು ಪರಿಹಾರಕ್ಕೆ ಅರ್ಹರಾದವರ ಸಂಖ್ಯೆ ಮೊದಲು ಸರ್ಕಾರ ಅಂದಾಜು ಮಾಡಿದ್ದಕ್ಕಿಂತ ಐದುಪಟ್ಟು, ಅಂದರೆ ಮೊದಲ ಪಟ್ಟಿಯ ಅರ್ಹರು ಅವರಿಗೆ ಸಿಗಬೇಕಾಗಿದ್ದ ಪರಿಹಾರದ ಐದನೇ ಒಂದು ಭಾಗ ಮಾತ್ರ ಸಿಕ್ಕಿದೆ. ಹಣ ಉಳಿದಿರುವುದು ಪರಿಹಾರಕ್ಕೆ ಅರ್ಹರಾದವರನ್ನು ಗುರುತಿಸಿ ಅದನ್ನು ವಿತರಿಸುವ ಪ್ರಕ್ರಿಯೆಯಲ್ಲಿ ಭಾರಿ ವಿಳಂಬದಿಂದ (ಆ ಸಮಯದಲ್ಲಿ ಡಾಲರು ಬೆಲೆ ಏರಿರುವುದು ಮತ್ತು ಬಡ್ಡಿ ಸೇರಿರುವುದು) ಮಾತ್ರ. ಐದುಪಟ್ಟು ನೊಂದವರನ್ನು ಗುರುತಿಸಿರುವ ಹಿನ್ನೆಲೆಯಲ್ಲಿ ಕಾರ್ಬೈಡ್ ಕೊಡಬೇಕಾದ ಹಣವನ್ನು ಪುನರ್ವಿಮರ್ಶಿಸಬೇಕು ಎಂಬುದು.

ಮೇಲೆ ಹೇಳಿದ ಎರಡು ಸಂಘಟನೆ ಭೂಪಾಲ್ ದುರಂತದಲ್ಲಿ ನೊಂದವರ ಪ್ರತಿನಿಧಿ)ಗಳ ವಾದ. ಅದರಲ್ಲೂ ಈ ಮಹಾನ್ ದುರಂತದ ಪರಿಣಾಮ ನೊಂದವರ ಪೀಳಿಗೆಗಳಿಗೂ ಬೇಕಾಗುವುದರಿಂದ (ಹುಟ್ಟಿನಿಂದ ಬರುವ ಅಂಗವೈಕಲ್ಯ, ರೋಗಗಳ ಮೂಲಕ) ಈ ಅಧಿಕ ಪರಿಹಾರಕ್ಕೆ ವ್ಯವಸ್ಥೆ ಮಾಡಬೇಕು. ದುರಂತ ಪೀಡಿತರ ಪರ ವಕೀಲರು ಈ ಬಗ್ಗೆ ವಾದಿಸಿದ್ದರೂ, ಕೋರ್ಟು ಅದನ್ನು ಗಮನಿಸಿಲ್ಲ. ಆದರೆ ತೀರ್ಪು ಇಂತಹ ಇನ್ನೊಂದು ಕೇಸ್ ಹಾಕುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಇದು ತೀರ್ಪಿನ ಅತ್ಯಂತ ಮಹತ್ವದ ಅಂಶ. ಕಾರ್ಬೈಡ್ ಒಪ್ಪಿದ ಪ್ರಮಾಣಕ್ಕೆ ಅನುಗುಣವಾಗಿಯೇ, ಕನಿಷ್ಠ 5 ಪಟ್ಟು ಪರಿಹಾರ ದೊರೆಯಬೇಕು ಎಂದು ವಾದಿಸಲು ಅವಕಾಶ ಮಾಡಿಕೊಟ್ಟಂತಾಗಿದೆ.

ಭೂಪಾಲ್ ದುರಂತ ಏನು?

ಭೂಪಾಲ್‌ನಲ್ಲಿ 1984 ಡಿಸೆಂಬರ್ 3 ರಂದು ಯೂನಿಯನ್ ಕಾರ್ಬೈಡ್‌ನ ಕೀಟನಾಶಕ ಫ್ಯಾಕ್ಟರಿಯಲ್ಲಿ ನಡೆದ ವಿಷಾನಿಲ ಸೋರಿ ಸಾವಿರಾರು ಜನರು ಸತ್ತ ಘಟನಾವಳಿಯೇ ದುರಂತ. ಇದು ಕಳೆದ ನೂರು ವರ್ಷಗಳಲ್ಲಿ ಸಾವು, ನೋವುಗಳ ಸಂಖ್ಯೆಯ ದೃಷ್ಟಿಯಿಂದ ಅತ್ಯಂತ ದೊಡ್ಡ ದುರಂತ. ಕೆಲವರು ರಾಸಾಯನಿಕ ಹಿರೋಶಿಮಾ ಎಂದು ಇದನ್ನು ಕರೆಯುತ್ತಾರೆ. ಇನ್ನೂ ಹಲವು ಕೆಳಕಂಡ ಕಾರಣಗಳಿಗೆ ನಿಜವಾಗಿ ಅತ್ಯಂತ ಮತ್ತು ಇನ್ನೂ ಮುಂದುವರ ಯುತ್ತಿರುವ ದುರಂತ ಎನ್ನಬಹುದು.

ದುರಂತ ನಡೆಯಲು ಕಾರಣ ಎಲ್ಲಾ ಸುರಕ್ಷತಾ ಕ್ರಮಗಳನ್ನು ಹಣ ಉಳಿಸಲು ಗಾಳಿಗೆ ತೂರಲಾಗಿತ್ತು ಎಂಬುದು. ಆದರೆ ಕೋರ್ಟಿನಲ್ಲಿ ಒಬ್ಬ ಅತೃಪ್ತ ಕಾರ್ಮಿಕನ ಬುಡಮೇಲು ಕೃತ್ಯ ಎಂದು ಆಪಾದಿಸಿತು.

ದುರಂತದಲ್ಲಿ ಲಕ್ಷಾಂತರ ಜನ ಸಾವು-ನೋವಿಗೀಡಾದಾಗಲೂ ಕಾರ್ಬೈಡ್ ಮ್ಯಾನೇಜ್‌ಮೆಂಟ್ ಸೋರಿದ ಮಿಕ್ (MIC)ನ ರಾಸಾಯನಿಕ ಫಾರ್ಮುಲಾ ಬಿಟ್ಟುಕೊಡಲಿಲ್ಲ. ಇದು 'ಮಿಕ್'ನಿಂದ ನೊಂದರವರಿಗೆ ಶುಶ್ರೂಷೆಗೆ ಯಾವ ಪ್ರತಿ ರಾಸಾಯನಿಕ ಬಳಸಬೇಕು ಎಂದು ನಿರ್ಧರಿಸಲು ಬೇಕಾಗಿತ್ತು. ಇಂತಹ ಮಹಾನ್ ದುರಂತಕ್ಕೆ ಕಾರಣರಾದ ಕಾರ್ಬೈಡ್ ಅಧ್ಯಕ್ಷನ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಿ, ಆತನನ್ನು ಶಿಕ್ಷಿಸಲು ಭಾರತ ಸರ್ಕಾರ ಪ್ರಯತ್ನ ಮಾಡಲಿಲ್ಲ. ಅದರ ಬದಲು ಜಗತ್ತಿನಲ್ಲೇ ಅತ್ಯಂತ ಕಡಿಮೆ ಪರಿಹಾರಕ್ಕೆ ಒಪ್ಪಂದ ಮಾಡಿಕೊಂಡಿತು.

ಈಗಲೂ ಪ್ರತಿ ತಿಂಗಳು 30 'ಮಿಕ್' ವಿಷಾನಿಲದ ಪರಿಣಾಮದಿಂದ ಸಾಯುತ್ತಿದ್ದಾರೆ.

1998 ರಲ್ಲಿ ಕಾರ್ಬೈಡ್ ಭೂಪಾಲ್ ಬಿಟ್ಟು ತೆರಳಿದಾಗ, 5000 ಟನ್ ಅತ್ಯಂತ ಅಪಾಯಕಾರಿ ರಾಸಾಯನಿಕಗಳನ್ನು ಬಿಟ್ಟುಹೋಗಿದ್ದು, ಇನ್ನೂ ಅಪಾಯಕಾರಿ ಭಾಗವಾಗಿ ಉಳಿದಿದೆ.


- ಶರತ್

ಪರಿಹಾರದ ತೀರ್ಪಿನಲ್ಲಿ ಇಷ್ಟು ವಿಳಂಬ ಯಾಕೆ?

ದುರಂತ ನಡೆದ ಇಪ್ಪತ್ತು ವರ್ಷಗಳ ನಂತರವೂ ನೊಂದವರು ಪರಿಹಾರಕ್ಕೆ ಹೊರಡಬೇಕೆಂಬುದು ವಿಚಿತ್ರ ಸ್ಥಿತಿ. ಭೂಪಾಲ್ ದುರಂತದಲ್ಲಿ ಪರಿಹಾರಕ್ಕಾಗಿ ಈ ದೀರ್ಘ ಹೋರಾಟದ ಪ್ರಮುಖ ಮೈಲಿಗಲ್ಲುಗಳು -


- ಸರ್ಕಾರ ಕಾರ್ಬೈಡ್‌ನಿಂದ ಈ ದುರಂತದ ಭೀಕರತೆಗೆ ಅನುಗುಣವಾದ ದಂಡ ವಸೂಲಿಗಾಗಿ ಅಮೇರಿಕದ ಕೋರ್ಟುಗಳಲ್ಲಿ ಕೇಸಿನ ಮೂಲಕ ಅಥವಾ ದೇಶದ ಕಾನೂನು ಪ್ರಕಾರ ಕ್ರಮ ಜರುಗಿಸಲಿಲ್ಲ.
- ಈ ಅವಕಾಶ ಉಪಯೋಗಿಸಿ ಅಮೇರಿಕದ ವಕೀಲರು ಕಾರ್ಬೈಡ್ ವಿರುದ್ಧ ಕೇಸು ಹಾಕಲು, ಲಕ್ಷಾಂತರ ನೊಂದವರ ಅನುಮತಿಗಾಗಿ ಭೂಪಾಲದ ಮೇಲೆ ಎರಗಿದರು.
- ಕಾರ್ಬೈಡನ್ನು ಭಾರಿ ಪರಿಹಾರ ಕೊಡುವುದರಿಂದ ಮತ್ತು ವರ್ಷಗಳ ಕಾಲ ಕಾನೂನು-ಕದನ ತಪ್ಪಿಸಲು ಭಾರತ ಸರ್ಕಾರ ಕಾನೂನು ಒಂದು ಪಾಸು ಮಾಡಿ ತಾನು ಭೂಪಾಲ್ ದುರಂತದಲ್ಲಿ ನೊಂದವರ ಪರ ಏಕಮಾತ್ರ ಪ್ರತಿನಿಧಿ ಎಂದು ಸಾರಿತು.
- ಸುಪ್ರೀಂಕೋರ್ಟಿನಲ್ಲಿ ಕಾರ್ಬೈಡ್ ಮೇಲೆ ಪರಿಹಾರಕ್ಕೆ ಕೇಸು ಹಾಕಿತು. ಆದರೆ ಕೇಸು ನಡೆಯುತ್ತಿರುವಾಗಲೇ ಹಠಾತ್ತನೆ; ಸರ್ಕಾರ (1989 ರಲ್ಲಿ) ಕಾರ್ಬೈಡ್ ಜತೆ ಕೋರ್ಟಿನ ಹೊರಗೆ ಒಪ್ಪಂದಕ್ಕೆ ಬಂದಿತು. ಈ ಒಪ್ಪಂದದ ಪ್ರಕಾರ 47 ಕೋಟಿ ಡಾಲರು ಪರಿಹಾರ ನಿಧಿಯನ್ನು ಕಾರ್ಬೈಡ್ ಕೊಡಬೇಕಾಗಿತ್ತು. ಕೇಸು ಹಾಕಿದಾಗ ಸರ್ಕಾರ 300 ಕೋಟಿ ಡಾಲರು ಪರಿಹಾರ ಕೇಳಿತ್ತು. ಈ ಒಪ್ಪಂದದ ಸುದ್ದಿ ಬರುತ್ತಲೇ ಕಾರ್ಬೈಡ್ ಶೇರು ಬೆಲೆ ಅಮೇರಿಕದ ಮಾರುಕಟ್ಟೆಯಲ್ಲಿ ಏರಿತಂತೆ. ಇಷ್ಟೆ ಸಾಕು ಪರಿಹಾರ ಎಷ್ಟು ಕಡಿಮೆ ಎಂಬುದಕ್ಕೆ ಪುರಾವೆ.
- ಆ ಮೇಲೆ ಆರಂಭವಾಯಿತು ನೊಂದವರನ್ನು ಗುರುತಿಸಿ, ಅವರಿಗೆ ಈ ನಿಧಿ ಹಂಚುವ ಕಾರ್ಯಕ್ರಮ ಆರಂಭವಾಯಿತು. ಮೊದಲ ಹಂತದಲ್ಲೇ, ಈ ಕೆಲಸಕ್ಕೆ 36 ವಿಶೇಷ ಕೋರ್ಟುಗಳಿಗೆ ಹಲವು ವರ್ಷಗಳು ಹಿಡಿದವು. ಅಕ್ರಮಗಳ, ಭ್ರಷ್ಟಾಚಾರ, ವಿಳಂಬದ ದೂರುಗಳು ಅನೇಕ.
- ಭಾರಿ ಪರಿಹಾರ ಸಿಕ್ಕಿದೆ ಎಂದಲ್ಲ. ಜಯಪ್ರಕಾಶ ನಗರ ಎಂಬ ಅತ್ಯಂತ ಹೆಚ್ಚಿನ ಪರಿಣಾಮಕ್ಕೀಡಾದ ಪ್ರದೇಶದ ಜನರಿಗೂ ರೂ.25 ಸಾವಿರ ಮಾತ್ರ ಪರಿಹಾರ ಸಿಕ್ಕಿದ್ದು.
- ಭೂಪಾಲ್ ದುರಂತ ನೊಂದವರ ಸಂಘಟನೆಯ ಅರ್ಜಿ ಮೇಲೆ ತೀರ್ಪು ಕೊಡುತ್ತಾ ಸುಪ್ರಿಂಕೋರ್ಟು ಕಾರ್ಬೈಡ್ ಕೊಟ್ಟಿರುವ ಹಣವನ್ನು ಬೇರೆ ಯಾವುದೇ ಕೆಲಸಕ್ಕೆ ಬಳಸಬಾರದು ಎಂದು ತೀರ್ಪಿತ್ತು. ಅದರ ಮುಂದುವರಿಕೆಯಾಗೇ ಈ ಕೇಸು ನಡೆಯುತ್ತಿದ್ದುದು.

ಸಹಸ್ರ ಸಹಸ್ರ ಜನರ ಜೀವದುಸಿರು ಕಸಿದುಕೊಂಡು ಲಕ್ಷಾಂತರ ಜನರಿಗೆ ಘಾತ ಮಾಡಿದ ಕಿಲ್ಲರ್ ಕಾರ್ಬೈಡ್ ಫ್ಯಾಕ್ಟರಿ...





ಅಭಿವೃದ್ಧಿಯ ಮಾತು ಅವನತಿಯ ಹಾದಿ....



ಹಣಕಾಸು ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಮಧ್ಯಾವಧಿ ಆರ್ಥಿಕ ಯೋಜನೆ ಶಿಫಾರಸ್ಸುಗಳು 'ಅಘಾತಕಾರಿಯಾಗಿವೆ. ಬಜೆಟ್‌ನ ಜನವಿರೋಧಿ ಅಂಶಗಳನ್ನು ಜಾರಿಗೊಳಿಸಲು ಉದಾರೀಕರಣದ ಹಾದಿ ಬಿಡಲೊಲ್ಲೆವು ಎಂದು ಸಾರಿವೆ. ಈ ವರದಿಗೆ ಬಿಜೆಪಿಯಂತಹ ಅಧಿಕೃತ ವಿರೋಧ ಪಕ್ಷದ್ದು ಹುಮ್ಮಸ್ಸಿನ ಬೆಂಬಲ.

ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿಧಾನಸಭೆಯಲ್ಲಿ ಮಂಡಿಸಿದ ಮಧ್ಯಾವಧಿ ಆರ್ಥಿಕ ಯೋಜನೆಯ ಪ್ರಮುಖ ಅಂಶ ಹಾಗೂ ಅದು ಹಿಡಿಯಲಿರುವ ಹಾದಿ ಮೈತ್ರಿಕೂಟದ ಸರ್ಕಾರದ ಬಗೆಗಿನ ಜನರ ಕನಿಷ್ಟ ನಿರೀಕ್ಷೆಗಳಿಗೂ ನೀರೆರಚುವಂತಿದೆ. ಈಗಾಗಲೇ ಈ ಸಾಲಿನ ಬಜೆಟ್‌ನಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಕೊಂಚ ಪರಿಹಾರ ಕಲ್ಪಿಸಲಾಗಿದೆಯೆಂದು ಬಿಂಬಿಸಲಾದ ಬೆನ್ನಲ್ಲೇ ಮೂಲಭೂತವಾದ ವಿಶ್ವಬ್ಯಾಂಕ್-ನಂತಹ ಹಣಕಾಸು ಸಂಸ್ಥೆಗಳ ನಿರ್ದೇಶನಗಳ ಒಪ್ಪಿಗೆ ಅಂತರ್ಗತವಾಗಿರುವುದನ್ನು ಕಂಡಿದ್ದೇವೆ. ಈ ಅಧಿವೇಶನದಲ್ಲಿ ಮಧ್ಯಾವಧಿ ಆರ್ಥಿಕ ಯೋಜನೆ-ಜನಾದೇಶ ಅದೇನೇ ಇರಲಿ ಲೆಕ್ಕಕ್ಕಿಲ್ಲ. ಹಿಂದಿನ ಸರ್ಕಾರದ ನೀತಿಗಳು - ಜನಕೋಟಿಯ ಬಾಧೆಗಳು ಪರಿಗಣನೆಗೆ ಬಂದಿಲ್ಲ. ಬದಲಾಗಿ ಬಜೆಟ್‌ನಲ್ಲಿ ವ್ಯಕ್ತಗೊಂಡ ಉದಾರೀಕರಣದ ಸೆಳವುಗಳು ಇಲ್ಲಿ ಖಚಿತವಾದ ಸ್ವರೂಪವನ್ನು ಪಡೆದು ಜನರ ಮೇಲೆ ಎರಗಲಿವೆ. ವಿಶ್ವಬ್ಯಾಂಕ್-ಐಎಂಎಫ್ ನಂತಹ ವಿದೇಶಿ ಹಣಕಾಸು ಸಂಸ್ಥೆಗಳ ನಿರ್ದೇಶನಗಳನ್ನು ಚಾಚೂ ತಪ್ಪದೇ ಜಾರಿಗೆ ತರಲು ತನ್ನ ಕಟಿಬದ್ಧತೆ ಘೋಷಿಸಲಾಗಿದೆ.

ಮಧ್ಯಾವಧಿ ಆರ್ಥಿಕ ಯೋಜನೆಯ ಶಿಫಾರಸುಗಳ ಅನುಷ್ಠಾನ ವಿವಿಧ ರಂಗಗಳಲ್ಲಿ ವ್ಯಾಪಕ ಪರಿಣಾಮ ಉಂಟುಮಾಡಲಿದೆ. ಒಂದು ಆಡಳಿತದ ಗಾತ್ರ ಸಣ್ಣಾಗಿಸುವುದು, ಎರಡು ವಿದ್ಯುತ್, ಕೃಷಿ ಶಿಕ್ಷಣ, ಸಾರಿಗೆಯಂತಹ 'ಅಭಿವೃದ್ಧಿಯೇತರ' ಸಹಾಯಧನ ಕಡಿತಗೊಳಿಸುವುದು. ಅಂದರೆ ಉದ್ಯೋಗ ಕಡಿತ ಮಾತ್ರವಲ್ಲ ನೌಕರರ ಸವಲತ್ತು, ಹಕ್ಕುಗಳನ್ನು ಕಿತ್ತುಕೊಳ್ಳುವುದು. ಕೃಷಿ ಮತ್ತು ಸಾಮಾಜಿಕ ಕಲ್ಯಾಣದ ಅಭಿವೃದ್ಧಿಗೆ ಕೊಡಲಿಯೇಟು ನೀಡುವುದು. ಸರ್ಕಾರಿ ನೌಕರರು, ಯುವಜನರ, ಗ್ರಾಮೀಣ ಪ್ರದೇಶದ ಜನತೆ, ವಿದ್ಯಾರ್ಥಿಗಳು ಈ ಧಾಳಿಗೆ ಈಡಾಗಲಿರುವ ಬಲಿಪಶುಗಳು.

ವಿಶ್ವಬ್ಯಾಂಕ್‌ನ ಸಾಲ ಪಡೆಯುವಾಗಲೇ ಒಪ್ಪಿಕೊಂಡದ್ದು ಮೂಲ ಸಂರಚನಾ ಹೊಂದಾಣಿಕೆಯ ಶರತ್ತು- ಅದರಲ್ಲಿ ಆಡಳಿತ ವೆಚ್ಚವನ್ನು ತಗ್ಗಿಸುವುದು ಒಂದು ಪ್ರಮುಖ ಅಂಶ. ಜನತೆಯಿಂದ ಚುನಾಯಿತಗೊಂಡ ಸರ್ಕಾರ

ಈ ವಾರ ಕರ್ನಾಟಕ ಒಂದು ನೋಟ ಎಸ್.ವೈ.ಗುರುಶಾಂತ್

ಜನತೆಯ ನಿರೀಕ್ಷೆ, ಅಗತ್ಯಗಳಿಗೆ ಅನುಗುಣವಾಗಿ ದಕ್ಷವಾಗಿ ಸ್ಪಂದಿಸುವ ಇಚ್ಛೆಗಿಂತ ಲಾಭ-ನಷ್ಟದ ವ್ಯಾಪಾರಿ ದೃಷ್ಟಿಯೇ ಮುಖ್ಯ ಪರಿಗಣನೆ. ಸಾಲ, ಬಡ್ಡಿ ನೀಡಿಕೆ, ಉಳ್ಳವರಿಗೆ ನೀಡುವ ರಿಯಾಯಿತಿಗಳು. ಬಜೆಟ್ ಕೊರತೆ ತುಂಬಿಸಿಕೊಳ್ಳಬೇಕೆಂದರೆ ದುಡಿದುಣ್ಣುವ ಜನರನ್ನು ಹಿಂಡಬೇಕು ಎಂಬುದು ನೀತಿ ನಿರ್ದೇಶನ.

ಆಡಳಿತದ ವೆಚ್ಚ ಕುಗ್ಗಿಸಲು ಈಗಿರುವ ಖಾಲಿ ಹುದ್ದೆಗಳ ರದ್ಧತಿ; ಹೆಚ್ಚುವರಿ ಎಂದು ಗುರುತಿಸಲಾದ ನೌಕರರನ್ನು ಸ್ವಯಂ ನಿವೃತ್ತಿ ಯೋಜನೆಯಡಿ ಹೊ[illegible]ವುದು. ಅದರಂತೆ ಖಾಲಿ ಹುದ್ದೆಗಳಲ್ಲಿ ಈ ವರುಷ ಶೇ 80 ಹುದ್ದೆಗಳನ್ನೇ ರದ್ದುಗೊಳಿಸಲಾಗುವುದು. ನಿವೃತ್ತರಾದ ಹುದ್ದೆಗಳಲ್ಲಿ 1/3 ರದ್ದು. ಶಿಕ್ಷಣರಂಗ ಶೇ 20, ಆರೋಗ್ಯ ಶೇ 50, ಪೊಲೀಸ್ ಶೇ 50 ಖಾಲಿ ಜಾಗ ರದ್ದಿಗೆ ನಿರ್ದೇಶಿತವಾದವುಗಳು. ಕೆಲವೊಂದು ಹುದ್ದೆಗಳು ನೇಮಕಾತಿ ಮಾಡಿಕೊಂಡರೆ ಲಾಭವಿದೆಯೆಂದಾದರೆ ಮಾತ್ರ ಮಾಡಲಾಗುವುದಂತೆ. ವೇತನಕ್ಕೆ ಶೇ 23 ರಷ್ಟು ಹಣ ಖರ್ಚಾಗುತ್ತಿದ್ದು ಅದನ್ನು ಇನ್ನೂ ಕಡಿಮೆ ಮಾಡುವ ಗುರಿಯಿದೆ (92-93 ರಲ್ಲಿ ಶೇ 30) ಈ ಧಾಳಿ ಸರ್ಕಾರಿ ನೌಕರರ ಮೇಲೆ ಮುಂದುವರೆದಿದ್ದು ಸಂಬಳ ಆಧಾರಿತ ಪಿಂಚಣಿಯ ಸೌಲಭ್ಯದಲ್ಲಿ ಮಾರ್ಪಾಡು ಮಾಡಲಾಗುವುದು - ಕಡಿತ ಮಾಡಲಾಗುವುದು. ಇನ್ನು ಸಾರಿಗೆ ಕ್ಷೇತ್ರಕ್ಕೆ ನೀಡಲಾಗುವ ಅನುದಾನದಲ್ಲಿ ಶೇ 15 ಕಡಿತ ಮಾಡುವುದಲ್ಲದೇ, ದರಗಳನ್ನು ಹೆಚ್ಚಿಸಲಾಗುವುದು. ಹಾಗೆಯೇ ಶಿಕ್ಷಣ, ಕೃಷಿ, ಕೈಗಾರಿಕೆ, ವಿದ್ಯುತ್ ಕ್ಷೇತ್ರಗಳಿಗೆ ನೀಡುವ ಅನುದಾನ - ಸಹಾಯ ಕಡಿತಕ್ಕೆ ನಿರ್ಧರಿಸಲಾಗಿದೆ. ಅಂದರೆ ಈಗಾಗಲೇ ನಿಲುಕದಷ್ಟಾಗಿರುವ ದುಬಾರಿ ಶುಲ್ಕಗಳ ಇನ್ನೂ ಹೆಚ್ಚಳ. ಶಿಕ್ಷಕರ ಕೊರತೆ ಇನ್ನೂ ಭೀಕರ. ವ್ಯಾಪಾರೀಕರಣಕ್ಕೆ ಮುಕ್ತ ಅವಕಾಶ.

ಕರ್ನಾಟಕದಲ್ಲಿ ಕೃಷಿ-ಕೈಗಾರಿಕಾ ಬಿಕ್ಕಟ್ಟು ಎಷ್ಟೊಂದು ಭಯಂಕರ ಹಂತ ತಲುಪಿದೆ ಎಂಬುದು ತಿಳಿದ ವಿಷಯ. ಈ ರಂಗಗಳ ಅನುದಾನ ಕಡಿತ ಮಾಡುವುದೆಂದರೆ ರೈತ-ಕಾರ್ಮಿಕರು, ಕೂಲಿಕಾರರಿಗೆ ಆತ್ಮಹತ್ಯೆಯ, ಅವನತಿಯ ಹಾದಿಗೆ ನೂಕಿದಂತೆಯೇ. ಕೃಷಿಕರನ್ನು - ಉದ್ದಿಮೆಗಳನ್ನು ಉಳಿಸುವ ಮಾತು ಕೇವಲ ವಂಚನೆಯಾಗುತ್ತದೆ.

ಜೆಡಿ(ಎಸ್), ಕಾಂಗ್ರೆಸ್‌ನ ಮೈತ್ರಿಕೂಟದ ಈ ಸರ್ಕಾರದಲ್ಲಿ ಕನಿಷ್ಟ ಜೆಡಿ(ಎಸ್) ಇಂತಹ ಜನಪೀಡಕ ನೀತಿಗಳಿಗೆ ಭಿನ್ನತೆ ತೋರಿ ತಡೆಹಾಕಬಹುದೆಂಬ ನಿರೀಕ್ಷೆ ಜನಸಾಮಾನ್ಯರದು. ಆದರೆ ಇಡೀ ರಾಜ್ಯದ ಜನರ ಭವಿಷ್ಯ - ಅಭಿವೃದ್ಧಿಗೆ ಮಾರಕವಾಗುವ ಇಂತಹ ಯೋಜನೆ ತೆಲಗಿ - ಸಂಗ್ರಾಮ್ ಹೇಳಿಕೆಯ ಗದ್ದಲ ಸ್ವರೂಪ ಪಡೆದಿರುವಾಗ ಹನ್ನೊಂದರಲ್ಲಿ ಇನ್ನೊಂದು ಎಂದು ಮಂಡಿಸಿದ್ದು. ಬಹುತೇಕ ಪಕ್ಷಗಳು ಹಾಗೆ ಭಾವಿಸಿದ್ದು ಆತಂಕದ ವಿಚಾರ. ಆಡಳಿತ ಮತ್ತು ವಿರೋಧ ಪಕ್ಷದ ನಡುವೆ ಸಹಮತದ ದ್ಯೋತಕ. ಆಡಳಿತ ಸುಧಾರಣೆ ಹೆಸರಲ್ಲಿ ವಿಶ್ವಬ್ಯಾಂಕ್ ನೀತಿಗಳ ಜಾರಿಯ ಶಿಫಾರಸು ನೀಡಿರುವ ಹಾರ್‍ನಳ್ಳಿ ರಾಮಸ್ವಾಮಿ ವರದಿ ಜಾರಿಗೆ ಕಟಿಬದ್ದವೆಂದು ಕಾಂಗ್ರೆಸ್‌ನ ಸಚಿವ ಶ್ರೀನಿವಾಸಗೌಡ ಹೇಳಿದ್ದಾರೆ. ಬಿಜೆಪಿಯ ನಾಯಕ ಯಡಿಯೂರಪ್ಪ 'ಅವರು ಅಷ್ಟೆಲ್ಲಾ ಕಷ್ಟಪಟ್ಟು ವರದಿ ಬರೆದಿದ್ದಾರೆ. ಇನ್ನೂ ಯಾಕೆ ಪೂರ್ಣ ಜಾರಿಯಾಗುತ್ತಿಲ್ಲ' ಎಂದು ಕಾಳಜಿ ವ್ಯಕ್ತಪಡಿಸುತ್ತಾರೆ. ವಿಧಾನಸಭೆಯಲ್ಲಿ ಅತಿರಥ ಪ್ರಶ್ನೆಗಳ ಚುಂಗು ಹಿಡಿದು ಗುಲ್ಲೆಬ್ಬಿಸುವ ಇವರಲ್ಲಿ ಮುಖ್ಯಪ್ರಶ್ನೆಗಳನ್ನು ಬಂದಾಗ ಎಂಥಹ ಅಪೂರ್ವ ಮೈತ್ರಿ! ಈ ಪ್ರಶ್ನೆಗಳನ್ನೆತ್ತಿ ರಾಜ್ಯದಲ್ಲಿ ವ್ಯಾಪಕ ಚಳುವಳಿ ನಡೆಯಬೇಕಿದೆ.

ಹಣಕಾಸು ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಮಧ್ಯಾವಧಿ ಆರ್ಥಿಕ ಯೋಜನೆ ಶಿಫಾರಸ್ಸುಗಳು 'ಅಘಾತಕಾರಿಯಾಗಿವೆ. ಬಜೆಟ್‌ನ ಜನವಿರೋಧಿ ಅಂಶಗಳನ್ನು, ಉದಾರೀಕರಣದ ಹಾದಿ ಬಿಡಲೊಲ್ಲೆವು ಎಂದು ಸಾರಿವೆ. ಅಭಿವೃದ್ಧಿಯ ಆಕರ್ಷಕ ಮಾತು ಉದುರಿಸುತ್ತಲೆ ರಾಜ್ಯವನ್ನು ಅವನತಿಗೆ ತಳ್ಳುವ ಹಾದಿ ಹಿಡಿಯಲಾಗಿದೆ. ಗದ್ದಲ-ಗೋಜಲುಗಳ ನಡುವೆ ಮಂಡಿಸಿದ ಈ ವರದಿಗೆ ಬಿಜೆಪಿಯಂತಹ ಅಧಿಕೃತ ವಿರೋಧ ಪಕ್ಷದ್ದು ಹುಮ್ಮಸ್ಸಿನ ಬೆಂಬಲ.

ಕಳ್ಳನೋಟು ಚಲಾವಣೆಗೆ ಬಿಜೆಪಿ ನಾಯಕರ ನಾಯಕತ್ವ

ಬಿಜೆಪಿಯು ಕರಾವಳಿಯಲ್ಲಿ, ಮಲೆನಾಡಿನಲ್ಲಿ ಜಯಭೇರಿ ಹೊಡೆದು ಬೀಗುತ್ತಿರುವಂತೆ ಇತ್ತ ಇದರ ಕ್ರಿಮಿನಲ್ ಕೃತ್ಯದ ಪಾಲುದಾರಿಕೆಯೂ ಬಹಿರಂಗಗೊಳ್ಳುತ್ತಿದೆ. ಅಕ್ಕಿ ಹಗರಣದ ದಾಸ್ತಾನು ಇಡಲಾದ ಮಿಲ್‌ನ ಮಾಲೀಕರು ಕರ್ನಾಟಕ-ಕೇರಳ ಗಡಿ ಭಾಗದಲ್ಲಿ ಬಿಜೆಪಿಯ ಮಹಾನ್ ನಾಯಕರಿಗೆ ಆಶ್ರಯ ನೀಡಿ ಸತ್ಕರಿಸುವ ವ್ಯಕ್ತಿ ಮಾತ್ರವಲ್ಲ ಬಿಜೆಪಿಯ



ಆರ್ಥಿಕ ಸಂಪನ್ಮೂಲದ ಪ್ರಮುಖ ಕೊಂಡಿಯಾಗಿದ್ದಾರೆ. ಈಗ್ಗೆ ಎರಡು ಮೂರು ವರುಷಗಳ ಹಿಂದೆ ವಿಗ್ರಹ ಚೋರತನದ ಕಳ್ಳರಾಗಿ ಬಿಜೆಪಿ ಭಜರಂಗದಳದ ಕಾರ್ಯಕರ್ತರು ಬಂಧಿತರಾಗಿರುವಂತೆಯೇ ಜುಲೈ ತಿಂಗಳ ಕೊನೆಯ ವಾರದಲ್ಲಿ ಸುಳ್ಯದಲ್ಲಿ ಬೆಳಕಿಗೆ ಬಂದ ಕಳ್ಳ ನೋಟು ಚಲಾವಣೆಯಲ್ಲಿ ಬಿಜೆಪಿಯ ತಾಲೂಕು ಮಾಜೀ(?) ಉಪಾಧ್ಯಕ್ಷ ಮುಳಿಯ ತಿಮ್ಮಪ್ಪಯ್ಯ ಮತ್ತು ಅವರ ಮಗ ಪ್ರಶಾಂತ್ ಸೇರಿದಂತೆ ಆರು ಮಂದಿಯ ಬಂಧನವಾಗಿದೆ. (ಎಡದಿಂದ ಬಲಕ್ಕೆ 5 ನೆಯ ವ್ಯಕ್ತಿ ಪ್ರಶಾಂತ್ ಮತ್ತು ಆರನೆಯ ವ್ಯಕ್ತಿ ಮುಳಿಯ ತಿಮ್ಮಪ್ಪಯ್ಯ)

ಪೊಲೀಸು ಇಲಾಖೆ ಯೋಗ್ಯವಾದ ರೀತಿಯಲ್ಲಿ ತನಿಖೆ ನಡೆಸಿರುವ ಬಗ್ಗೆ ಅನುಮಾನಗಳು ಇವೆ. ಮಿನಿ ತೆಲಗಿಯಂತೆ ಹಲವಾರು ಲಕ್ಷ ಕೋಟಿ ರೂಪಾಯಿಗಳು ಇದರಲ್ಲಿ ಒಳಗೊಂಡಿರುವ ಸಾಧ್ಯತೆ ಇದೆ. ದೂರದ ಕಟ್ಮಂಡು, ಕೇರಳದ ಕಲ್ಲಿಕೋಟೆ ಮತ್ತು ಮುಂಬೈ ಮಹಾನಗರದಲ್ಲಿ ಸಂಪರ್ಕ ಜಾಲಗಳು ಬೆಸೆದುಕೊಂಡಿರುವ ಹಿನ್ನೆಲೆಯಲ್ಲಿ ಹಾಗೂ ಅಪರಾಧಿಗಳಿಗೆ ರಾಜಮರ್ಯಾದೆ ನೀಡಿ 'ವಿಶ್ವಕಪ್ ಗೆದ್ದ ಕ್ರೀಡಾ ತಂಡದಂತಹ ಫೋಟೋಗಳನ್ನು ನೀಡಿದ ಪೊಲೀಸು ಇಲಾಖೆ ನೀಡುವ ತನ್ನ ಮಾಮೂಲಿ ಪತ್ರಿಕಾ ಹೇಳಿಕೆ ಫೋಟೊಗಿಂತ ಭಿನ್ನವಾಗಿರುವ ಈ ತನಿಖೆಯ ಸ್ವರೂಪ ಹಲವಾರು ಸಂದೇಹಗಳಿಗೆ ಎಡೆ ಮಾಡಿ ಕೊಡುತ್ತಿದೆ. ಹೆಚ್ಚಿನ ಮಾಧ್ಯಮಗಳು ತಿಮ್ಮಪ್ಪಯ್ಯರವರನ್ನು ಬಿಜೆಪಿಯ ನಾಯಕರೆಂದಾಗಲೀ, ಮಾಜೀ ನಾಯಕರೆಂದಾಗಲೀ ಹೇಳಿಕೊಂಡಿಲ್ಲ. ಬಹುಶಃ ಕೆಲವೇ ಕೆಲವು ಮಾಧ್ಯಮಗಳಲ್ಲಿ ಮಾತ್ರ ವರದಿ ಪ್ರಕಟವಾದರೂ ಬಿಜೆಪಿಯೊಂದಿಗೆ ಸೇರಿಸಿಕೊಂಡು 'ಮಾಜೀ' ಎಂಬ ಪದ ತಕ್ಷಣದ ಸೇರ್ಪಡೆಯಾಗಿರುವ ಸಾಧ್ಯತೆ ಇದೆ. ಬಿಜೆಪಿಯಿಂದ ಪ್ರತಿಕ್ರಿಯೆ ಬಂದಿಲ್ಲ ಅಂದ ಮಾತ್ರಕ್ಕೆ ಉಳಿದ ರಾಜಕೀಯ ಮತ್ತು ಜನಾಭಿಪ್ರಾಯ ರೂಪಿಸುವ ಸಂಘ ಸಂಸ್ಥೆಗಳಿಗೆ ಇದೊಂದು ಗಂಭೀರ ವಸ್ತು 'ಆಹಾರವೇ' ಆಗಿಲ್ಲ. ಡಿವೈಎಫ್‌ಐನಿಂದ ಮಾತ್ರ ಪ್ರತಿಕ್ರಿಯೆ ಬಂದಿದೆ.

ಸದ್ಯದ ಪರಿಸ್ಥಿತಿಯಲ್ಲಿ ಸಮಗ್ರ ಸಿಬಿಐ ತನಿಖೆಯಿಂದ ಮಾತ್ರ ಈ ಅಂತರ್ ಜಾಲದ ದೇಶ ದ್ರೋಹಿ ಕೃತ್ಯ ಬಹಿರಂಗವಾಗಬಹುದು. ಆದರೆ ಇದು ಯಾರಿಗೂ ಅಷ್ಟಾಗಿ ಬೇಡವಾಗಿರುವುದು ದುಃಖದ ಸಂಗತಿ.

- ಕೃಷ್ಣಪ್ಪ ಕೊಂಚಾಡಿ

ಹೆಚ್ಚುತ್ತಿರುವ ಖೋಟಾ ನೋಟುಗಳ ಸಂಖ್ಯೆ

ನೋಟಿನ ಮುಖಬೆಲೆ	ಸಿಕ್ಕಿಬಿದ್ದ ನೋಟಿನ ಸಂಖ್ಯೆ	ಮೌಲ್ಯ	ಸಿಕ್ಕಿಬಿದ್ದ ನೋಟಿನ ಸಂಖ್ಯೆ	ಮೌಲ್ಯ
	2002-03		2001-02	
ರೂ.1000	39	39000	13	13,000
ರೂ.500	35398	17699000	53661	26830,500
ರೂ.100	172597	17259700	67168	6716,800
ರೂ.50	3488	174400	3013	150,650
ರೂ.20	34	680	72	1,440
ರೂ.10	198	1980	588	5880
ಒಟ್ಟು	211,754	354,74,760	124,515	337,18,270

2001-02 ರಲ್ಲಿ ಒಟ್ಟು 3 ಕೋಟಿ 37 ಲಕ್ಷ ರೂ. ಮೌಲ್ಯದ ಖೋಟಾ ನೋಟು ಸಿಕ್ಕಿದ್ದರೆ, 2002-03 ರಲ್ಲಿ 3 ಕೋಟಿ 51 ಲಕ್ಷ ರೂ. ಮೌಲ್ಯದ ಖೋಟಾ ನೋಟು ಸಿಕ್ಕಿದೆ. 2002-03 ರಲ್ಲಿ ಸಿಕ್ಕಿದ 100 ರೂ ಖೋಟಾ ನೋಟಿನ ಸಂಖ್ಯೆ ಹಿಂದಿನ ವರ್ಷಕ್ಕಿಂತ ಶೇ.250 ಪಾಲು ಹೆಚ್ಚಾಗಿದೆ. ಸಿಕ್ಕಿರುವ 500 ರೂ. ಖೋಟಾ ನೋಟಿನ ಸಂಖ್ಯೆಯಲ್ಲಿ ಇಳಿಮುಖವಾಗಿರುವುದರಿಂದ ಒಟ್ಟು ಮೊತ್ತದಲ್ಲಿ ತೀವ್ರ ಹೆಚ್ಚಳವಾಗಿಲ್ಲ.

ಸಿಕ್ಕಿಬಿದ್ದಿರುವ ಖೋಟಾ ನೋಟುಗಳ ಸಂಖ್ಯೆ 3 ಕೋಟಿ ರೂ. ಆದರೆ ಚಲಾವಣೆಯಲ್ಲಿರುವ ಖೋಟಾ ನೋಟಿನ ಮೊತ್ತವೆಷ್ಟಿರಬಹುದು?

- ಸಂಗ್ರಹ - ಬಿ.ಶೆಟ್ಟಿ

ವೃತ್ತಿ ಶಿಕ್ಷಣದ ಧನದಾಹಿಗಳು ವಿದ್ಯಾರ್ಥಿನಿಯನ್ನೇ ಬಲಿ ತೆಗೆದುಕೊಂಡರು

ಬೆಂಗಳೂರಿನಲ್ಲಿ ಎಸ್‌ಎಫ್‌ಐ ಬೃಹತ್ ಪ್ರತಿಭಟನೆ



'ಪ್ರತಿಭಾ'ಳನ್ನು ಬಲಿತೆಗೆದುಕೊಂಡ ವೃತ್ತಿಶಿಕ್ಷಣದ ವ್ಯಾಪಾರೀಕರಣವನ್ನು ಪ್ರತಿಭಟಿಸಿ, ವೃತ್ತಿಶಿಕ್ಷಣ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ ರೂಪಿಸಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ನೇತೃತ್ವದಲ್ಲಿ ಸಾವಿರಾರು ವಿದ್ಯಾರ್ಥಿಗಳ ಬೃಹತ್ ಪ್ರತಿಭಟನೆ.

ಕಾಮೆಡ್.ಕೆ ಉದ್ದಟತನದಿಂದ, ಸರ್ಕಾರಗಳ ನಿರ್ಲಕ್ಷತನದಿಂದ ವೃತ್ತಿ ಶಿಕ್ಷಣ ಬಿಕ್ಕಟ್ಟು ದಿನೇ ದಿನೇ ಉಲ್ಬಣಗೊಳ್ಳುತ್ತಿದೆ. ಪ್ರತಿಭಾನ್ವಿತ ವಿದ್ಯಾರ್ಥಿನಿ ಪ್ರತಿಭಾಳ ಆತ್ಮಹತ್ಯೆಗೆ ಕಾರಣವಾಗಿದೆ. ಆಳುವ ಸರ್ಕಾರಗಳು ಇಡಿಯಾಗಿ ಶಿಕ್ಷಣ ರಂಗವನ್ನು ಖಾಸಗಿ ಒಡೆತನಕ್ಕೆ, ಅನುವು ಮಾಡಿಕೊಟ್ಟಿದ್ದರ ಪರಿಣಾಮ ಇಂದು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ವೃತ್ತಿಶಿಕ್ಷಣ ಮರೀಚಿಕೆಯಾಗುವಂತಾಗಿದೆ.

ಬಹಳ ವ್ಯವಸ್ಥಿತವಾಗಿ ಕಾಮೆಡ್.ಕೆ ಸದಸ್ಯ ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳು ಪ್ರತಿದಿನ ಸರ್ಕಾರಗಳ ನಿಲುಮೆಗಳನ್ನು ತಿರಸ್ಕರಿಸಿ ಕೋರ್ಟಿಗೆ ಹೋಗುತ್ತಿವೆ. ಅತಿ ದುಬಾರಿ ಶುಲ್ಕವನ್ನು ಭರಿಸಲಾಗದೆಂದು ವಿದ್ಯಾರ್ಥಿ ಪೋಷಕರು ಆತಂಕಿಸಿದ್ದರೆ, ಲಜ್ಜೆಗೆಟ್ಟ ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳು ಮುಡಗೋಡ್ ಸಮಿತಿ ನಿಗದಿಪಡಿಸಿರುವ ಶುಲ್ಕ ಕಡಿಮೆಯಾಯಿತೆಂದು ಕೋರ್ಟಿನ ಮೆಟ್ಟಿಲನ್ನು ಹತ್ತಿವೆ. ಸೇವೆಯ ಹೆಸರಿನಲ್ಲಿ ಸರ್ಕಾರದಿಂದ ಹಲವಾರು ರೀತಿಯ (ಭೂಮಿ ಇತರೆ) ಸೌಲಭ್ಯಗಳನ್ನು ಪಡೆದು ಈಗ ವಿದ್ಯಾಸಂಸ್ಥೆಗಳನ್ನು ಉದ್ದಿಮೆಯನ್ನಾಗಿ ಖಾಸಗೀಕರಣ ಶಿಕ್ಷಣ ಸಂಸ್ಥೆಗಳು ಮಾರ್ಪಡಿಸಿಕೊಂಡಿವೆ. ರಾಜ್ಯ ಸರ್ಕಾರ ನಿಧಾನಗತಿಯಲ್ಲಿ ರಚಿಸಿರುವ ಶಾಸನದಲ್ಲಿ ಸೀಟಿನ 75-25 ರ ಅನುಪಾತವನ್ನು ಕಾಮೆಡ್.ಕೆ ತಿರಸ್ಕರಿಸಿರುವುದರಿಂದ ಆತಂಕಗೊಂಡ ವಿದ್ಯಾರ್ಥಿಗಳ ಭವಿಷ್ಯ ತೂಗುಯ್ಯಾಲೆಯಲ್ಲಿದೆ. (ಶಾಸನದಲ್ಲಿ ಶುಲ್ಕ ಏರಿಕೆ ಸಮಸ್ಯೆಗೆ ಯಾವುದೇ ಪರಿಹಾರವಿಲ್ಲ).

ಸಂಘ ಪರಿವಾರಕ್ಕೆ ಸೇರಿದ ವಿದ್ಯಾರ್ಥಿ ಸಂಘಟನೆಗಳು ಸೀಟಿ ಬಿಕ್ಕಟ್ಟಿನ ಸಮಸ್ಯೆಯನ್ನು ಸಮಗ್ರವಾಗಿ ನೋಡದೆ ರಾಜ್ಯ ಸರ್ಕಾರವೇ ಹೊಣೆ ಎಂಬಂತೆ ವಿದ್ಯಾರ್ಥಿಗಳನ್ನು ದಿಕ್ಕು ತಪ್ಪಿಸುತ್ತಿದೆ. ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಸುಪ್ರಿಂ ಕೋರ್ಟ್ ತೀರ್ಪು ಬಂದ ತಕ್ಷಣ ವಿದ್ಯಾರ್ಥಿಗಳ ಹಿತ ಚಿಂತನೆಯ ಬಗ್ಗೆ ಲಕ್ಷ್ಯವಹಿಸದೆ ಕೋರ್ಟಿನ ವಾದಕ್ಕೆ ಅನುಗುಣವಾಗಿ ಸಾಮಾಜಿಕ ನ್ಯಾಯದ ವಿರುದ್ಧ ಏಕರೂಪ ಶುಲ್ಕ ನಿಗದಿ ಜಾರಿಗೊಳಿಸಲು ಆದೇಶವಿತ್ತರು. ಸೀಟಿ ಬಿಕ್ಕಟ್ಟಿನ ಪರಿಹಾರಕ್ಕೆ ಕೇಂದ್ರೀಯ ಶಾಸನ ರಚಿಸುವುದನ್ನು ಬಿಟ್ಟು ಬಡವಿದ್ಯಾರ್ಥಿ ಸಮುದಾಯಕ್ಕೆ ಎನ್‌ಡಿಎ ಸರ್ಕಾರ ದ್ರೋಹ ಬಗೆದಾಗ ಸೊಲ್ಲೆತ್ತದಿದ್ದ ಎಬಿವಿಪಿ ಸಂಘಟನೆ ಸಮಸ್ಯೆಗಳ ಮೂಲವನ್ನು ಮರೆಮಾಚಿ ವಿದ್ಯಾರ್ಥಿ ಪೋಷಕರನ್ನು ದಾರಿ ತಪ್ಪಿಸುತ್ತಿದೆ. ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳ ಶುಲ್ಕಗಳು **ಒಮ್ಮೆಲೆ ಲಕ್ಷಗಟ್ಟಲೆ ಆದಾಗ ಚಕಾರವೆತ್ತದ ಎಬಿವಿಪಿ ಚುನಾವಣೆಯ ನಂತರ ಕ್ರಿಯಾಶೀಲವಾಗಿರುವುದು ಇದರ ಗೋಸುಂಬೆತನಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.**

ರಾಜ್ಯ ಸರ್ಕಾರ ವೃತ್ತಿಶಿಕ್ಷಣ ಸಮಸ್ಯೆಗೆ ಪರಿಹಾರ ರೂಪಿಸಲು ರಾಜಕೀಯ ಇಚ್ಛಾಶಕ್ತಿ ತೋರದೆ, ತನ್ನ ಆಡಳಿತ ಪಕ್ಷದವರೇ ಖಾಸಗಿ ಶಿಕ್ಷಣ ಸಂಸ್ಥೆಗಳ ಮಾಲಿಕರಾಗಿರುವುದರಿಂದ ನರಸತ್ತ ಸರ್ಕಾರವಾಗಿದೆ. ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ಧುರೀಣರು ನಾವು ಎಂದು ಹೇಳಿಕೊಳ್ಳುವ ಜಾತ್ಯಾತೀತ ಜನತಾದಳ ನಾಯಕರು ಮುಗುಮ್ಮಾಗಿದ್ದಾರೆ.

ಪ್ರತಿಭಾಳ ಸಾವಿಗೆ ಆಕ್ರೋಶ ತಲ್ಲಣಗೊಳಿಸಿದ ಎಸ್‌ಎಫ್‌ಐ ಪ್ರತಿಭಟನೆ

ಎಸ್‌ಎಫ್‌ಐನ ಹೋರಾಟ ಮುಂದುವರಿಕೆಯಾಗಿ ಸೀಟ ಬಿಕ್ಕಟ್ಟಿಗೆ ಶಾಶ್ವತ ಪರಿಹಾರಕ್ಕಾಗಿ ಕೇಂದ್ರೀಯ ಶಾಸನ ಜಾರಿ ಮಾಡಬೇಕೆಂದು ಬೆಂಗಳೂರು ನಗರದಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು ನಗರದ ಪ್ರಮುಖ ಕಾಲೇಜುಗಳಿಂದ ಸಾವಿರಾರು(ಐದು ಸಾವಿರಕ್ಕೂ ಅಧಿಕ) ವಿದ್ಯಾರ್ಥಿಗಳು ಬೆಂಗಳೂರಿನ ಹೃದಯಭಾಗ ಲಾಲ್‌ಬಾಗ್ ಪೂರ್ವಗೇಟಿನಿಂದ (ಬಸವನಗುಡಿ) ಹೊರಟು ಬೃಹತ್ ರ‍್ಯಾಲಿ ಕಾಮೆಡ್.ಕೆ ಶವಯಾತ್ರೆ ಮೂಲಕ ಜೆ.ಸಿ.ರಸ್ತೆಯಲ್ಲಿ ಬೃಹದಾಕಾರವಾಗಿ ರ‍್ಯಾಲಿ ನಿಯೋಜನೆಗೊಂಡಿತ್ತು. ದಂಡುದಂಡಾಗಿ ಬಂದ ರ‍್ಯಾಲಿ ಟೌನ್‌ಹಾಲ್ ಬಳಿ ಬೃಹತ್ ಸಮಾವೇಶಗೊಂಡಿತ್ತು. ವಿದ್ಯಾರ್ಥಿನಿಯರೇ ಅತ್ಯಂತ ಸಂಖ್ಯೆಯಲ್ಲಿದ್ದು ಆಕ್ರೋಶ ಮುಗಿಲು ಮುಟ್ಟುತ್ತಿತ್ತು. ಇಡೀ ಬೆಂಗಳೂರು ನಗರದ ರಸ್ತೆ ಸಂಚಾರ ಸ್ಥಗಿತಗೊಂಡಿತು. ಬೆಂಗಳೂರು ಜನತೆ ಹೋರಾಟಕ್ಕೆ ಬೆಂಬಲವೆಂಬಂತೆ ಹರಸಿದರು.

ಶುಲ್ಕ ಕಡಿತಕ್ಕೆ ನ್ಯಾಯಯುತ ಸೀಟು ಹಂಚಿಕೆಗೆ ಒಪ್ಪದೇ ಧನದಾಹಿಗಳಾಗಿ ವರ್ತಿಸುತ್ತಿರುವ ಕಾಮೆಡ್.ಕೆ ಅಧ್ಯಕ್ಷ ಜಾಲಪ್ಪನನ್ನು ಕೂಡಲೇ ಬಂಧಿಸಿ ಕ್ರಿಮಿನಲ್ ಮೊಕದ್ದಮೆ ಹೂಡಬೇಕೆಂದು ಪ್ರತಿಭಟನೆಯಲ್ಲಿ ಆಗ್ರಹಿಸಲಾಯಿತು. ಕೇಂದ್ರೀಯ ಶಾಸನ ರಚಿಸಬೇಕು, ರಾಜ್ಯ ಸರ್ಕಾರ ಸರ್ಕಾರಿ ವೈದ್ಯಕೀಯ ತಾಂತ್ರಿಕ ಪ್ರವೇಶ ಹೆಚ್ಚಳ ಹಾಗೂ ಹೊಸ ಸರ್ಕಾರಿ ವೃತ್ತಿ ಶಿಕ್ಷಣ ಕಾಲೇಜುಗಳನ್ನು ಆರಂಭಿಸಬೇಕು. ವೃತ್ತಿ ಶಿಕ್ಷಣ ಶುಲ್ಕ ಜನಸಮುದಾಯದ ಕೈಗೆಟುಕುವಂತೆ ಇರಬೇಕು.



ಪ್ರತಿಭಾಳ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು. ಸಾಮಾಜಿಕ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸರ್ಕಾರ ಶುಲ್ಕ ಭರಿಸಬೇಕು. ಮುಂತಾದ ಬೇಡಿಕೆಗಳನ್ನು ಈಡೇರಿಸಬೇಕೆಂದು ಪ್ರತಿಭಟನೆಯೊಂದಿಗೆ ಸರ್ಕಾರದ ಮೇಲೆ ಒತ್ತಡ ಹೇರಲಾಯಿತು. ಪ್ರತಿಭಟನೆಯ ಸಭೆಯನ್ನು ಉದ್ದೇಶಿಸಿ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷೆ ಕೆ.ಎಸ್.ಲಕ್ಷ್ಮಿ, ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣ ಬೆಂಗಳೂರು ಜಿಲ್ಲಾ ಅಧ್ಯಕ್ಷ ವಿ.ರಾಜಶೇಖರಮೂರ್ತಿ, ರಾಜ್ಯ ಸಹಕಾರ್ಯದರ್ಶಿ ನವೀನ್ ಹಾಗೂ ಡಿವೈಎಫ್‌ಐ ರಾಜ್ಯಾಧ್ಯಕ್ಷರಾದ ಕೆ.ಎನ್.ಉಮೇಶ್ ಹಾಗೂ ಸಮಾಜ ವಿಜ್ಞಾನಿ ಜಿ.ಎನ್.ನಾಗರಾಜ್ ಹಾಗೂ ಜೆ.ಎಂ.ಎಸ್‌ನ ಮುಖಂಡರಾದ ಗೌರಮ್ಮ ಮಾತನಾಡಿದರು. ನಂತರ ಸೀಟಿ ವಿಶೇಷಾಧಿಕಾರಿ ಡಿ.ಎಸ್.ನಾಯಕ್‌ರವರು ಪ್ರತಿಭಟನೆಯ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿದರು.

ಇದಕ್ಕೂ ಮುನ್ನ 10.08.2004 ರಂದು ಎಸ್‌ಎಫ್‌ಐ ನೇತೃತ್ವದಲ್ಲಿ ಮೈಸೂರು ಬ್ಯಾಂಕ್ ವೃತ್ತದ ಬಳಿ ರಸ್ತೆತಡೆ ಚಳುವಳಿ ನಡೆಸಲಾಯಿತು.

ವೃತ್ತಿಶಿಕ್ಷಣ ಶುಲ್ಕ ಭರಿಸಲಾಗದೆ ಸೀಟು ಸಿಗುವುದಿಲ್ಲವೆಂದು ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡ 'ಪ್ರತಿಭಾ'ಳ ಸಾವನ್ನು ವಿರೋಧಿಸಿ ಕಾಮೆಡ್.ಕೆ.ನೇರ ಹೊಣೆ ಎಂದು ಒತ್ತಾಯಿಸಿ ಎಸ್‌ಎಫ್‌ಐ ರಸ್ತೆ ತಡೆ ಚಳುವಳಿ ನಡೆಸಿತು. ಪೊಲೀಸರ ಮತ್ತು ವಿದ್ಯಾರ್ಥಿಗಳ ನಡುವೆ ಜಗ್ಗಾಟ ನಡೆದು 30 ಎಸ್‌ಎಫ್‌ಐ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಬಿಡುಗಡೆ ಮಾಡಿದರು.

- ಬಿ. ರಾಜಶೇಖರಮೂರ್ತಿ

ಬೆಂಗಳೂರು ಜಿಲ್ಲಾ ಮಹಿಳಾ ಸಮ್ಮೇಳನ

'ಕಣ್ಣೀರು ಹಾಕುವ ಕಾಲವಿದಲ್ಲ... ಸಂಘಟಿತ ಹೋರಾಟವೊಂದೇ ದಾರಿ'



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು 3ನೇ ಜಿಲ್ಲಾ ಸಮ್ಮೇಳನವನ್ನು ಆನೇಕಲ್ಲು ತಾಲ್ಲೂಕಿನ ಅತ್ತಿಬೆಲೆಯಲ್ಲಿ ಶಿಡ್ಲ ಬಸಪ್ಪ ನಂಜಮ್ಮಣ್ಣ ಕಲ್ಯಾಣ ಮಂಟಪದಲ್ಲಿ ಜುಲೈ 24-25, 2004 ರಂದು ಜರುಗಿತು. ಬೆಂಗಳೂರು ಜಿಲ್ಲೆಯ ವಿವಿಧ ಪ್ರದೇಶಗಳಿಂದ 200 ಜನ ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.

24 ರಂದು ಬೃಹತ್ ಮೆರವಣಿಗೆಯಲ್ಲಿ ಸಾವಿರಾರು ಮಹಿಳೆಯರು ಪಾಲ್ಗೊಂಡಿದ್ದರು. ಕಲ್ಯಾಣ ಮಂಟಪದ ಮುಂದೆ ನಡೆದ ಭಾರಿ ಬಹಿರಂಗ ಸಭೆಯನ್ನುದ್ದೇಶಿಸಿ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಅಧ್ಯಕ್ಷೆ ಯಶೋಧ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ರಾಜ್ಯ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಮಾತನಾಡಿದರು. ಸಭೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ವಿಮಲ ಹಾಗೂ ಇತರೇ ಜಿಲ್ಲಾ ಮುಖಂಡರು ಭಾಗವಹಿಸಿದ್ದರು.

ಎರಡು ದಿನಗಳ ಕಾಲ ಜರುಗಿದ ಈ ಸಮ್ಮೇಳನದಲ್ಲಿ ಹಲವಾರು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಸಮಾರೋಪ ಭಾಷಣ ಮಾಡಿದ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಮಲಾ. ಕೆ.ಎಸ್. 'ಯಾವುದೇ ನೋವುಗಳಿಗೆ, ಸಮಸ್ಯೆಗಳಿಗೆ ಕಣ್ಣೀರು ಹಾಕುವ ಕಾಲ ಹೊರಟುಹೋಗಿದೆ. ನಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಲು ಸಂಘಟಿತರಾಗಿ ಹೋರಾಡುವುದೊಂದೇ ದಾರಿ. ಹಳ್ಳಿ ಹಳ್ಳಿಗಳಲ್ಲಿ ಸಂಘಟನೆ ಮಾಡಿ ಹೋರಾಟಕ್ಕಿಳಿಯಿರಿ' ಎಂದು ಕರೆ ನೀಡಿದರು. ಗ್ರಾಮ ಪಂಚಾಯತಿ ನೌಕರರ ಸಂಘಟನೆಯ ಅಧ್ಯಕ್ಷರಾದ ಗೋಪಾಲಕೃಷ್ಣ ಅರಳಹಳ್ಳಿ, ಕಾರ್ಮಿಕ ಮುಖಂಡರಾದ ಪ್ರಕಾಶ್.ಕೆ, ಬಚ್ಚಪ್ಪ ಇವರುಗಳು ಶುಭ ಕೋರಿದರು. 12 ಸದಸ್ಯರ ಪದಾಧಿಕಾರಿಗಳನ್ನೊಳಗೊಂಡ 30 ಸದಸ್ಯರ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. **ನೂತನ ಕಾರ್ಯದರ್ಶಿಯಾಗಿ ಗೌರಮ್ಮ, ಅಧ್ಯಕ್ಷರಾಗಿ ಸುನಂದಾ, ಖಜಾಂಚಿಯಾಗಿ ಶ್ರೀಮತಿ ಆಯ್ಕೆಗೊಂಡರು. ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳು**

- ಮಹಿಳೆಯರಿಗೆ ಉದ್ಯೋಗವಕಾಶ ಹೆಚ್ಚಳ
- ನಾಗರೀಕ ಸೌಲಭ್ಯಗಳಿಗೆ
- ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಲು ಒತಾಯಿಸಿ
- ಆನ್‌ಲೈನ್ ಲಾಟರಿ ನಿಷೇಧಕ್ಕೆ ಸ್ವಾಗತ
- ಕೌಟುಂಬಿಕ ದೌರ್ಜನ್ಯ ತಡೆ ಮಸೂದೆ ಜಾರಿಗೆ ಒತ್ತಾಯ
- ಕಾವೇರಿ ನೀರಿಗೆ ವಸೂಲಿ ಮಾಡುತ್ತಿರುವ ವಂತಿಗೆ ಶುಲ್ಕ ವಾಪಸ್ಸಿಗೆ ಆಗ್ರಹಿಸಿ
- ನಗರ ಜಿಲ್ಲೆಯ ಸ್ತ್ರೀ ಶಕ್ತಿ ಯೋಜನೆ ಮಹಿಳೆಯರಿಗೆಲ್ಲರಿಗೂ ಗ್ಯಾಸ್ ಸೌಲಭ್ಯಕ್ಕೆ ಒತ್ತಾಯಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಭಾರತ ನವಚೇತನಗೊಳ್ಳಲು ‘ನಾವು ಜನರೊಂದಿಗೇ...’

ಸಿಪಿಐ(ಎಂ) ಪುನರುಚ್ಚಾರ

ರಾಷ್ಟ್ರಮಟ್ಟದ ರಾಜಕೀಯ ಪ್ರಚಾರ ಸಿಪಿಐ(ಎಂ) ನಿರ್ಧಾರ

ಜುಲೈ 30 ರಿಂದ ಅಗಸ್ಟ್ 1 ರವರೆಗೆ ನವದೆಹಲಿಯಲ್ಲಿ ಸಭೆ ಸೇರಿದ್ದ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯು ಇಂದಿನ ರಾಜಕೀಯ ವಿದ್ಯಮಾನಗಳನ್ನು ಅವಲೋಕಿಸಿದ್ದು ಅಗಸ್ಟ್ 25 ರಿಂದ 31ರವರೆಗೆ ರಾಷ್ಟ್ರಮಟ್ಟದ ರಾಜಕೀಯ ಪ್ರಚಾರ ನಡೆಸಲು ನಿರ್ಧರಿಸಿದೆ.

ಸೆಪ್ಟೆಂಬರ್ 1 ನ್ನು ‘ಸಾಮ್ರಾಜ್ಯಶಾಹಿ - ವಿರೋಧಿ, ಯುದ್ಧವಿರೋಧಿ’ ದಿನವನ್ನಾಗಿ ಆಚರಿಸಬೇಕೆಂದೂ ಕರೆ ನೀಡಿದ್ದ ಸಿಪಿಐ(ಎಂ) ಕೇಂದ್ರಸಮಿತಿಯ ಪತ್ರಿಕಾ ಹೇಳಿಕೆಯ ಸಾರಾಂಶವು ಈ ಕೆಳಗಿನಂತಿದೆ.

ತಡೆ ಒಡ್ಡುವ ಬಿಜೆಪಿ ಕುತಂತ್ರ: 14ನೇ ಲೋಕಸಭಾ ಚುನಾವಣೆಯ ನಂತರದಲ್ಲಿ ಸಂಸತ್ತಿನ ಪ್ರಥಮ ಅಧಿವೇಶನದ ಸಂದರ್ಭದಲ್ಲಿ ಬಿಜೆಪಿ ನಡೆಸಿದ ಜಗಳಗಂಟಿ ವರ್ತನೆಯನ್ನು ಸಿಪಿಐ(ಎಂ) ಕೇಂದ್ರಸಮಿತಿ ಖಂಡಿಸಿದೆ. ರಾಷ್ಟ್ರಪತಿ ಭಾಷಣದ ಸಂದರ್ಭದಲ್ಲೇ ಚರ್ಚೆಗೆ ಅವಕಾಶ ನೀಡದ ಬಿಜೆಪಿ ಮತ್ತು ಮೈತ್ರಿ ಪಕ್ಷಗಳು ಸಂಸತ್ತಿನ ವಿವಿಧ ಸಮಿತಿಗಳನ್ನು ಬಹಿಷ್ಕರಿಸುವ ಕರೆ ನೀಡಿದವು. ಸ್ಥಾಯಿ ಸಮಿತಿಗಳನ್ನು ರಚಿಸುವುದು ಸಂಸತ್ತು, ಸರಕಾರವಲ್ಲ. ಆದರೂ ಕೂಡಾ ಸರಕಾರದ ವಿರುದ್ಧದ ಪ್ರತಿಭಟನೆಯ ಹೆಸರಿನಲ್ಲಿ ಚುನಾವಣೆಯಲ್ಲಿ ತನಗಾದ ಸೋಲಿನ ಆಘಾತದಿಂದ ಹೊರಬರಲು ಬಿಜೆಪಿಗೆ ಸಾಧ್ಯವಾಗದೆ, ಪ್ರಜಾಪ್ರಭುತ್ವ ನಿಯಮಗಳಿಗೆ ಮಾರಕವಾಗಿ ವರ್ತಿಸುತ್ತಿದೆ.

ಇತ್ತೀಚೆಗೆ ಮುಂಬೈನಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಪಕ್ಷವನ್ನು ಪುನರ್ ಸಂಘಟಿಸಲು ಆರ್‌ಎಸ್‌ಎಸ್ ನ್ನು ಅವಲಂಬಿಸ ಬೇಕೆಂದೂ ‘ಹಿಂದುತ್ವ’

ಉನ್ನತ ಶಿಕ್ಷಣದಲ್ಲಿನ ಗೊಂದಲ- ಕೇಂದ್ರ ಶಾಸನ ಅಗತ್ಯ

ಸುಪ್ರಿಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಬಹುತೇಕ ರಾಜ್ಯಗಳಲ್ಲಿ ಖಾಸಗೀ ವೃತ್ತಿಪರ ಕಾಲೇಜುಗಳಿಗೆ ಸೇರ್ಪಡೆ ಮತ್ತು ಶುಲ್ಕಗಳಲ್ಲಿ ತೀವ್ರ ಗೊಂದಲ ಉಂಟಾಗಿದೆ. ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಶೇ.50 ರಷ್ಟು ಸೀಟುಗಳನ್ನು ನೀಡಬೇಕೆಂದು ನ್ಯಾಯಾಲಯವು ಆದೇಶಿಸಿರುವುದರಿಂದ, ಖಾಸಗಿ ಕಾಲೇಜುಗಳಲ್ಲಿ ಆಡಳಿತವು ಅತೀ ಹೆಚ್ಚು ಶುಲ್ಕದೊಂದಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುತ್ತಿದೆ. ಉನ್ನತ ಶಿಕ್ಷಣಕ್ಕೆ ಬೇಕಾದ ಶುಲ್ಕವನ್ನು ತೆರಲಾಗದೆ, ಬ್ಯಾಂಕಿನಿಂದ ಸಾಲವನ್ನು ಪಡೆಯಲಾಗದೆ ಕೇರಳದ 22 ವರ್ಷದ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆಯಲ್ಲಿ, ವಿದ್ಯಾರ್ಥಿ ಚಳುವಳಿ ತೀವ್ರಗೊಂಡಿದೆ. ಇತರೆ ರಾಜ್ಯಗಳಲ್ಲೂ ವಿದ್ಯಾರ್ಥಿಗಳು ಮತ್ತು ಪೋಷಕರು ಚಳುವಳಿ ಮಾರ್ಗ ಹಿಡಿದಿದ್ದಾರೆ. ಆದ್ದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಹಿಡಿತ ಸಾಧಿಸಲು ಹಾಗೂ ಉನ್ನತ ಶಿಕ್ಷಣದಲ್ಲಿ ಶುಲ್ಕ ಮತ್ತು ಪ್ರವೇಶವನ್ನು ವ್ಯವಸ್ಥಿತವಾಗಿ ಸಿಗದಿಪಡಿಸಲು ಕೇಂದ್ರ ಶಾಸನದ ಅಗತ್ಯ ಇದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

14ನೇ ಲೋಕಸಭಾ ಚುನಾವಣಾ ಫಲಿತಾಂಶ ದೇಶದ ರಾಜಕೀಯ ಇತಿಹಾಸದಲ್ಲಿ ಮಹತ್ವದ ಬೆಳವಣಿಗೆ. ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಜಾತ್ಯತೀತ ಶಕ್ತಿಗಳ ಐಕ್ಯತೆಯನ್ನು ಮೆರೆದ ಸಾಧನೆ. ಆ ನಂತರದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರದ ಸಾಧಕ-ಬಾಧಕಗಳು, ಪ್ರಜಾಸತ್ತಾತ್ಮಕ ರೀತಿಯಲ್ಲಿ ಕಾರ್ಯವೆಸಗಲು ಬಿಜೆಪಿ ಮತ್ತು ಮೈತ್ರಿಕೂಟದ ನಿರಾಕರಣೆ, ಕೋಮುವಾದಿ ಅಜೆಂಡಾವನ್ನು ಪುನಃ ಕೈಗೆತ್ತಿಕೊಳ್ಳುವ ಸೂಚನೆ ಇತ್ಯಾದಿಗಳ ಹಿನ್ನೆಲೆಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ಸೇರಿದ್ದು ಹಲವಾರು ಪ್ರಮುಖ ಅಂಶಗಳನ್ನು ಚರ್ಚಿಸಿ. ನಿರ್ಣಯ ಕೈಗೊಂಡಿದೆ.

ಅಜೆಂಡಾವನ್ನು ಪುನಃ ಕೈಗೆತ್ತಿಕೊಳ್ಳಬೇಕೆಂದೂ ನಿರ್ಧರಿಸಿದೆ. ಆದ್ದರಿಂದ ಕೋಮುವಾದಿ ಕಾರ್ಯಕ್ರಮಗಳ ಮೂಲಕ ತನ್ನ ರಾಜಕೀಯ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಬಿಜೆಪಿ ಪ್ರಯತ್ನಿಸುವುದರಿಂದ ಕೋಮು ಗಲಭೆಗಳಿಗೆ ದಾರಿ ಮಾಡಿಕೊಡುತ್ತದೆ. ತಮ್ಮ ದೈನಂದಿನ ಜೀವನದ ಬಗ್ಗೆ ಚಿಂತಿಸುತ್ತಿರುವ ಜನಸಾಮಾನ್ಯರಿಗೆ ಇದರಿಂದ ನಷ್ಟವುಂಟಾಗಲಿದ್ದು, ಇಂತಹ ಕುಕೃತ್ಯಗಳ ವಿರುದ್ಧ ಹಾಗೂ ಜನತೆಯ ಐಕ್ಯತೆ ಯನ್ನು ಕಾಪಾಡಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಪ್ರಯತ್ನಿಸಬೇಕಾಗಿದೆ.

ಯುಪಿಎ ಸರಕಾರದ ನೀತಿಗಳು : ಬಿಜೆಪಿ ನೆತೃತ್ವದ ಸರಕಾರದಲ್ಲಿ 6 ವರ್ಷಗಳ ಆಡಳಿತದಲ್ಲಿ ಸಂಕಷ್ಟಕ್ಕೊಳಗಾದ ಜನಸಾಮಾನ್ಯರಿಗೆ ಪರಿಹಾರ ನೀಡುವಲ್ಲಿ ಸಾಮಾನ್ಯ ಕನಿಷ್ಟ ಕಾರ್ಯಕ್ರಮ (ಸಿಎಂಪಿ)ದ ಅಂಶಗಳನ್ನು ಜಾರಿಗೊಳಿಸಬೇಕು. ಕೃಷಿಗೆ ಆದ್ಯತೆ, ರೈತರಿಗೆ ಪರಿಹಾರ, ಉದ್ಯೋಗಾವಕಾಶಗಳ ಹೆಚ್ಚಳ, ಶಿಕ್ಷಣ ಮತ್ತು ಆರೋಗ್ಯಕ್ಕೆ ಒತ್ತು, ಕರಾಳ ಪೋಟಾ ಕಾಯಿದೆಯ ವಾಪಸಾತಿ, ಕೇಂದ್ರ-ರಾಜ್ಯ ಆರ್ಥಿಕ ಸಂಬಂಧಗಳಲ್ಲಿನ ತಾರತಮ್ಯವನ್ನು ಹೋಗಲಾಡಿಸುವುದು. ಇತ್ಯಾದಿ ಅಂಶಗಳಿಗೆ ಪ್ರಥಮ ಪ್ರಾಶಸ್ತ್ಯವನ್ನು ನೀಡಬೇಕಾಗಿದ್ದು ಈ ನಿಟ್ಟಿನಲ್ಲಿ ಎಡಪಕ್ಷಗಳು ಮತ್ತು ಯುಪಿಎ ಸರಕಾರದೊಂದಿಗೆ ಸಮನ್ವಯ ಸಮಿತಿಯನ್ನು ರಚಿಸುವ ಅಗತ್ಯತೆಯನ್ನು ಕೇಂದ್ರ ಸಮಿತಿ ಹೇಳಿದ್ದು ಈಗ ಅದರ ರಚನೆಯಾಗಲಿದೆ.

ಬರ ಮತ್ತು ಪ್ರವಾಹ: ರಾಜಸ್ಥಾನ, ಪಂಜಾಬ್, ಹಿಮಾಚಲಪ್ರದೇಶ, ಹರಿಯಾಣ, ಗುಜರಾತ್, ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರ, ಬಂಗಾಳ, ಕರ್ನಾಟಕ ಮತ್ತು ಉತ್ತರಪ್ರದೇಶದ ಕೆಲವು ಭಾಗಗಳು ಬರಕ್ಕೆ ತುತ್ತಾಗಿದ್ದು ಬೆಳೆನಷ್ಟವಾಗಿದೆ. ಇಂತಹ ಪ್ರದೇಶಗಳಲ್ಲಿ ಕುಡಿಯುವ ನೀರು, ಮೇವು, ಕೂಲಿಗಾಗಿ ಕಾಳು ಯೋಜನೆ, ಬಡವರಿಗೆ ಅಂತ್ಯೋದಯದರದಲ್ಲಿ ಆಹಾರ ಸಾಮಗ್ರಿ ಇತ್ಯಾದಿಗಳನ್ನು ಒದಗಿಸಬೇಕು.


ಅಂತೆಯೇ ಅಸ್ಸಾಂ, ಅರುಣಾಚಲಪ್ರದೇಶ, ಬಿಹಾರ ಮೊದಲಾದ ರಾಜ್ಯಗಳು ತೀವ್ರ ಪ್ರವಾಹಕ್ಕೆ ತುತ್ತಾಗಿದ್ದು ಕೇಂದ್ರ ಸರಕಾರವು ಒದಗಿಸಿದ ಪರಿಹಾರ ನಿಧಿಯು ಯಾವುದಕ್ಕೂ ಸಾಲದು ಎನ್ನುವಂತಾಗಿದೆ.

ಪದೇ ಪದೇ ಉಂಟಾಗುತ್ತಿರುವ ಪ್ರವಾಹವನ್ನು ನಿಯಂತ್ರಿಸಲು ಕಾರ್ಯಪಡೆಯನ್ನು ರಚಿಸುವುದಾಗಿ ಪ್ರಧಾನಿ ಘೋಷಿಸಿದ್ದು ಕಾರ್ಯಪಡೆಯ ಶಿಫಾರಸ್ಸುಗಳನ್ನು ಜಾರಿಗೊಳಿಸುವತ್ತ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

ಕೆಲವೊಂದು ಆರ್ಥಿಕ ನೀತಿಗಳ ಕುರಿತಾಗಿ : ಟೆಲಿಕಾಂ, ವಿಮೆ ಮತ್ತು ವಿಮಾನಯಾನ ಕ್ಷೇತ್ರಗಳಲ್ಲಿ ವಿದೇಶಿ ಬಂಡವಾಳವನ್ನು ವಿರೋಧಿಸಿದ ಸಿಪಿಐ(ಎಂ) ದೇಶದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ ವಿಮಾ ಕ್ಷೇತ್ರವನ್ನು ವಿದೇಶಿ ಖಾಸಗಿ ಕಂಪನಿಗಳಿಗೆ ವಹಿಸಬಾರದು ಎಂದು ಒತ್ತಾಯಿಸಿದೆ. ಟೆಲಿಕಾಂ ಕ್ಷೇತ್ರದಲ್ಲಿ ಶೇ.74 ರಷ್ಟು

ಆಗಸ್ಟ್ 25 ರಿಂದ 31 - ಪ್ರಚಾರಾಂದೋಲನ

ಸೆ. 1 ಸಾಮ್ರಾಜ್ಯಶಾಹಿ ವಿರೋಧಿ ದಿನ



ವಿದೇಶಿ ಬಂಡವಾಳ ಹೊಂದುವುದನ್ನು ವಿರೋಧಿಸಿದೆ.

ಕನಿಷ್ಟ ಕಾರ್ಯಕ್ರಮದಲ್ಲಿ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಲಾಗುವುದಿಲ್ಲ ಎಂಬ ಭರವಸೆಯನ್ನು ನೀಡಿದುದನ್ನು ನೆನಪಿಸಿದ ಕೇಂದ್ರ ಸಮಿತಿ, ಮುಂಬೈ ಮತ್ತು ದೆಹಲಿ ವಿಮಾನ ನಿಲ್ದಾಣಗಳನ್ನು ಹಾಗೂ ಜವಾಹರ್‌ಲಾಲ್ ನೆಹರು ಬಂದರನ್ನು ಖಾಸಗೀಕರಣಗೊಳಿಸುವುದನ್ನು ವಿರೋಧಿಸಿದೆ.

ಡಿಸೇಲ್ ಮತ್ತು ಪೆಟ್ರೋಲ್ ಬೆಲೆ ಏರಿಕೆ ವಿರುದ್ಧ: ತೈಲಕ್ಷೇತ್ರದಲ್ಲಿ ಆಮದು ಮತ್ತು ಅಬಕಾರಿ ತೆರಿಗೆಗಳನ್ನು ಕಡಿತಗೊಳಿಸಬೇಕೆಂಬ ಎಡಪಕ್ಷಗಳ ಒತ್ತಾಯವನ್ನು ಕೇಂದ್ರಸರಕಾರವು ಪರಿಗಣಿಸಿಲ್ಲ. ಜಾಗತಿಕ ಮಟ್ಟದಲ್ಲಿ ತೈಲಬೆಲೆ ಏರಿದಂತೆ ಬೆಲೆ ಏರಿಸುವ ನಿರ್ಧಾರದಿಂದ ಗ್ರಾಹಕರಿಗೆ ತೊಂದರೆಯಾಗುತ್ತಿದ್ದು ತೈಲ ಕಂಪನಿಗಳ ಲಾಭ ಮಾತ್ರ ಹೆಚ್ಚುತ್ತಿದೆ. 15 ದಿನಗಳಿಗೊಮ್ಮೆ ಬೆಲೆ ಹೆಚ್ಚು ಕಡಿಮೆ ಮಾಡುವ ನಿರ್ಧಾರದಿಂದ ಇತ್ತೀಚೆಗೆ ಪೆಟ್ರೋಲಿಗೆ ಲೀಟರ್‌ಗೆ ರೂ.1.10 ಮತ್ತು ಡೀಸೆಲ್‌ಗೆ 1.42 ರಂತೆ ಏರಿಸಲಾಗಿದ್ದು ಕಳೆದ 6 ವಾರಗಳಲ್ಲಿ 2ನೇ ಬಾರಿಗೆ ಹೆಚ್ಚಿಸಲಾಗಿದೆ.

ಜನಸಾಮಾನ್ಯರ ಹೊರೆಯನ್ನು ಹೆಚ್ಚಿಸಲಿರುವ ಹಾಗೂ ಹಣದುಬ್ಬರಕ್ಕೆ ಕಾರಣವಾಗಲಿರುವ ಬೆಲೆ ಹೆಚ್ಚಳದ ವಿರುದ್ಧ ಎಲ್ಲೆಡೆ ಪ್ರತಿಭಟನೆ ನಡೆಸಬೇಕೆಂದು ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಮಣಿಪುರ ಘಟನೆ : ಭದ್ರತಾಪಡೆಯವರು ಬಂಧಿಸಿದ ಮಹಿಳೆಯೋರ್ವರು ಕೊಲೆಯಾದ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಪ್ರತಿಭಟನೆಗಳು ನಡೆಯುತ್ತಿದ್ದು ಕೇಂದ್ರ ಸರಕಾರವು ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಸೂಕ್ತಕ್ರಮ ಕೈಗೊಳ್ಳಬೇಕಾಗಿದೆ. ಮಣಿಪುರದ ಕಾಂಗ್ಲಾದಲ್ಲಿರುವ ಅಸ್ಸಾಂ ರೈಫಲ್‌ನ ಕೇಂದ್ರ ಕಛೇರಿಯನ್ನು ಬೇರೆಡೆಗೆ ಸ್ಥಳಾಂತರಿಸುವುದು; ಜನರ ದೈನಂದಿನ ಕೆಲಸಗಳಿಗೆ ತೊಂದರೆಯಾಗದಂತೆ ಸೇನಾ ಪಡೆಯ ವಿಶೇಷ ಅಧಿಕಾರ ಕಾಯಿದೆಯನ್ನು ತಿದ್ದುಪಡಿ ಮಾಡುವುದು ಹಾಗೂ ಬಂಡಾಯಗುಂಪುಗಳೊಂದಿಗೆ ಮಾತುಕತೆ

ಪಕ್ಷದ ಮಹಾಧಿವೇಶನ

ಪಕ್ಷದ 18ನೇ ಅಖಿಲ ಭಾರತ ಮಹಾಧಿವೇಶನ ಏಪ್ರಿಲ್ 2005 ರಲ್ಲಿ ನವದೆಹಲಿಯಲ್ಲಿ ನಡೆಯಲಿದ್ದು ಸೆಪ್ಟೆಂಬರ್ ತಿಂಗಳಿನಿಂದ ಶಾಖಾಮಟ್ಟದ ಸಮ್ಮೇಳನಗಳನ್ನು ಆರಂಭಿಸಲು ಸೂಚಿಸಿದೆ.

ನಡೆಸುವುದು ಅಗತ್ಯ.

ಮಹಾರಾಷ್ಟ್ರ ಚುನಾವಣೆ : ಅಕ್ಟೋಬರ್ ತಿಂಗಳಲ್ಲಿ ನಡೆಯಲಿರುವ ಮಹಾರಾಷ್ಟ್ರ ಚುನಾವಣೆಯಲ್ಲಿ ಬಿಜೆಪಿ - ಶಿವಸೇನಾ ಕೂಟವನ್ನು ಸೋಲಿಸಲು ಅನುಕೂಲ ವಾಗುವಂತೆ ಜಾತ್ಯಾತೀತ ಪಕ್ಷಗಳ ಮತಗಳು ಹಂಚಿ ಹೋಗದಂತೆ ಚುನಾವಣಾ ತಂತ್ರವನ್ನು ರೂಪಿಸ ಬೇಕೆಂದು ಪಕ್ಷವು ನಿರ್ಧರಿಸಿದೆ.

ಲೋಕಸಭಾ ಚುನಾವಣೆ ವಿಮರ್ಶೆ: 14ನೇ ಲೋಕಸಭಾ ಚುನಾವಣೆಯನ್ನು ವಿಮರ್ಶಿಸಿ ವರದಿಯನ್ನು ಅಂಗೀಕರಿಸಿದ ಕೇಂದ್ರಸಮಿತಿಯು ವಿವಿಧ ರಾಜ್ಯಗಳಲ್ಲಿ ಪಕ್ಷದ ಸಾಧನೆಯ ಕುರಿತು ಚರ್ಚಿಸಿದೆ. ಪಕ್ಷ ಮತ್ತು ಸಾಮೂಹಿಕ ಸಂಘಟನೆ ಗಳನ್ನು ಬೆಳೆಸಲು ಹಲವು ಸಂಘಟನಾ ಕ್ರಮಗಳನ್ನು ಸೂಚಿಸಿದ್ದು, ಬುಡಕಟ್ಟು ಜನರ ನಡುವೆ ಪಕ್ಷವನ್ನು ಕಟ್ಟಲು ವಿಶೇಷ ಗಮನ ನೀಡಬೇಕೆಂದು ಅಭಿಪ್ರಾಯ ಪಟ್ಟಿದೆ.

ಪಕ್ಷದ ಸ್ವತಂತ್ರ ಪಾತ್ರ: ಜನರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಾ ಎಡ ಮತ್ತು ಪ್ರಜಾಸತ್ತಾತ್ಮಕ ಕಾರ್ಯಕ್ರಮಗಳ ಆಧಾರದಲ್ಲಿ ಪರ್ಯಾಯ ನೀತಿಗಳನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಪಕ್ಷವು ಸ್ವತಂತ್ರ ಪಾತ್ರವನ್ನು ಗಟ್ಟಿಗೊಳಿಸಬೇಕೆಂದೂ ಕನಿಷ್ಟ ಕಾರ್ಯಕ್ರಮದಲ್ಲಿರುವ ಜನಪರ ನೀತಿಗಳನ್ನು ಜ್ಯಾರಿಗೊಳಿಸಲು ಒತ್ತಾಯಿಸಬೇಕೆಂದೂ ಪಕ್ಷವು ನಿರ್ಧರಿಸಿದೆ.

ಜನರ ಜೀವನ ಮತ್ತು ಪ್ರಜಾಪ್ರಭುತ್ವ ಹಕ್ಕುಗಳಿಗೆ ಧಕ್ಕೆ ಬರುವ ಅಂಶಗಳನ್ನು ಗುರುತಿಸಿ ಚಳುವಳಿಯನ್ನು ರೂಪಿಸಬೇಕೆಂದು ರಾಜ್ಯ ಸಮಿತಿಗಳಿಗೆ ಕರೆ ನೀಡಿದೆ.

ರಾಷ್ಟ್ರಮಟ್ಟದ ಪ್ರಚಾರಕ್ಕೆ ಕರೆ : ಪಕ್ಷದ ರಾಜಕೀಯ ಸಂದೇಶ ಮತ್ತು ನೀತಿಗಳ ಕುರಿತು ಜನರಿಗೆ ಮನದಟ್ಟು ಮಾಡಲು **ಅಗಸ್ಟ್ 25 ರಿಂದ 31 ರವರೆಗೆ** ರಾಜಕೀಯ ಪ್ರಚಾರ ಸಪ್ತಾಹವನ್ನು ಆಚರಿಸಬೇಕೆಂದು ತನ್ನ ಘಟಕಗಳಿಗೆ ಕರೆ ನೀಡಿದೆ

ಪುಟ 11 ಕ್ಕೆ



ಸ್ವಾತಂತ್ರ್ಯ ದಿನಾಚರಣೆಯಂದು ದೆಹಲಿಯ ಕೆಂಪು ಕೋಟೆಯ ಮೇಲಿನಿಂದ ಪ್ರಧಾನಿಯವರು ಭಾಷಣ ಮಾಡುವುದು ನಡೆದುಬಂದಿರುವ ರೂಢಿ. ಆದರೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ನೆಲ ಹಲವು ಮಹಾನ್ ಘಟನೆಗಳು ಸ್ಫೂರ್ತಿಯ ನೆಲೆಯಾಗಿತ್ತೆಂಬುದು ಬಹಳಷ್ಟು ಜನರಿಗೆ ಗೊತ್ತೇ ಇಲ್ಲ. ಸ್ವಾತಂತ್ರ್ಯ ಪಡೆದ ಬ್ರಿಟಿಷ್ ವಸಾಹತುಶಾಹಿಗಳಿಂದ ಭಾರತ ಹೇಗೆ ಸ್ವಾತಂತ್ರ್ಯ ಪಡೆಯಿತು? ಆಧುನಿಕ ಭಾರತ ಸಾಗಿಬಂದ ಹಾದಿ - ಮತ್ತು ಸವಾಲಿನ ಸಂದರ್ಭಗಳನ್ನು ಕೂಲಂಕುಶವಾಗಿ ಅವಲೋಕಿಸಿದ್ದಾರೆ ಹಿರಿಯ ಸಂಗಾತಿ ಸುರ್ಜಿತ್‌ರವರು.

ಆಗಸ್ಟ್ 15 : ಆತ್ಮಾ

ಈ ಸಂಚಿಕೆ ತಲುಪುವ ವೇಳೆಗೆ ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್ ಕೆಂಪುಕೋಟೆಯಿಂದ ತಮ್ಮ ಮೊದಲ ಭಾಷಣ ಮಾಡಿರುತ್ತಾರೆ. ಈ ಕೆಂಪುಕೋಟೆ ನಮ್ಮ ಸ್ವಾತಂತ್ರ್ಯ ಹೋರಾಟದ ಇತಿಹಾಸದ ಪುಟಗಳಲ್ಲಿ ತನ್ನದೇ ಆದ ಒಂದು ಸ್ಥಾನವನ್ನು ಪಡೆದಿದೆ. ಯಾಕೆಂದರೆ ಕೊನೆಯ ಮೊಗಲ ಬಾದಶಹ ಬಹದೂರ್ ಶಹಾ ಜಫರ್ ಇಲ್ಲಿಂದಲೇ ಮೇ 11, 1857 ರಂದು ಸಿಪಾಯಿಗಳನ್ನುದ್ದೇಶಿಸಿ ಮಾತನಾಡಿ ಮೊದಲ ಸ್ವಾತಂತ್ರ್ಯ ಯುದ್ಧಕ್ಕೆ ಪ್ರೇರಣೆ ನೀಡಿದ. ನಂತರ 1945 ರಲ್ಲಿ ಇಲ್ಲೇ ಅಝಾದ್ ಹಿಂದ್ ಫೌಜಿನ (ಐಎನ್‌ಎ) ಮೂವರು ಸೇನಾನಿಗಳು (ಸೆಹಗಲ್, ಶಾಹನವಾಜ್ ಮತ್ತು ಧಿಲ್ಲೋಂ) ವಿಚಾರಣೆಯನ್ನು ಬ್ರಿಟಿಷರು ನಡೆಸಿದರು. ಈ ವಿಚಾರಣೆ ಇಡೀ ದೇಶದಲ್ಲಿ ವಿದ್ಯುತ್ ಸಂಚಾರ ತಂದಿತು. ಪ್ರತಿದಿನ ಸಾವಿರ ಸಾವಿರ ಸಂಖ್ಯೆಯಲ್ಲಿ ಜನ ಕೆಂಪುಕೋಟೆಯ ಮೈದಾನದಲ್ಲಿ ಸೇರಿ ಐಎನ್‌ಎ ವೀರರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂದು ಕ್ರೋಧಭರಿತ ಘೋಷಣೆಗಳನ್ನು ಹಾಕಿದರು. ಜನರ ಒತ್ತಡ ಪ್ರಮಾಣದಿತ್ತೆಂದರೆ ನೆಹರೂ ದೀರ್ಘಕಾಲದ ನಂತರ ವಕೀಲರ ಕೋಟು ಧರಿಸಿ ಅವರ ರಕ್ಷಣೆಗಿಳಿದರು. ಇದು ಬ್ರಿಟಿಷ್ ಆಳ್ವಿಕೆಯನ್ನು ಇನ್ನು ಮುಂದೆ ಸಹಿಸಲು ಭಾರತೀಯ ಜನಸಮೂಹಗಳು ಸಿದ್ಧರಿರಲಿಲ್ಲ ಎಂಬುದರ ಸಂಕೇತವಾಗಿತ್ತು. ಹೌದು, ಅವರು ಅಂತಿಮವಾಗಿ ಬ್ರಿಟಿಷರು ಐಎನ್‌ಎ ವೀರರನ್ನು ಬಿಡುಗಡೆ ಮಾಡುವಂತೆ ಮಾಡಿಯೇ ಬಿಟ್ಟರು.

ಅಷ್ಟೇ ಅಲ್ಲ, ಈ ಐಎನ್‌ಎ ವೀರರಲ್ಲಿ ಒಬ್ಬರು ಹಿಂದೂ, ಇನ್ನೊಬ್ಬರು ಮುಸ್ಲಿಂ ಹಾಗೂ ಮೂರನೇಯವರು ಸಿಖ್ಖರಾಗಿದ್ದು ಭಾರತದ ನಿಜವಾದ ಚೈತನ್ಯದ ಒಂದು ಮಹತ್ವದ ಸಂಕೇತವಲ್ಲದೆ ಮತ್ತೇನೂ ಇಲ್ಲ. ಅದೊಂದು ಆನಂದಮಯ ಆಕಸ್ಮಿಕವಷ್ಟೇ ಆಗಿದ್ದರೂ, ಖಂಡಿತಾ ಅದು ವೈವಿಧ್ಯತೆಯಲ್ಲಿನ ನಮ್ಮ ಮೂಲಭೂತ ಐಕ್ಯತೆಯನ್ನು ಎತ್ತಿ ಹಿಡಿಯಲು ಜನತೆಗೆ ಕುಮ್ಮಕ್ಕು ನೀಡಿತು. ಇದೇ ರೀತಿಯ ವೈವಿಧ್ಯತೆಯಲ್ಲಿನ ಐಕ್ಯತೆಯಲ್ಲಿನ ಇನ್ನೊಂದು ಘಟನೆಯೆಂದರೆ ಇದಾದ ಸ್ವಲ್ಪ ದಿನಗಳಲ್ಲೇ ನಡೆದ ನಾವಿಕ ಬಂಡಾಯ. ಈ ಬಂಡಾಯ ಬ್ರಿಟಿಷರಿಗೆ ತಮ್ಮ ಕೊನೆಯ ದಿನಗಳು ಸಮೀಪವಾಗಿದೆ ಎಂಬುದು ಮನದಟ್ಟು ಮಾಡಿಸಿತು.

ಮೈಲಿಗಲ್ಲು

ಆಗಸ್ಟ್ 1847 ರಲ್ಲಿ ಭಾರತದ ಸ್ವಾತಂತ್ರ್ಯ ಇತಿಹಾಸದ ಒಂದು ಪ್ರಮುಖ ಮೈಲಿಗಲ್ಲಾಯಿತು. ಎರಡನೇ ಮಹಾಯುದ್ಧ ಫ್ಯಾಸಿಸಂ ಬೆದರಿಕೆಯನ್ನು ಧ್ವಂಸ ಮಾಡಿತಲ್ಲದೆ, ಹಳೆಯ ಸಾಮ್ರಾಜ್ಯಶಾಹಿಯನ್ನು ಎಷ್ಟು ದುರ್ಬಲಗೊಳಿಸಿತೆಂದರೆ ಅವುಗಳು ತಮ್ಮ ವಸಾಹತುಗಳನ್ನು ಉಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಹೀಗೆ ಅವರು ವಸಾಹುತಗಳಲ್ಲೇ ಅತಿದೊಡ್ಡದಾದ ಭಾರತವನ್ನು ಬಿಟ್ಟುಹೋಗಬೇಕಾಯಿತು. ಇದು ಒಂದು ಸರಣಿ ಪ್ರಕ್ರಿಯೆಯನ್ನೇ ಆರಂಭಿಸಿತು. ಹಲವಾರು ದೇಶಗಳು ಸಾಮ್ರಾಜ್ಯಶಾಹಿಯ ಸಂಕೋಲೆಗಳನ್ನು ಮುರಿದವು.

ಭಾರತದ ಬೆಂಬಲ ಕೂಡಾ ವಿಶ್ವದ್ಯಂತ ಮಾಡುವಲ್ಲಿ ನಮ್ಮ ಪಾತ್ರ ಎಲ್ಲರಿಗೂ ತಿಳಿದಿದೆ. ನಿಜ ಸಂಗತಿಯೆಂದರೆ ರಾಷ್ಟ್ರೀಯ ವಿಮೋಚನಾ ಆಂದೋಲನಗಳಿಗೆ ನಮ್ಮ ಬೆಂಬಲ ಒಂದು ಗುಲಾಮ ಸ್ಥಿತಿಗೆ ತಳ್ಳಲ್ಪಟ್ಟಿದ ದೇಶ ಬೇರೆ ಯಾವ ದೇಶವೂ ಇಂತಹ ಸಂಕೋಲೆಯಲ್ಲಿರಬಾರದು ಎಂಬ ನೋವಿನ ಆಶಯವನ್ನು ಬಿಂಬಿಸಿತ್ತು.

ಸ್ವತಂತ್ರ ಭಾರತದ ಆಳರಸರಿಗೆ ಯುದ್ಧಾನಂತರದ ಸನ್ನಿವೇಶದಲ್ಲಿ ಅಮೆರಿಕದ ಆಶಯಗಳ ಬಗ್ಗೆ ಬಹಳ ಭ್ರಮೆಗಳಿದ್ದರೂ, ಘಟಾನುಕ್ರಮ ಸುರುಳಿ ಬಿಚ್ಚಲಾರಂಭಿಸಿದಂತೆ ಒಂದು ಸ್ವಾವಲಂಬೀ ಬೆಳವಣಿಗೆಯ ದಾರಿಯನ್ನು ಅನುಸರಿಸಬೇಕಾದ ಅಗತ್ಯದ ಬಗ್ಗೆ ಮನವರಿಕೆಯಾಯಿತು. ಅವರು ಹಿಡಿದ ದಾರಿ ಬೆಳವಣಿಗೆಯ ಬಂಡವಾಳಶಾಹಿ ದಾರಿಯಾಗಿದ್ದರೂ ಅದು ಬ್ಲಾಕ್‌ಮೇಲ್ ಮಾಡುವ ಸಾಮ್ರಾಜ್ಯಶಾಹಿ



ರಾಷ್ಟ್ರೀಯ ವಿಮೋಚನಾ ಆಂದೋಲನಗಳಲ್ಲಿ ದೊಡ್ಡ ಪಾತ್ರ ವಹಿಸಿತು. ಜನಾಂಗದ್ವೇಷಿ ದಕ್ಷಿಣ ಆಫ್ರಿಕಾದ ಬಹಿಷ್ಕಾರಕ್ಕೆ ಹಿಂಜರಿಯುತ್ತಿದ್ದ ಸಾಮ್ರಾಜ್ಯಶಾಹಿ ದೇಶಗಳನ್ನು ಅದಕ್ಕೊಪ್ಪುವಂತೆ ಪ್ರಯತ್ನಗಳ ವಿರುದ್ಧ ಹೊಸದಾಗಿ ಸ್ವತಂತ್ರಗೊಂಡ ದೇಶಗಳುನ್ನು ತಮ್ಮ ಹಿತಾಸಕ್ತಿಗಳನ್ನು ಎತ್ತಿ ಹಿಡಿಯಲು ಅವರನ್ನೆಲ್ಲಾ ಅಣಿನೆರೆಸಲು ಕ್ರಮಗಳನ್ನು ಕೈಗೊಳ್ಳುವಂತೆ ಮಾಡಿತು. ಹೀಗೆ ಭಾರತ ಮತ್ತು

ಒಂದು ಜಾತ್ಯತೀತ ವ್ಯವಸ್ಥೆ

ಆದರೂ ಭಾರತದ ಸ್ವಾತಂತ್ರ್ಯದೊಡನೆಯೇ ದೇಶದ ರಕ್ತರಂಜಿತ ವಿಭಜನೆಯೂ ನಡೆಯಿತೆಂಬುದು ಒಂದು ದುರಂತ ಎಂಬುದೂ ನಮಗೆ ತಿಳಿದಿದೆ. ಸಾಮ್ರಾಜ್ಯಶಾಹಿಗಳ ಪಿತೂರಿ ನಿರ್ಮಿಸಿದ ಹೊಸಗತಿಯ ಎರಡೂ ಕಡೆ ಲಕ್ಷಾಂತರ ಜನ ಮನೆ-ಮಾರು ಬಿಟ್ಟು ಹೋಗಬೇಕಾಯಿತು. ಅಷ್ಟೇ ಅಲ್ಲ, ಭಾರತದ ವಿಭಜನೆಯೊಂದಿಗೆ ಉಂಟಾದ ಕೋಮು ದಂಗೆಗಳಲ್ಲಿ ಹಲವಾರು ಜನರನ್ನು ನಿಷ್ಕರುಣೆಯಿಂದ ಕೊಚ್ಚಿಹಾಕಲಾಯಿತು. ಕೋಟ್ಯಾಂತರ ರೂಪಾಯಿ ಮೌಲ್ಯದ ಆಸ್ತಿಗಳಿಗೆ ಬೆಂಕಿ ಹಚ್ಚಲಾಯಿತು. ಹೆಣ್ಣು ಮಕ್ಕಳು, ಮಹಿಳೆಯರನ್ನು ಅಪಹರಿಸಿ ಅತ್ಯಾಚಾರವೆಸಗಲಾಯಿತು. ಆದರೆ ಇವೆಲ್ಲಾ ಭಾರತದಲ್ಲಿ ಒಂದು ಜಾತ್ಯತೀತ ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸಬೇಕೆಂಬ ಜನಗಳ ನಿರ್ಧಾರನ್ನು ಇನ್ನಷ್ಟು ಬಲಗೊಳಿಸಿತಷ್ಟೇ. ಇದು ನಮ್ಮ ಸ್ವಾತಂತ್ರ್ಯ ಹೋರಾಟದ ಸಹಜ ಫಲಶೃತಿಯೇ ಆಗಿತ್ತು. ಏಕೆಂದರೆ ನಮ್ಮ ಸ್ವಾತಂತ್ರ್ಯ ಹೋರಾಟ ಸ್ವಾತಂತ್ರ್ಯ ಭಾರತದಲ್ಲಿ ಒಂದು ಜಾತ್ಯತೀತ ವ್ಯವಸ್ಥೆಯನ್ನಲ್ಲದೆ ಬೇರೇನೂ ಸಾಧ್ಯವಿಲ್ಲ ಎಂದು ಸದಾ ಕಂಡರಿಸತ್ತು.

ಜಾತ್ಯಾತೀತತೆಯ ತತ್ವ ಎಷ್ಟು ಬಲಿಷ್ಟವಾಗಿತ್ತೆಂದರೆ ಸ್ವಾತಂತ್ರ್ಯದ ತೊರೆವೇ 1930 ರ ದಶಕದಲ್ಲಿಯೇ ಕಾಂಗ್ರೆಸ್ (ಆಗ ನಿಜವಾಗಿ ಅದು ಒಂದು ವೇದಿಕೆಯಾಗಿತ್ತು, ಪಕ್ಷವಾಗಿರಲಿಲ್ಲ) ಹಿಂದೂ ಮಹಾಸಭಾ ಮತ್ತು ಇತರ ಕೋಮುವಾದಿ ಗುಂಪುಗಳಿಗೆ ಸದಸ್ಯತ್ವ ಕೊಡುವುದಿಲ್ಲ ಎಂದು ನಿರ್ಧರಿಸಿತ್ತು.

ಕೆಲವು ಇತಿಹಾಸಕಾರರು ದೇಶವನ್ನು ರಾಜಕೀಯವಾಗಿ ಏಕೀಕರಿಸಿದ್ದು ಬ್ರಿಟಿಷರೇ ಎಂಬ ಅಭಿಪ್ರಾಯ ಹೊಂದಿದ್ದಾರೆ. ಇಲ್ಲಿ ನೆನಪಿಟ್ಟು ಕೊಳ್ಳಬೇಕಾದ ಸಂಗತಿಯೆಂದರೆ ಭಾರತ ಬ್ರಿಟಿಷರು ಬರುವುದಕ್ಕಿಂತ ಮೊದಲೇ ಹಲವು ಸಾಮ್ರಾಜ್ಯಗಳನ್ನು ಕಂಡಿತು - ಮೌರ್ಯರು, ತುಘಲಕ್‌ಗಳು, ಮೊಗಲರು ಇತ್ಯಾದಿ. ಅವರ ಜತೆ-ಜತೆಗೇ ಸಾಂಸ್ಕೃತಿಕ ಸಮ್ಮಿಲನಗಳು ನಡೆಯುತ್ತಾ ಬಂದವು. ಆದರೂ ಮೇಲೆ ಹೇಳಿದ ಇತಿಹಾಸಕಾರರ ಅಭಿಪ್ರಾಯವನ್ನು ಒಪ್ಪಿಕೊಂಡರೂ ಬ್ರಿಟಿಷ್ ಆಳ್ವಿಕೆ ಐಕ್ಯತೆಯ ಹಂದರವನ್ನಷ್ಟೇ ನಿರ್ಮಿಸಿತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಅದಕ್ಕೆ ರಕ್ತ-ಮಾಂಸ ತುಂಬಿ ಜೀವ ಕೊಟ್ಟಿದ್ದು ನಮ್ಮ ಸ್ವಾತಂತ್ರ್ಯ ಹೋರಾಟವೇ. ಶತಮಾನಗಳಿಂದ ಈ ದೇಶದಲ್ಲಿ ಬೆಳೆದು ಬಂದ ಸಮ್ಮಿಶ್ರ ಮೌಲ್ಯಗಳು ಭಾರತದ ಸಂವಿಧಾನದಲ್ಲಿ ಮೈದಾಳಿ ನಿಂತಿವೆ. ○

ಪಂಚಶೀಲವನ್ನು ಸಾರಿದರೆ ಚೀಣಾ ಜನ
ಗಣತಂತ್ರವೂ ಸೇರಿದಂತೆ ವಿಶ್ವದಹೊಸದ
ಸ್ವಾತಂತ್ರ್ಯಗೊಂಡ ದೇಶಗಳು ಬಾಂಡುಂ
(ಇಂಡೋನೇಶ್ಯಾ)ನಲ್ಲಿ ಜೊತೆಗೂಡಿದವು. ನಂ
ವಿಶ್ವದ ಇಪ್ಪತ್ತೈದಕ್ಕೂ ಹೆಚ್ಚು ದೇಶಗ
ಬೆಲ್ಗ್ರೇಡ್‌ನಲ್ಲಿ ಸಭೆ ಸೇರಿದರು. ಅಲಿ
ಆಂದೋಲನ ಜನ್ಮ ತಾಳಿತು. ಇದೊಂ
ಶಕ್ತಿಯಾಗಿ ಮೂಡಿಬಂತು. ಭಾರತ ಇದನ
ಬೆಸೆಯುವಲ್ಲಿ ಮತ್ತು ಬಲಪಡಿಸುವಲ್ಲಿ ಸಾಕ
ಮಹತ್ವದ ಪಾತ್ರ ವಹಿಸಿತು.

ಅಕ್ಟೋಬರ್ ಕ್ರಾಂತಿಯ ಪ್ರಭಾವ

ನಮ್ಮ ಸ್ವಾತಂತ್ರ್ಯ ಹೋರಾಟದ ಇನ್ನೊಂ
ಅಷ್ಟೇ ಮಹತ್ವದ ಅಂಶವೂ ಇದೆ. ರಶಾ
ಮಹಾನ್ ಅಕ್ಟೋಬರ್ ಕ್ರಾಂತಿಯ ಪ್ರಭ
ದಿಂದಾಗಿ ಭಾರತ ಸ್ವಾತಂತ್ರ್ಯವಾದ ನಂತರ ಯ
ದಿಕ್ಕು ಹಿಡಿಯಬೇಕು ಎಂಬುದರ ಒಂದು
ಪರಿಕಲ್ಪನೆಯನ್ನು ನಮ್ಮ ವಿಮೋಚ
ಆಂದೋಲನ ಪಡೆಯಿತು. ಇದರರ್ಥ ಇ
ಮೊದಲಿನ ಸ್ವಾತಂತ್ರ್ಯ ಹೋರಾಟಗಾರ
ಆರ್ಥಿಕ ತತ್ವಗಳ ಅರಿವಿರಲಿಲ್ಲ ಎಂದೇನಲ್ಲ. 1
ರಷ್ಟು ಹಿಂದೆಯೇ ನಮ್ಮ ಸ್ವಾತಂತ

ಹರ್‌ಕಿಶನ್‌ಸಿಂಗ್ ಸ

ಹೋರಾಟಗಾರರು ಬ್ರಿಟಿಷ್ ಆಳ್ವಿಕೆಯ
ಭಾರತೀಯ ರೈತರ, ಕುಶಲಕರ್ಮಿಗಳ ಹಾ
ನಗರಗಳ ಜನಗಳು ಕೂಡಾ ವಿನಾಶಕೊಳ
ರುವುದರ ಬಗ್ಗೆ ಆತಂಕಿತರಾಗಿದ್ದರು.
ಪ್ರಕ್ರಿಯೆಯನ್ನೇ ನಂತರ ದಾದಾಭಾಯಿ ನವರೊ
'ಬ್ರಿಟಿಷರಿಗೆ ತಕ್ಕುದಲ್ಲದ' ನಡೆ ಎಂದರು.
ವಿಭಾಗಗಳತ್ತ ಗಮನ ಹರಿಸುವಂತೆ ಹೇಳಿದ
ಆದರೂ ಒಟ್ಟಾರೆಯಾಗಿ ಆಗ ಸ್ವಾತಂತ್ರ
ಹೋರಾಟಗಾರರ ಆರ್ಥಿಕ ಕಣ್ಣೋ
ಸೀಮಿತವಾಗಿತ್ತು, ಅಸ್ಪಷ್ಟವಾಗಿತ್ತು ಹಾಗ
ಸ್ವಲ್ಪಮಟ್ಟಿಗೆ ಪುನರುತ್ಥಾನವಾದಿಯಾಗಿತ
ಬ್ರಿಟಿಷರನ್ನು ಹೊರದಬ್ಬುವುದೇ ಅವರ ಪ್ರಧ
ಉದ್ದೇಶವಾಗಿತ್ತು. ಆಮೇಲೆ ಏನು ಎಂಬ
ಅವರು ಅಷ್ಟಾಗಿ ಗಮನ ನೀಡಲಿಲ್ಲ.


ಆದರೆ ಅಕ್ಟೋಬರ್ ಕ್ರಾಂತಿಯ ಪ್ರಭ
ಆರ್ಥಿಕ ಕಣ್ಣೋಟವನ್ನು, ರಾಜಕೀ
ಕಣ್ಣೋಟವನ್ನು ಮೂಲಭೂತವಾಗಿ ಬದಲಿಸಿ
ರಾಜಕೀಯವಾಗಿ ನಮಗೆ ಬ್ರಿಟಿ
ಸಾಮ್ರಾಜ್ಯದೊಳಗೆ ಒಂದು ಡೊಮಿನಿಯ
ಅಂದರೆ ಸ್ವಯಮಾಡಳಿತದ ಸ್ಥಾನ ಕೊ
ಸಾಲದು, ಭಾರತಕ್ಕೆ ಬೇಕಾಗಿರುವುದು ಸಂಪೂ
ಸ್ವಾತಂತ್ರ್ಯ ಎಂಬುದು ಮನದಟ್ಟಾಯಿತು. 19
ರಲ್ಲಿ ಅಂದರೆ ಅಕ್ಟೋಬರ್ ಕ್ರಾಂತಿ ನಡೆದ ಕೂಡ
ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ
ಅಧಿವೇಶನದಲ್ಲಿ ಮೌಲಾನಾ ಹಸ್ರತ್ ಮೊಹ
ಪೂರ್ಣಸ್ವಾತಂತ್ರ್ಯದ ಠರಾವನ್ನು ಮಂಡಿಸಿದ
ಈಗ ಈ ನಿರ್ಣಯ ಬಿದ್ದು ಹೋದ
ಮತ್ತೆ-ಮತ್ತೆ ಪ್ರತಿವರ್ಷವೂ ಅದು ಮುಖ್ಯ
ಆಗಷ್ಟೇ ಹುಟ್ಟಿ ಬರುತ್ತಿದ್ದ ಕಮ್ಯುನಿಸ್ಟ್ ಗುಂಪು
ಪ್ರಯತ್ನಗಳಿಂದಾಗಿ ಮಂಡಿಸಲ್ಪಡುತ್ತಿತ್ತು. ಕೊನ
ಕಾಂಗ್ರೆಸ್ 1929 ರ ಅಧಿವೇಶನದಲ್ಲಿ ಪೂ
ಸ್ವಾತಂತ್ರ್ಯದ ನಿರ್ಣಯವನ್ನು ಅಂಗೀಕರಿ

ಆರ್ಥಿಕ ವಿಚಾರಗಳ ಮೇಲೂ ಅಕ್ಟೋಬ
ಕ್ರಾಂತಿಯ ಪ್ರಭಾವ ಅಷ್ಟೇ ತೀವ್ರವಾಗಿ
ಕಮ್ಯುನಿಸ್ಟರು, ಕಾಂಗ್ರೆಸ್, ಸಮಾಜವಾದಿಗ
ಭಗತ್ ಸಿಂಗ್ ಮತ್ತು ಅವರ ಸಂಗಾತಿಗಳು, ಅ
ಅಲ್ಲ ಸ್ಥಳೀಯ ಮಟ್ಟದ ಗುಂಪುಗಳೂ ಭಾರ

ಜೋರಾಗಿ ಪ್ರತಿಪಾದಿಸಲಾರಂಭಿಸಿದರು. ಸೋವಿಯತ್ ಒಕ್ಕೂಟದಿಂದ ರವೀಂದ್ರನಾಥ ಟಾಗೋರರ ಪತ್ರಗಳು, ಆ ದೇಶದ ಬಗ್ಗೆ ನೆಹರೂ ಮತ್ತು ಇತರರ ಲೇಖನಗಳು 1789 ರಲ್ಲಿ ಮಹಾನ್ ಫ್ರೆಂಚ್ ಕ್ರಾಂತಿ ಎತ್ತಿದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವದ ಘೋಷಣೆಗಳನ್ನು ಸೋವಿಯತ್ ಒಕ್ಕೂಟದಲ್ಲಿ ಹೇಗೆ ಸಾಕಾರಗೊಳಿಸಲಾಗುತ್ತಿದೆ ಎಂಬ ಅರಿವು ಜನಗಳಲ್ಲಿ ಮೂಡಿಸದವು. ಕೇವಲ ರಾಜಕೀಯ ಸ್ವಾತಂತ್ರ್ಯವಷ್ಟೇ ಸಾಲದು, ಭಾರತದ ಪುನರುಜ್ಜೀವನಕ್ಕೆ ಆರ್ಥಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯವೂ ಬೇಕು ಎಂಬ ವಿಚಾರ

ಬೇಕಾಗುತ್ತವೆ. 57 ವರ್ಷಗಳ ಸ್ವಾತಂತ್ರ್ಯದ ನಂತರವೂ ನಾವು ನಮ್ಮ ಜನಗಳ ಮೂಲಭೂತ ಕನಿಷ್ಠ ಅಗತ್ಯಗಳನ್ನು ಕೂಡಾ ಈಡೇರಿಸಲು ಅಸಮರ್ಥರಾಗಿದ್ದೇವೆ. ಅವರು ಬಡತನ, ಹಸಿವು, ಅನಕ್ಷರತೆಯಿಂದ ನರಳುತ್ತಿದ್ದಾರೆ. ಮೂಲಭೂತ ಕನಿಷ್ಠ ಅಗತ್ಯಗಳನ್ನು ಪೂರೈಸಿದ್ದರೆ ಅವರು ಪವಾಡಗಳನ್ನೇ ಮಾಡುತ್ತಿದ್ದರು.

ಪರಿಸ್ಥಿತಿ ಎಷ್ಟು ಗಂಭೀರವಾಗಿದೆಯೆಂದರೆ ಜಿಡಿಪಿ ಬೆಳವಣಿಗೆ, ರಫ್ತು ಆದಾಯ, ವಿದೇಶಿ ನೇರ ಹೂಡಿಕೆ ಮತ್ತು ಶೇರು ಮಾರುಕಟ್ಟೆ ವ್ಯವಹಾರಗಳೆಲ್ಲಾ ಅಸಂಬದ್ಧವಾಗಿ ಬಿಡುತ್ತವೆ.



ಪಿ.ಸಿ.ಜೋಷಿ, ಜಿ.ಅಧಿಕಾರಿ ಮತ್ತು ಬಿ.ಟಿ.ರಣದಿವೆ - ಸ್ವಾತಂತ್ರ್ಯ ಸಂಗ್ರಾಮದಲ್ಲಿ ಉಜ್ವಲ ಪಾತ್ರ ವಹಿಸಿದ ಕಮ್ಯುನಿಸ್ಟ್ ಚಳುವಳಿಯ ದಿಗ್ಗಜರು 1945 ರಲ್ಲಿ

ಲೋಕನ ದಿನ

ಈಗ ಮೂಡಿಬಂತು.

ಸಮಾನತೆಯು ಆಕಾಂಕ್ಷೆ ಬಹಳ ಹಳೆಯುಗಾರರೂ ಅದು ಕ್ರಾಂತಿಯ ನಂತರ ಹಿಂದೆಂದೂ ಕಾಣದ ಬಲ ಪಡೆಯಿತು. ಅಷ್ಟೇ ಅಲ್ಲ ಆಧ್ಯಾತ್ಮಿಕ ರಂಗದಲ್ಲಿ ಸಮಾನತೆಯನ್ನು ಹುಡುಕುವ ಬದಲು ಆರ್ಥಿಕ ಮತ್ತು ರಾಜಕೀಯದ ಐಹಿಕ ವಲಯುಗಳಲ್ಲೂ ಈ ಹುಡುಕಾಟ ಆರಂಭವಾಯಿತು.

ಇವೆಲ್ಲವುಗಳಿಂದಾಗಿ ಸ್ವತಃ ಕಾಂಗ್ರೆಸ್ ಕ್ರಮೇಣ ತೀವ್ರಗಾಮಿಯಾಗಲಾರಂಭಿಸಿತು. ಅದೀಗ ಕೆಲವೇ ಮೇಲ್ವರ್ಗದ ಜನಗಳಿಗೆ ಸೀಮಿತಗೊಳ್ಳದೆ ಜನಸಮೂಹಗಳನ್ನು ದೊಡ್ಡ ಸಂಖ್ಯೆಯಲ್ಲಿ ಸೆಳೆಯಲಾರಂಭಿಸಿತು. 1930 ರ ದಶಕದ ಕೊನೆಯಲ್ಲಿ ಹಾಗೂ 1940 ರ ದಶಕದ ಆರಂಭದಲ್ಲಿ ಸಿದ್ಧಪಡಿಸಿದ ಹಲವಾರು ಯೋಜನೆಗಳು, ನೆಹರೂರವರ ಅಧ್ಯಕ್ಷತೆಯಲ್ಲಿನ ಸಮಿತಿ ತಯಾರಿಸಿದ ಅಧಿಕೃತ ಕಾಂಗ್ರೆಸ್ ಯೋಜನೆ ಇವೆಲ್ಲವೂ ಸೋವಿಯತ್ ಯೋಜನಾ ಪ್ರಕ್ರಿಯೆಯ ಭಾರಿ ಯಶಸ್ಸಿನಿಂದ ನೇರ ಪ್ರಭಾವ ಪಡೆದವುಗಳು. ಇಡೀ ಯುರೋಪು ಹಿಟ್ಲರನ ಧಾಳಿಯೆದುರು ತತ್ತರಿಸಿ ಮಣ್ಣು ಮುಕ್ಕುತ್ತಿದ್ದಾಗ ಸೋವಿಯತ್ ಒಕ್ಕೂಟ ನಾಝೀ ಮಿಂಚಿನ ಧಾಳಿಗಳನ್ನು ಎದುರಿಸಿ ನಿಂತಿತು. ಅವರ ಯುದ್ಧ ಯಂತ್ರವನ್ನು ಧ್ವಂಸಗೊಳಿಸಿತು. ಆಗ ಎಲ್ಲೆಡೆಗೂ ಕೇಳಿಬಂದ ಪ್ರಶ್ನೆ - ಆಹಾರವಾಗಲೀ, ಬಟ್ಟೆ, ವಸತಿ, ಉದ್ದಿಮೆ, ಶಿಕ್ಷಣ, ಆರೋಗ್ಯ, ಸರಾಸರಿ ನಿರೀಕ್ಷಿತ ಆಯಸ್ಸು ಅಥವಾ ಇನ್ಯಾವುದೇ ರಂಗದಲ್ಲಾಗಲೀ ಪ್ರಗತಿಯಾಗಿದೆಯೆಂಬುದನ್ನು ನಿರಾಕರಿಸಲಾಗದು. ಆದರೂ ನಮ್ಮ ಪ್ರಾಕೃತಿಕ ಮತ್ತು ಮಾನವ ಸಂಪನ್ಮೂಲಗಳನ್ನು ನೋಡಿದಾಗ ನಾವು ಸಾಧಿಸಬಹುದಾದ್ದನ್ನು ಸಾಧಿಸಿಲ್ಲ ಎಂದೇ ಹೇಳಬೇಕಾಗುತ್ತದೆ. ನಾವು ಆಗಸ್ಟ್ 15, 1947 ರಂದು ಸ್ವಾತಂತ್ರ್ಯ ಗಳಿಸಿದರೆ ಚೀಣಾ ಎರಡು ವರ್ಷಗಳ ನಂತರ ಅಕ್ಟೋಬರ್ 1, 1947 ರಂದು ವಿಮೋಚನೆ ನಡೆಯಿತು. ಆದರೂ ಚೀಣಾ ಈಗ ನಮ್ಮದು ದಾಟಿ ಹೋಗಿದೆ. ಈ ಬಗ್ಗೆ ವಿವರಕ್ಕೆ ಹೋಗುವ ಅಗತ್ಯವಿಲ್ಲ. ಅವೆಷ್ಟು ಅಸಂಖ್ಯಾತವೆಂದರೆ ಹಲವು ಸಂಪುಟಗಳೇ


ಅಕ್ಟೋಬರ್ ಮಹಾನ್ ಕ್ರಾಂತಿ ಪ್ರಶಂಸಿಸಿದ ನೆಹರೂ

ಸರ್ವತೋಮುಖ ಅಭಿವೃದ್ಧಿ ಕುರಿತ ಜನರ ಆಕಾಂಕ್ಷೆಗಳು, ರಾಷ್ಟ್ರೀಯ ಸಂಪತ್ತಿನ ನ್ಯಾಯಪೂರ್ಣ ವಿತರಣೆಯ ತುಡಿತ ಈಗಲೂ ಈಡೇರದೇ ಉಳಿದಿವೆ.

ಇದಕ್ಕೆ ಕಾರಣವನ್ನು ಎರಡು ಹಂತಗಳಲ್ಲಿ ಗ್ರಹಿಸಬಹುದು. ಮೊದಲನೆಯದಾಗಿ, ದೇಶವನ್ನು ಆಳುವವರು ಆರಿಸಿದ ಅಭಿವೃದ್ಧಿಯ ದಾರಿಯೆಂದರೆ ಬಂಡವಾಳಶಾಹಿ ದಾರಿ. ಅದು ತನ್ನದೇ ಆದ ಮಿತಿಗಳನ್ನು ಹೊಂದಿದ್ದ.. ಬೇಗನೇ ಅದರ ದಿವಾಳಿಕೋರತನ ಪ್ರದರ್ಶನಗೊಂಡಿತು. ದೇಶದ ದೊಡ್ಡ ಭಾಗದಲ್ಲಿ ಇನ್ನೂ ಪಾಳೆಯಗಾರಿ, ಅರೆ-ಪಾಳೆಯಗಾರಿ ಉತ್ಪಾದನಾ ಸಂಬಂಧಗಳು ಇನ್ನೂ ಇರುವಾಗಲೇ ಅತ್ತ ಸಾಮ್ರಾಜ್ಯಶಾಹಿ ಬಂಡವಾಳಕ್ಕೆ ನಮ್ಮ ಆರ್ಥಿಕದಲ್ಲಿ ಮತ್ತು ನಮ್ಮ ಸಂಸ್ಕೃತಿ ಹಾಗೂ ಮೌಲ್ಯ ವ್ಯವಸ್ಥೆಯಲ್ಲಿಯೂ ತೂರಿಕೊಳ್ಳಲು ಅವಕಾಶ ನೀಡಲಾಯಿತು. ಈ ಅಭಿವೃದ್ಧಿ ದಾರಿಯೇ ನಮ್ಮ ಜನಗಳ ಜ್ವಲಂತ ಪ್ರಶ್ನೆಗಳನ್ನು ಪರಿಹರಿಸಲು ಅಸಮರ್ಥವಾಗಿದೆ ಎಂಬುದು ಸ್ಪಷ್ಟ.

ಬದಲಾದ ಸನ್ನಿವೇಶ

ಎರಡನೆಯದಾಗಿ, ಮೇಲಿನ ಪರಿಸ್ಥಿತಿಯ ಪರಿಣಾಮವಾಗಿ ಕಳೆದ 13 ವರ್ಷಗಳಲ್ಲಿ ಜನಗಳ ಜೀವನಮಟ್ಟದ ಮೇಲೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ(ಎಲ್‌ಪಿಜಿ) ನೀತಿಗಳ ರೂಪದಲ್ಲಿ ಹೊಸ ಪ್ರಹಾರಗಳು ಕಂಡುಬಂದಿವೆ. ಸಾಮ್ರಾಜ್ಯಶಾಹಿಗಳು ಸದಾ ವಿಶ್ವದ ಮೇಲೆ ಯಜಮಾನಿಕೆ ನಡೆಸುವ ಅವಕಾಶಗಳ ಹುಡುಕಾಟದಲ್ಲಿದ್ದರು. ಸೋವಿಯತ್ ಒಕ್ಕೂಟದ ಅಂತ್ಯ ಹಾಗೂ ಪೂರ್ವ ಯುರೋಪಿನಲ್ಲಿನ ಹಿನ್ನಡೆಗಳು ಅವರಿಗೆ ಆ ಅವಕಾಶಗಳನ್ನು ಒದಗಿಸಿದವು. ಸಾಮ್ರಾಜ್ಯಶಾಹಿಗಳ ವಾಹನಗಳಾದ ಬಹುರಾಷ್ಟ್ರೀಯ ಕಂಪನಿಗಳು ಜನರನ್ನು ಸುಲಿದು ಸೂಪರ್ ಲಾಭಗಳನ್ನು ಗಳಿಸಹೊರಟಿವೆ.

ಹೀಗೆ ಇದೀಗ ವಿಶ್ವಬಂಡವಾಳಶಾಹಿಯ ಇತಿಹಾಸದಲ್ಲಿ ಬದಲಾದ ಸನ್ನಿವೇಶ. ಬಂಡವಾಳಶಾಹಿ ಈಗಲೂ ಸಾಮ್ರಾಜ್ಯಶಾಹಿ ಘಟ್ಟದಲ್ಲಿದ್ದರೂ, ಇದೀಗ ಸಾಮ್ರಾಜ್ಯಶಾಹಿ ಜಾಗತೀಕರಣದ ಯುಗ.

ಭಾರತದಲ್ಲಿ ಈ ವಿಷಯದಲ್ಲಿ ಮೇ 1998 ರಿಂದ ಮೇ 2004 ರವರೆಗಿನ ಆರು ವರ್ಷಗಳ ಅವಧಿಯಂತೂ ನಾಚಿಕೆಗೇಡಿನ ಅವಧಿ. ಅದು ಒಂದು ಪ್ರತಿಗಾಮಿ ಪಕ್ಷ, ಆದರಲ್ಲೂ ಒಂದು ಫ್ಯಾಸಿಸ್ಟ್ ಮಾದರಿಯ ಪಕ್ಷ ಅಧಿಕಾರಕ್ಕೆ ಬಂದು ಮೊದಲ ದಿನದಿಂದಲೇ ಅತ್ಯಂತ ವಿನಾಶಕಾರಿ ನೀತಿಗಳನ್ನು ಅನುಸರಿಸಿದ ಅವಧಿ. ಉದಾಹರಣೆಗೆ ಅಧಿಕಾರಕ್ಕೆ ಬಂದ ಕೂಡಲೇ ಅದು ಪರಮಾಣು ಶಸ್ತ್ರಾಸ್ತ್ರಗಳನ್ನು ಪಾಡ ಹೊರಟು ನಮ್ಮ ಉಪಖಂಡದಲ್ಲಿ ಶಸ್ತ್ರಾಸ್ತ್ರ ಪೈಪೋಟಿಯನ್ನು ಹೊಸ ಹಂತಕ್ಕೇರಿಸಿತು. ಹಲವು ರಾಜ್ಯಗಳಲ್ಲಿ ಕ್ರಿಶ್ಚಿಯನ್ನರ ಮೇಲೆ ಭೀಕರ ಧಾಳಿಗಳಿಗೆ, ಗುಜರಾತಿನಲ್ಲಿ ಮುಸ್ಲಿಮರ ಸಾಮೂಹಿಕ ಹತ್ಯಾಕಾಂಡಕ್ಕೆ ಅದು ಪೋಷಣೆಯಿತ್ತಿತು. ಬಿಜೆಪಿಯ ಕೋಮುವಾದಿ ಪ್ರಯತ್ನಗಳು ಪಠ್ಯಪುಸ್ತಕಗಳನ್ನು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಕೇಸರೀಕರಣಗೊಳಿಸಿ ತನ್ನ ಮತಾಂಧ ಉದ್ದೇಶ ಸಾಧನೆಗೆ ತುಫಾಕಿ ಗುಂಡುಗಳಾಗುವ ಒಂದು ತಲೆಮಾರನ್ನೇ ಸೃಷ್ಟಿಸಲು ಮುಂದಾಯಿತು. ನಮ್ಮ ರಾಜಕೀಯ ವ್ಯವಸ್ಥೆಯ ಜಾತ್ಯಾತೀತ ಹಂದರಕ್ಕೇ ಹಾನಿಯುಂಟು ಮಾಡಲು ಹಲವು ರೀತಿಯಲ್ಲಿ ಪ್ರಯತ್ನಿಸಿತು. ಅದಕ್ಕಾಗಿ ಒಂದು ಆಯೋಗವನ್ನೇ ನೇಮಿಸಿತು. ಬಿಜೆಪಿ ಒಂದು ಅಮೆರಿಕಾ ಪರ ಪಕ್ಷವಾಗಿರುವುದರಿಂದ ಅದರ ಆಡಳಿತ ನಮ್ಮ ವಿದೇಶಾಂಗ ನೀತಿಯ ಮೂಲತತ್ವಗಳನ್ನೇ ಕಳಚಿ ಹಾಕಿತು. ಪ್ಯಾಲೆಸ್ಟೇನಿಯನ್ನರ ತಾಯ್ನಾಡಿನ ಹೋರಾಟಕ್ಕೆ ಬೆಂಬಲ ನಿಲ್ಲಿಸಿತು. ಎಸ್‌ಎಡಿಆರ್‌ಗೆ ಮಾನ್ಯತೆಯನ್ನು ಹಿಂತೆಗೆದುಕೊಂಡಿತು. ಮತ್ತು ಅಲಿಪ್ತ ಆಂದೋಲನದಲ್ಲಿ ಮರು ಚೈತನ್ಯ ತುಂಬಲು ಕಿರುಬೆರಳನ್ನು ಎತ್ತಲು ನಿರಾಕರಿಸಿತು.

ಆರ್ಥಿಕ ವಿಷಯಗಳಲ್ಲಿ ಬಿಜೆಪಿ ಆಳ್ವಿಕೆ-13 ವರ್ಷಗಳ ಹಿಂದೆ ರಾವ್ ಸರ್ಕಾರದ ಆರಂಭಿಸಿದ ಎಲ್‌ಪಿಜಿ ನೀತಿಗಳನ್ನು ಪ್ರತೀಕಾರ ತೀರಿಸುವ ರೀತಿಯಲ್ಲಿ ಅನುಸರಿಸಿತು - ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಪುಡಿಕಾಸಿಗೆ ಮಾರಲಾಯಿತು. ಅನಗತ್ಯ ಆಮದುಗಳನ್ನು ಉದಾರೀಕರಿಸಲಾಯಿತು. ಬಹುರಾಷ್ಟ್ರೀಯ ಕಂಪನಿಗಳಿಗೆ ನಮ್ಮದೇಶವನ್ನು ಲೂಟಿ ಮಾಡಲು ಇನ್ನಷ್ಟು ಸ್ವಾತಂತ್ರ್ಯ ನೀಡಲಾಯಿತು. ಇದು ನಮ್ಮ ಜನಗಳ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿತು. ಈ ನೀತಿಗಳಿಂದಾಗಿ ಕಳೆದ ಆರುವರ್ಷಗಳಲ್ಲಿ 20 ಸಾವಿರಕ್ಕೂ ಹೆಚ್ಚು ರೈತರು ಆಂಧ್ರಪ್ರದೇ ಮತ್ತಿತರ ಕಡೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡರು.

ಒಟ್ಟಾರೆಯಾಗಿ ನಮ್ಮ ಸ್ವಾತಂತ್ರ್ಯ ಹೋರಾಟದ ಸಕಾರಾತ್ಮಕ ಪರಂಪರೆಗಳೆಲ್ಲಾ ಕಳೆದ ಆರು ವರ್ಷಗಳ ಹಿನ್ನೆಡೆ ಹೊಂದಿದವು.

ಆಯ್ಕೆ ಸ್ಪಷ್ಟ: ಇಂತಹ ಒಂದು ಸನ್ನಿವೇಶದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಈಗ ಹೊರಗಿನಿಂದ ಎಡಪಕ್ಷಗಳ ನಿರ್ಣಾಯಕ ಬೆಂಬಲದೊಂದಿಗೆ ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದೆ.

ಆಯ್ಕೆಯೆಂಬುದು ಪ್ರಶ್ನೆ: ಈ ಸರ್ಕಾರ ವಾಜಪೇಯಿ ಸರ್ಕಾರ ಸೇರಿದಂತೆ ತನ್ನ ಹಿಂದಿನ ಸರ್ಕಾರಗಳು ಅನುಸರಿಸಿದ ದಿವಾಳಿಕೋರ ದಾರಿಯನ್ನೇ ಅನುಸರಿಸುತ್ತದೆಯೇ ಅಥವಾ ಒಂದು ಪರ್ಯಾಯ ದಾರಿ ಹಿಡಿಯುತ್ತದೆಯೇ?

ಇಂದಿನ ಪರಿಸ್ಥಿತಿ ಹೇಗಿದೆಯೆಂದರೆ ಒಂದೆಡೆ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಯುಪಿಎ ಸರ್ಕಾರ ಕೆಲವು ಜನಪರ ಕ್ರಮಗಳ ಭರವಸೆ ನೀಡಿದ್ದಾರೆ, ಇನ್ನೊಂದೆಡೆ ಅದು ಪಾಳೆಯಗಾರಿ ಗುತ್ತೇದಾರಿಗಳು, ಸಾಮ್ರಾಜ್ಯಶಾಹಿಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳ ಒತ್ತಡಕ್ಕು ಒಳಗಾಗಿದೆ. ಉದ್ಯೋಗ ನಿರ್ಮಾಣ, ಗ್ರಾಮೀಣ ಸಾಲ, ಶಿಕ್ಷಣ ಇತ್ಯಾದಿಗಳ ಬಗ್ಗೆ ಅದರ ಪ್ರಕಟಣೆಗಳು ಸಾಕಷ್ಟು ಇಲ್ಲದಿದ್ದರೂ ಕೂಡಾ ಸ್ವಾಗತಾರ್ಹ. ಆದರೆ ಈ ಯೋಜನೆಗಳಿಗೆ ನಿಧಿ ಸಂಗ್ರಹಿಸಲು ಅದು ಶ್ರೀಮಂತರ ಮೇಲೆ ತೆರಿಗೆ ಹಾಕುವ ಬದಲು ಅವುಗಳ ಹೊರೆಯನ್ನು ಅದಾಗಲೇ ಎಲ್‌ಪಿಜಿ ನೀತಿಗಳ ಭಾರತದಡಿ ನರಳುತ್ತಿರುವ ಒಂದಿಲ್ಲೊಂದು ವಿಭಾಗದ ಮೇಲೆ ದಾಟಿಸುತ್ತಿದೆ.

ತನ್ನ ಹಣಕಾಸು ಕೊರತೆಯನ್ನು ತಗ್ಗಿಸಲು ನೌಕರರ ಭವಿಷ್ಯ ನಿಧಿಯ ಮೇಲಿನ ಬಡ್ಡಿ ದರವನ್ನು ಕಾರ್ಮಿಕರ ಸಂಘಗಳ ಬಲವಾದ ವಿರೋಧದ ನಡುವೆಯೂ ಕಡಿತ ಮಾಡಿರುವುದು ಇದಕ್ಕೆ ಇತ್ತೀಚಿನ ಉದಾಹರಣೆ. ಆದ್ದರಿಂದ ಸರ್ಕಾರ ಕೇಳ್ಕರ್ ಮತ್ತು ರಾಕೇಶ್ ಮೋಹನ್ ಶಿಫಾರಸ್ಸುಗಳನ್ನು ಅಂಗೀಕರಿಸಿ ಬ್ಯಾಂಕುಗಳಿಗೆ ಸಾಲ ಮರುಪಾವತಿ ಮಾಡದೆ ಅವನ್ನು ಬಿಕ್ಕಟ್ಟಿನಲ್ಲಿ ಸಿಕ್ಕಿಸಿದ ದೊಡ್ಡ ಸಾಲಗಾರರಿಗೇ ಅಗ್ಗದ ದರದಲ್ಲಿ ಸಾಲ ಒದಗಿಸಲಿಕ್ಕಾಗಿ ಅಸಂಘಟಿತ ಪೆನ್ಶನ್‌ದಾರರು ಮತ್ತು ಇತರ ಸಣ್ಣ ಉಳಿತಾಯಗಾರರಿಗೆ ಹಾನಿಯುಂಟು ಮಾಡಲು ಹೊರಟರೆ ಅದರಲ್ಲಿ ಆಶ್ಚರ್ಯವೇನಿಲ್ಲ.

ಇದು ಜಾಣತನವೇ? ಇದಕ್ಕೆ ಉತ್ತರ ಪಡೆಯಲು ಇತಿಹಾಸ ನಮಗೆ ಮಾರ್ಗದರ್ಶನ ನೀಡಬಲ್ಲದು. ಉದಾಹರಣೆಗೆ ಇಟಲಿ ಮತ್ತು ಜರ್ಮನಿಯಲ್ಲಿ ಜನಗಳಲ್ಲಿನ ಸಾರ್ವತ್ರಿಕ ಅಸಂತೃಪ್ತಿಯ ಸನ್ನಿವೇಶದ ಲಾಭ ಪಡೆದೇ ಮುಸೋಲಿನಿ ಮತ್ತು ಹಿಟ್ಲರ್ ತಂತಮ್ಮ ದೇಶಗಳಲ್ಲಿ ತಮ್ಮ ಫ್ಯಾಸಿಸ್ಟ್ ಆಳ್ವಿಕೆಗಳನ್ನು ಹೇರಿದರು. ಅಷ್ಟು ದೂರವೇಕೆ ಹೋಗಬೇಕು? ಭಾರತದಲ್ಲಿಯೂ ಬಿಜೆಪಿ ಅಸಂತೃಪ್ತಿಯನ್ನು ಉಲ್ಬಣಗೊಳಿಸುವಲ್ಲಿ ರಾವ್ ಸರ್ಕಾರದ ಪಾತ್ರ, ನಂತರ ಜನಗಳನ್ನು ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಸಂಯುಕ್ತ ರಂಗ ಆಳ್ವಿಕೆಯ ವಿಫಲತೆ ಇವುಗಳನ್ನೇ ತನ್ನಬಂಡವಾಗಿ ಮಾಡಿಕೊಂಡಿತು. ಅದರ ದುಷ್ಪರಿಣಾಮಗಳು ಈಗ ಎಲ್ಲರ ಮುಂದಿದೆ. ಆದ್ದರಿಂದ **ತಾವು ಸದಾಕಾರ ಆನಂದದಿಂದ ಆಳ್ವಿಕೆ ನಡೆಸುತ್ತೇವೆ ಎಂದು ಕಾಂಗ್ರೆಸ್ ಮಂದಿ ನಂಬಿದ್ದರೆ ಅವರು ಬೇಗನೆ ಎಚ್ಚೆತ್ತುಕೊಳ್ಳುವುದು ಒಳ್ಳೆಯದು. ಯಾವುದೇ ಜನ-ವಿರೋಧಿ ನೀತಿಯನ್ನು ಅನುಸರಿಸಿದರೂ ನಮ್ಮಲ್ಲೇ ಬೆಳೆದಿರುವ ಫ್ಯಾಸಿಸ್ಟ್‌ಗಳ ಮುಖದಲ್ಲಿ ನಗು ಮೂಡುತ್ತದೆ.**

ಎಡ ಪಕ್ಷಗಳಂತೂ ರಾಷ್ಟ್ರೀಯ ಐಕ್ಯತೆ ಮತ್ತು ಜಾತ್ಯತೀತತೆಯ ರಕ್ಷಣೆಯ ಮಟ್ಟಿಗೆ ಯುಪಿಎಗೆ ಬೆಂಬಲ ನೀಡಲು ನೀತಿಬದ್ಧವಾಗಿವೆ. ಆದರೆ ಪ್ರತಿಗಾಮಿ ನೀತಿಗಳನ್ನು ಅನುಸರಿಸುವುದರಿಂದ ರಾಷ್ಟ್ರೀಯ ಐಕ್ಯತೆ ಮತ್ತು ಜಾತ್ಯಾತೀತತೆಯನ್ನು ರಕ್ಷಿಸಲು ಸಾಧ್ಯವಿಲ್ಲ ಎಂಬದೂ ನಮಗೆ ತಿಳಿದಿದೆ. ಆದ್ದರಿಂದ ಎಡಪಕ್ಷಗಳೇನು ಬೆಂಬಲ ಕೊಟ್ಟೇಕೊಡಬೇಕು ಎಂಬ ಪ್ರಮಾದ ಮಾಡುವ ಮೊದಲು ಕಾಂಗ್ರೆಸ್ ಆತ್ಮಾವಲೋಕನ ಮಾಡಿಕೊಳ್ಳುವುದು ಒಳ್ಳೆಯದು. ಶ್ರಮಜೀವಿ ಜನತೆಗೆ ನಾವು ಕರ್ತವ್ಯಬದ್ಧರಾಗಿದ್ದೇವೆ. ಶೋಷಕ ವರ್ಗಗಳಿಗಲ್ಲ ಎಂದು ನೇರವಾಗಿಯೇ ಹೇಳಬೇಕಾಗುತ್ತದೆ.

ಈ ಆಗಸ್ಟ್ 15 ನಮಗೆ ಮತ್ತು ಕಾಂಗ್ರೆಸ್ಸಿಗರಿಗೆ ನಮ್ಮ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ನೆನಪಿಸಿಕೊಳ್ಳಲು ಮತ್ತು ನಮ್ಮ ಜನ ನಮ್ಮಿಂದ ಏನು ನಿರೀಕ್ಷಿಸುತ್ತಾರೆ ಎಂಬುದನ್ನು ಸ್ವಲ್ಪ ಕಲಿಯಲು ಒಂದು ಒಳ್ಳೆಯ ಅವಕಾಶ ನೀಡಿದೆ.

ಬೆಳಕಿನೆಡೆಗೆ ಮಹಿಳಾ ನಡಿಗೆ

ಐದನೇ ಮಹಿಳಾ ರಾಜ್ಯ ಸಮ್ಮೇಳನ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 5ನೇ ರಾಜ್ಯ ಸಮ್ಮೇಳನ ಬೆಂಗಳೂರಿನಲ್ಲಿ ಇದೇ ಆಗಸ್ಟ್ 16 ರಿಂದ 18 ರವರೆಗೆ ಜರುಗಲಿದೆ. ನಾಡಿನ ಮಹಿಳಾ ಸಮುದಾಯದ ಸ್ಥಿತಿ-ಗತಿ, ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮತ್ತು ಮಹಿಳಾ ಆಂದೋಲನದ ಮುಂದಿನ ಹಾದಿಯ ಕಣ್ಣೋಟವನ್ನು ನೀಡಿದ್ದಾರೆ ಸಂಘಟನೆಯ ರಾಜ್ಯ ಅಧ್ಯಕ್ಷೆ


ಕೆ.ನೀಲಾ

5ನೇ ರಾಜ್ಯ ಸಮ್ಮೇಳನದಲ್ಲಿ ನಾವು ಮಹಿಳೆಯರ ಮತ್ತು ಇಂದಿನಸಮಾಜ ಸ್ಥಿತಿ, ಬಿಡುಗಡೆ ಮಾರ್ಗಗಳ ಕುರಿತು ಚಿಂತನ - ಮಂಥನ ನಡೆಸಲಿಕ್ಕಿದೆ. ಹೆಚ್ಚೆಚ್ಚು ಆತಂಕದ ಕ್ಷಣಗಳಲ್ಲಿ ಬದುಕು ಸಾಗಿಸುವ ಪರಿಸ್ಥಿತಿ ಮಹಿಳೆಯರ ಪಾಲಿಗಿದೆ. ಬೆವರು, ರಕ್ತ, ಕಣ್ಣೀರಿನಲ್ಲಿ ಮಹಿಳೆಯರ ಜೀವನ ಮುಗಿದು ಹೋಗುತ್ತಿದೆ. ಮನೆಯ ಒಳಗೂ ಹೊರಗೂ ಮತ್ತು ಪ್ರಜನನ ಪ್ರಕ್ರಿಯೆ ಹೀಗೆ ಮಹಿಳೆಯು ಏಕಕಾಲಕ್ಕೆ ಮೂರು ಕೆಲಸಗಳ ನೊಗಕ್ಕೆ ಹೆಗಲು ಕೊಡಬೇಕಾಗುತ್ತಿದೆ. ದುಡಿದು ಬಸವಳಿದು ಬೆಂಡಾದ ಎಲ್ಲ ವರ್ಗದ ಮಹಿಳೆಯರ ನೋವು- ನಲಿವುಗಳನ್ನು 'ಜನವಾದಿ' ಒಬ್ಬ ಆತ್ಮೀಯ ಗೆಳತಿಯಂತೆ ಈ ಸಮ್ಮೇಳನದಲ್ಲಿ ಚರ್ಚಿಸಬೇಕಿದೆ. ಮುಂಬರುವ ದಿನಗಳಲ್ಲಿ ಹಾದಿ ಹಸನು ಮಾಡಿಕೊಳ್ಳುವ ಕಾರ್ಯ ಕೈಗೊಳ್ಳಬೇಕಿದೆ.

ಬೆಚ್ಚಿಬೀಳಿಸುವ ಘಟನೆಗಳು

ಈಚೆಗೆ ರಾಯಚೂರು ಜಿಲ್ಲೆಯಿಂದ ಬೆಚ್ಚಿಬೀಳಿಸುವ ಘಟನೆಯೊಂದು ವರದಿಯಾಯಿತು. ಮದುವೆಯ ನೆಪದಲ್ಲಿ ಹರೆಯದ ಹುಡುಗಿಯರನ್ನು ವೇಶ್ಯಾವಾಟಿಕೆಗಿಳಿಸುವ 'ದಂಧೆ' ತೀವ್ರಗೊಂಡಿದೆ. ಶ್ರೀಮಂತರ ವೈಭವದ ಪ್ರದರ್ಶನ ಮತ್ತು ಪ್ರತಿಷ್ಠೆಯ ಕಾರಣದಿಂದ ಪೋಷಿಸಿಕೊಂಡು ಬಂದ 'ವರದಕ್ಷಿಣೆ'ಯ ಭೂತವನ್ನು ಬಡವರಿಂದ ನಿಭಾಯಿಸಲಾಗದು. ಹೀಗಾಗಿ ಯಾರೇ ಮಧ್ಯವರ್ತಿಗಳು ಎಂತಹ 'ವರ'(!) ತಂದರೂ ತಾಳಿ ಕಟ್ಟಿಸಿ ಕಳಿಸಲಾಗುತ್ತದೆ. ಹಾಗೆ ಮದುವೆಯಾಗಿ ಹೋದ ಯುವತಿಯನ್ನು ವೇಶ್ಯಾವಾಟಿಕೆಗೆ ಮಾರಲಾಗುತ್ತದೆ. ಇದೊಂದು ಅಂತರರಾಷ್ಟ್ರೀಯ ಜಾಲವಾಗಿದೆ.

ಇದಕ್ಕೆ ಸೇರುವ ಕೊಂಡಿಯಾಗಿ ಕಲ್ಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೊಂಚಾವರಂ ತಾಂಡಾಗಳಿಂದ ಹೆಣ್ಣು ಶಿಶು ಮಾರಾಟ ಪ್ರಕರಣವು ಅಂತರಾಷ್ಟ್ರದ ಸುದ್ದಿಯಾಗಿದ್ದು ನಿಮಗೆ ನೆನಪಿರಬಹುದು (4 ನೇ ರಾಜ್ಯ ಸಮ್ಮೇಳನದಲ್ಲಿ ಚರ್ಚಿಸಿದ್ದೇವೆ). ಕೇವಲ ರೂ.500 ರಿಂದ ರೂ.2000 ವರೆಗೆ ಹೆಣ್ಣು ಕೂಸುಗಳ ವ್ಯಾಪಾರ ನಡೆದಿದೆ. ಕಿತ್ತು ತಿನ್ನುವ ಬಡತನದ ಅಂಶವೂ ಒಂದು ಕಾರಣ ಹೌದಾದರೂ ಬಡತನವೊಂದೇ ಹೆಣ್ಣುಶಿಶು ಮಾರಾಟಕ್ಕೆ ಪ್ರಮುಖ ಕಾರಣವಲ್ಲ. ಹೆಣ್ಣಿನ ಬಗ್ಗೆ ಇರುವ ತಿರಸ್ಕಾರ ಲಿಂಗ ತಾರತಮ್ಯ ಮುಖ್ಯ ಕಾರಣವಾಗಿದೆ.



ಇದೇ ಸಂದರ್ಭದಲ್ಲಿ ಇನ್ನೂ ಆತಂಕಕ್ಕೆ ಪಕ್ಕಾಗಿಸುವ ಘಟನೆಗಳು ರಾಜ್ಯದಲ್ಲಿ ಘಟಿಸಿವೆ. ಕೋಲಾರ, ಗುಲಬರ್ಗಾ, ಗದಗ, ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಚುನಾಯಿತ ಜನ ಪ್ರತಿನಿಧಿಗಳು, ಸಮಾಜಸೇವಕರು, ಧಾರ್ಮಿಕ ಮುಖಂಡರು ಮತ್ತು ಅಧಿಕಾರಿಗಳ ಸಮ್ಮುಖದಲ್ಲಿಯೇ ಸಾಮೂಹಿಕ ವಿವಾಹಗಳಲ್ಲಿ ಬಾಲ್ಯವಿವಾಹಗಳು ಅತ್ಯಂತ ರಾಜಾರೋಷವಾಗಿ ನಡೆದಿವೆ.

ಹೆಣ್ಣು ಶಿಶು ಬೇಡ ಎಂಬ ಭಾವನೆಯು ದಿನಗಳೆದಂತೆ ವ್ಯಾಪಕವಾಗುತ್ತಿದ. ಆಧುನಿಕ ತಂತ್ರಜ್ಞಾನದ ನೆರವಿನಿಂದ ಭ್ರೂಣ ಪತ್ತೆ ಮಾಡಲಾಗುತ್ತಿದೆ ಮತ್ತು ಭ್ರೂಣವು ಹೆಣ್ಣಾದಲ್ಲಿ ನಿರ್ದಯವಾಗಿ ಹತ್ಯೆಯೂ ಮಾಡಲಾಗುತ್ತಿದೆ. ಗಂಡು ಫಲಾಪೇಕ್ಷೆಯಿಂದ ಅನೇಕ ಮೂಢನಂಬಿಕೆಗಳ ಆಚರಣೆಗೆ ಮಹಿಳೆಯರನ್ನು ದೂಡಲಾಗುತ್ತಿದೆ. 'ಹೆಣ್ಣು ಬೇಡ'ವೆಂದು ಒಂದು ಕಡೆ ವಿಜ್ಞಾನ- ತಂತ್ರಜ್ಞಾನದ ದುರ್ಬಳಕೆ ಮತ್ತೊಂದು ಕಡೆ ಅವೈಜ್ಞಾನಿಕತೆಯ ಹರಡುವಿಕೆ; ಹೀಗೆ ಪಿತೃಪ್ರಧಾನ ವರ್ಗ ಸಮಾಜವು ತನ್ನ ಮೌಲ್ಯಗಳ ರಕ್ಷಣೆಗಾಗಿ ಏಕಕಾಲಕ್ಕೆ ಜ್ಞಾನದ ತಿರಸ್ಕಾರ ಮತ್ತು ಮಹಿಳೆಯರ 'ದಮನ' ಮಾಡುತ್ತಿದೆ.

ಕರ್ನಾಟಕದಲ್ಲಿ 1000 ಪುರುಷರಿಗೆ 964 ಮಹಿಳೆಯರಿರುವರು. ಕಳೆದು ಹೋದ ಮಹಿಳೆಯರ ಸಂಖ್ಯೆ 10.84 ಲಕ್ಷ.

'ವರದಕ್ಷಿಣೆ' ಗೆ ಅಸಂಖ್ಯಾತ ಮಹಿಳೆಯರು ಬಲಿಯಾಗುತ್ತಿದ್ದಾರೆ. ಸಾವಿನ ಪ್ರಮಾಣ ಹೆಚ್ಚಾಗಿದೆ. 1996 ರಲ್ಲಿ 5513 ಮಹಿಳೆಯರು ಬಲಿಯಾದರೆ 2001 ರಲ್ಲಿ 6851ಕ್ಕೆ ಬಲಿ ಪ್ರಮಾಣ ಏರಿದೆ. ಇದು ಸರಕಾರಿ ದಾಖಲೆ ಮಾತ್ರ. ದಾಖಲಾಗದ ಪ್ರಕರಣಗಳು ಮೂರು ಪಟ್ಟಿನಷ್ಟು ಹೆಚ್ಚಿವೆ.

ಈ 'ವರದಕ್ಷಿಣೆ'ಯ ಪೆಡಂಭೂತವು ಅಂತರ್ರಾಷ್ಟ್ರಮಟ್ಟದ ಮಾರುಕಟ್ಟೆ ಏರು ಪೇರಿನೊಂದಿಗೆ ಸಂಬಂಧ ಹೊಂದಿದೆ. ಆದ್ದರಿಂದಲೇ ಜನವಾದಿಯು ಒಂದೆಡೆ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಹೋರಾಡುತ್ತಲೇ, ಇನ್ನೊಂದೆಡೆ ಸಾಮಾಜಿಕ ಅನಿಷ್ಟವಾಗಿ ಬೆಳೆಯುತ್ತಿರುವ ವರದಕ್ಷಿಣೆಯ ವಿರುದ್ಧ ಯುವಜನಾಂಗವನ್ನು ಸ್ವಾಭಿಮಾನದತ್ತ

ಕನಸುಗಳು ನನಸಾಗುವುದೆಂದು?



ಅಣಿನೆರೆಸುವ ಕೆಲಸ ಮಾಡಿದೆ. ಸರಳ ವಿವಾಹಗಳನ್ನು ಪ್ರಚುರ ಪಡಿಸುತ್ತ 'ವರದಕ್ಷಿಣೆ' ಧಿಕ್ಕರಿಸಲು ಕರೆಕೊಡುತ್ತ ಜನವಾದಿ ಕೆಲಸ ಮಾಡುತ್ತಿದೆ.

ಕುಟುಂಬದೊಳಗಿನ ಕಣ್ಣೀರ ಹನಿಗಳು : ಎಷ್ಟೋ ಸಾರಿ ನಾಲ್ಕು ಗೋಡೆಯ ಹೊರಗಿನ ದೌರ್ಜನ್ಯಗಳು ತಕ್ಷಣ ಸುದ್ದಿಯಾಗುತ್ತವೆ. ಮಾನವೀಯ ಸಂಘ- ಸಂಸ್ಥೆಗಳು- ವ್ಯಕ್ತಿ- ಶಕ್ತಿಗಳು ಅನ್ಯಾಯದ ವಿರುದ್ಧ ದನಿ ಎತ್ತುತ್ತಾರೆ. ಆದರೆ ಕುಟುಂಬದೊಳಗೆ ಮಹಿಳೆ ಅನುಭವಿಸುವ ಹಲ್ಲೆ, ಅವಮಾನ, ಹಿಂಸೆ, ದೌರ್ಜನ್ಯಗಳು

ದಿನವಿಡೀ ದುಡಿ ದುಡಿದು ಹಣ್ಣಾದಾಗಲೂ 'ಹೆಣ್ಣು' ಎಂಬ ಕಾರಣಕ್ಕೆ ಅವಳು ಒದೆತ, ಬಯ್ಗಳ, ಹೊಡೆತ, ಅನುಭವಿಸಬೇಕಾಗುತ್ತದೆ. ಈಚೆಗಿನ ಒಂದು ವರದಿಯ ಪ್ರಕಾರ ಶೇಕಡ 50. ಕ್ಕೂ ಹೆಚ್ಚು ಮಹಿಳೆಯರು ಗಂಡನಿಂದ ಹೊಡೆತ ತಿನ್ನುತ್ತಾರೆ. ಶೇಕಡ 66 ರಷ್ಟು ಮಹಿಳೆಯರ ಮೇಲೆ ಮಾನಸಿಕ ಮತ್ತು ದೈಹಿಕ ಹಲ್ಲೆ ನಡೆಯುತ್ತದೆ. ಉ. ಪ್ರದೇಶದ ವಿ.ವಿ. ಯ ಸಮೀಕ್ಷೆಯ ಪ್ರಕಾರ ಶೇ.50 ಪುರುಷರು ತಮ್ಮ ಪತ್ನಿಯರನ್ನು ದೈಹಿಕವಾಗಿ ಹಿಂಸಿಸುವುದಾಗಿ ಒಪ್ಪಿಕೊಂಡಿದ್ದಾರೆ. ಇನ್ನೊಂದು ಸಮೀಕ್ಷೆಯ ಪ್ರಕಾರ ಶೇ.43.5 ರಷ್ಟು ಮಹಿಳೆಯರು ತಮ್ಮ ವೈವಾಹಿಕ ಜೀವನದಲ್ಲಿ ಒಮ್ಮೆಯಾದರೂ ಗಂಡನಿಂದ ಹಿಂಸಾಚಾರಕ್ಕೆ ಒಳಗಾಗಿದ್ದಾರೆ. ಶೇ 40.5 ಮಹಿಳೆಯರು ಲೈಂಗಿಕ ಹಿಂಸೆಗೆ ಒಳಗಾಗಿದ್ದಾರೆ. ವೈವಾಹಿಕ ಜೀವನದ ಚೌಕಟ್ಟಿನಲ್ಲಿಯೂ ಮಹಿಳೆಗೆ ಲೈಂಗಿಕ ಸ್ವಾತಂತ್ರ್ಯವಿಲ್ಲ.

ಕುಟುಂಬದೊಳಗಿನ ಹಿಂಸೆ ತಡೆಗಟ್ಟಲು ಕೇಂದ್ರ ಸರಕಾರದ ಮುಂದಿರುವ 'ಮಸೂದೆ' ಯಲ್ಲಿಯೂ ಮಹಿಳಾಪರ ಸೂಚನೆಗಳಿಲ್ಲದ್ದು ವಿಷಾದ.

ವಿಧವೆ ಮತ್ತು ಪರಿತ್ಯಕ್ತೆಯರ ಗೋಳು

ಈ ಪಾಳೇಗಾರಿ ಜಮೀನ್ದಾರಿ ಸಮಾಜವು ಪುರುಷ ಪ್ರಧಾನ ವ್ಯವಸ್ಥೆಯನ್ನು ಪೋಷಿಸಿಕೊಂಡು ಬರುತ್ತದೆ. ಆದ್ದರಿಂದಲೇ ಮಹಿಳೆಯನ್ನು ಬದುಕಿನುದ್ದಕ್ಕೂ ಅವಮಾನಿಸುತ್ತದೆ. ಶೋಷಿಸುತ್ತದೆ ಮತ್ತು ದಮನ ಮಾಡಲು ಮುಂದಾಗುತ್ತದೆ. ಈ ಅಗ್ನಿಕುಂಡದಲ್ಲಿ ಅಸಂಖ್ಯಾತ 'ವಿಧವೆ'ಯರು ಬೆಂದು ಬಸವಳಿಯುತ್ತಿದ್ದಾರೆ.

ತವರಿನಲ್ಲಾಗಲಿ, ಗಂಡನ ಮನೆಯಲ್ಲಾಗಲಿ ಚೂರು ಆಸ್ತಿಯ ಹಕ್ಕೂ ದಕ್ಕದ ವಿಧವೆಯರು ಮತ್ತು ಪರಿತ್ಯಕ್ತೆಯರು ಜೀವನದ ತುಂಬ ಯಾರ ಯಾರದೋ ಸೇವೆ- ಚಾಕರಿ ಮಾಡಿಕೊಂಡು ಕಾಲ ತಳ್ಳುವ ಸ್ಥಿತಿ ಇದೆ.

ಕೆಲಸ ಮಾಡುವ ಸ್ಥಳದಲ್ಲಿ ಹಿಂಸೆ

ಮಹಿಳೆಯು ಅತ್ಯಂತ ಕಡಿಮೆ ಕೂಲಿದರದಲ್ಲಿ ಸಂಘಟಿತ ಮತ್ತು ಅಸಂಘಟಿತ ಕ್ಷೇತ್ರಗಳಲ್ಲಿ ಹೆಚ್ಚು ಸಮಯ ದುಡಿಯುತ್ತಿದ್ದಾಳೆ. ಖಾಯಂ ನೌಕರಿ, ತಾತ್ಕಾಲಿಕ ನೌಕರಿಗಳಲ್ಲಿಯೂ ದುಡಿಯುತ್ತಿದ್ದಾಳೆ. ಆದರೆ ಎಲ್ಲ ಕಡೆಯೂ 'ಮಹಿಳೆ' ಎಂಬ ಕಾರಣಕ್ಕೆ ಅವಳ ಮೇಲೆ ಬಲಾತ್ಕಾರಗಳು, ಹಿಂಸೆಗಳು, ಲೈಂಗಿಕ ಕಿರುಕುಳಗಳು ನಡೆಯುತ್ತಿವೆ. ಹಾಗೆ ನೋಡಿದರೆ ಮಹಿಳೆ ಕೆಲಸ ಮಾಡುವ ಸ್ಥಳದಲ್ಲಿ ಒಂದು ಲೈಂಗಿಕ ಹಿಂಸೆ ವಿರೋಧಿ ದೂರು ಸಮಿತಿಯನ್ನು ರಚಿಸಿ. ಆ ಸಮಿತಿಗೆ ಅಲ್ಲಿ ಕೆಲಸ ಮಾಡುವ ಮಹಿಳೆ ತನ್ನ ಮೇಲಾಗುವ ಹಿಂಸೆ, ಅನ್ಯಾಯಗಳ ಕುರಿತು ದೂರು ಕೊಟ್ಟಲ್ಲಿ, ಆ ಸಮಿತಿ ದೂರನ್ನು ಪಡೆದು ಕ್ರಮಕ್ಕಾಗಿ ಶಿಫಾರಸ್ಸು ಮಾಡುವ ಹಕ್ಕು ಹೊಂದಿದೆ. ಸುಪ್ರಿಂ ಕೋರ್ಟ್ ಇಂತಹ ಸಮಿತಿಗಳನ್ನು ರಚಿಸಲು ತೀರ್ಪು ಕೊಟ್ಟಿದೆ. ಎಲ್ಲೋ ಅಲ್ಲೊಂದು ಇಲ್ಲೊಂದು ಸಮಿತಿ ರಚನೆ ಬಿಟ್ಟರೆ ಈ ತೀರ್ಪು ಜಾರಿಯಾಗಿಲ್ಲ.

ದಲಿತ ಮಹಿಳೆಯ ನೋವುಗಳು

ಭಾರತವು ಶ್ರೇಣೀಕೃತ ವ್ಯವಸ್ಥೆಯನ್ನು ಹೊಂದಿದೆ. ಅದರಲ್ಲೂ ಹಿಂದುತ್ವದ ಹೆಸರಿನಲ್ಲಿ ನಡೆಯುವ ಜಾತಿ ತಾರತಮ್ಯಕ್ಕೆ ಮಹಿಳೆ ಬಲಿಯಾಗಿ ದುಪ್ಪಟ್ಟು ಶೋಷಣೆ ಮತ್ತು ಅವಮಾನ ಎದುರಿಸುತ್ತಿದ್ದಾಳೆ. ದಲಿತ ಮಹಿಳೆಯು ಮಹಿಳೆಯಾಗಿ ಮನೆಯಲ್ಲೂ ಮತ್ತು ಹೊರಗೂ ಎಲ್ಲ ಮಹಿಳೆಯರಂಥದೇ ತಾರತಮ್ಯ ಅನುಭವಿಸುತ್ತಾಳೆ. ಆದರೆ ಇದೇ ಸಂದರ್ಭದಲ್ಲಿ 'ದಲಿತ ಮಹಿಳೆ' ಎಂಬ ಕಾರಣಕ್ಕೆ ಈ ಅಸಮಾನ ಸಮಾಜದಲ್ಲಿ ಅಸ್ಪೃಷ್ಯತೆ, ಅವಮಾನಗಳನ್ನು ಎದುರಿಸುತ್ತಿದ್ದಾಳೆ.

ದಲಿತ ಮತ್ತು ಅಲ್ಪಸಂಖ್ಯಾತ ಮಹಿಳೆಯರ

ರೆಕ್ಕೆಯಿಲ್ಲದ ವಲಸೆ ಹಕ್ಕಿ(ಮಹಿಳೆ)ಯ ಬದುಕು

ಕೃಷಿ ಬಿಕ್ಕಟ್ಟಿನಿಂದ ಉಂಟಾಗುವ ಎಲ್ಲಾ ರೀತಿಯ ದುಷ್ಪರಿಣಾಮಗಳಿಗೆ ಮಹಿಳೆಯೇ ಹೆಚ್ಚು ಬಲಿಯಾಗಬೇಕಾಗುತ್ತದೆ ಎನ್ನುವುದಕ್ಕೆ 'ವಲಸೆ' ಹೋದ ಕುಟುಂಬದೊಳಗೆ ಇಣುಕಿದರೆ ಅರಿವಾಗುತ್ತದೆ. ವಲಸೆ ಕಾರಣದಿಂದಾಗಿ ಶಿಕ್ಷಣದಿಂದಲೂ ಹೆಣ್ಣುಮಗಳೇ ವಂಚಿತಳಾಗಬೇಕಾಗುತ್ತದೆ. 6-7 ವರ್ಷ ವಯಸ್ಸಿನ ಹೆಣ್ಣುಮಗುವನ್ನು ದುಡಿಸುವುದಿದೆ. ಆ ಮಗು ಪಟ್ಟಣದಲ್ಲಿ ಬೆಳೆಯುತ್ತಿರುವ ಎಲ್ಲಾ ವಿಕೃತಗಳಿಗೆ ಬಲಿಯಾಗಬೇಕು. ಅವಳು ದುಡಿದುಡಿದು ಮನೆ ನಿಭಾಯಿಸಬೇಕಾಗುತ್ತದೆ. ಅಲ್ಲೂ ಅಸಮಾನ ಕೂಲಿ ತಪ್ಪಿದ್ದಲ್ಲ. ಗಂಡಸಿಗೆ 80 ರೂ ಕೊಟ್ಟರೆ ಹೆಂಗಸಿಗೆ 30-40 ರೂಪಾಯಿ ಅಷ್ಟರಲ್ಲಿಯೇ ಅವಳು ಬದುಕಿನ ರಥ ಓಡಿಸಬೇಕು.

ಹೀಗೆ ಕರ್ನಾಟಕದ ಜನರ ಬದುಕಿನಲ್ಲಿ ಎರಗಿದ ಸಂಕಷ್ಟಗಳ ಪರಿಹಾರಕ್ಕಾಗಿ ರಾಜ್ಯ ಸರಕಾರ ವಾಗಲಿ ಕೇಂದ್ರ ಸರಕಾರವಾಗಲಿ ಮುಂದೆ ಬರಲೇ ಇಲ್ಲ. ಕರ್ನಾಟಕದ ಮಹಿಳೆಯು ಸರಕಾರದ ಜನ ವಿರೋಧಿ ಆಟಗಳನ್ನು ಎದುರಿಸುತ್ತ ಬಂದಳು. ಕೈಯಲ್ಲಿ ರೇಷನ್ ಕಾರ್ಡ್ ಇಲ್ಲ. ರೇಷನ್ ಕಾರ್ಡ್ ಇದ್ದರೂ ರೇಷನ್ ಸಿಗುವುದಿಲ್ಲ. ವಿದ್ಯುತ್ ಬೆಲೆ ಮುಗಿಲು ಮುಟ್ಟಿ ಭಾಗ್ಯಜ್ಯೋತಿ ಬಳಕೆದಾರರ ಮನೆಗೂ ಮೀಟರ್‌ಗಳು ಬಂದು ಗಾಬರಿಯಾಗುವಂತ ಬಿಲ್‌ಗಳು ಕೈಸೇರಿದವು. ವಿದ್ಯುತ್ ಖಾಸಗಿಯವರ ಉಡಿ ಸೇರಿತು. ಜೀವನ ನಡೆಸಲು ಸೂರಿಲ್ಲ. ಆರೋಗ್ಯ ಕೆಟ್ಟಾಗ ಸರಕಾರಿ ಆಸ್ಪತ್ರೆಗಳಲ್ಲಿ ಒಂದೇ ಒಂದು ಗುಳಿಗೆ ಸಿಗುವುದಿಲ್ಲ. ಪ್ರವೇಶ ಫೀಸ್ ಹೆಚ್ಚಿಸಿದ್ದಾರೆ. ವೈದ್ಯರು ಕಣ್ಮುಚ್ಚಿ ಚೀಟಿ ಬರೆಯುತ್ತಾರೆ.

ನಮ್ಮ ದೇಶದ ಶೇ.83ರಷ್ಟು ಮಹಿಳೆಯರು ಕಬ್ಬಿಣಾಂಶದ ಕೊರತೆಯಿಂದ ನರಳುತ್ತಿರುವರು. ರಕ್ತಹೀನತೆ ಮಹಿಳೆಯರ ಪಾಲಿಗೆ ಸಾಮಾನ್ಯ ಸಂಗತಿಯಾಗಿದೆ. ಎಲ್ಲರಿಗೂ 'ಆರೋಗ್ಯ' ಎಂಬ ಸುಳ್ಳು ಘೋಷಣೆಯಲ್ಲಿಯೇ ಸರಕಾರ ಕಾಲ ತಳ್ಳುತ್ತಿದೆ.

ನೋವುಗಳನ್ನ ಇನ್ನಷ್ಟು ಮತ್ತಷ್ಟು ಅರಿತು ಹೋರಾಟದ ಹಾದಿ ಹುಡುಕಲು ದಲಿತ ಮತ್ತು ಅಲ್ಪಸಂಖ್ಯಾತ ಮಹಿಳೆಯರ ಸಮಾವೇಶಗಳನ್ನು ಜನವಾದಿ ಸಂಘಟಿಸಿದೆ.

ಜಾತಿ, ಧರ್ಮ ಮತ್ತು ಧರ್ಮಗ್ರಂಥಗಳ ಹೆಸರಿನಲ್ಲಿ ಮಹಿಳೆಯನ್ನು ದಮನಿಸುವ ಆಚರಣೆಗಳ ವಿರುದ್ಧ ಜನವಾದಿ ದನಿ ಎತ್ತಬೇಕಿದೆ.

ಕೋಮು ಹಿಂಸೆ

ಭಾರತದಲ್ಲಿ ಬ್ರಿಟಿಷರು ಕೋಮುವಾದವನ್ನು ಇನ್ನಷ್ಟು ಗಟ್ಟಿಗೊಳಿಸಿದರು. ಕೋಮು ಹೆಸರಲ್ಲಿಯೇ ಒಡೆದು ಆಳುವ ನೀತಿ ಅನುಸರಿಸಿದರು. ಕ್ರಮೇಣ ಭಜರಂಗದಳ ವಿಶ್ವ ಹಿಂದೂ ಪರಿಷತ್, ಹೀಗೆ ಮುಂತಾದ ಸುಳ್ಳು ಹಿಂದುತ್ವ! ಪ್ರತಿಪಾದಿಸುವ ಸಂಘಟನೆಗಳ ಮೂಲಕ ಒಂದು ಜನಾಂಗದ ವಿರುದ್ಧ ಮತ್ತೊಂದು ಜನಾಂಗವನ್ನು ಎತ್ತಿಕಟ್ಟುವಂತಹ ದ್ವೇಷ ಸಂಸ್ಕೃತಿಯನ್ನು ಜಾರಿಗೊಳಿಸಲಾಯಿತು.

ಕರ್ನಾಟಕದಲ್ಲೂ ಈ ಸಂಘ ಪರಿವಾರದವರು ಈಗ ಎಲ್ಲ ಕಡೆಗೆ ಕೈ ಕಾಲು ಚಾಚಿದ್ದಾರೆ. ಒಂದು ಕೋಮಿನ ಮಹಿಳೆಯರನ್ನು ಇನ್ನೊಂದು ಕೋಮಿನ ಮಹಿಳೆಯರ ಮೇಲೆ ಎತ್ತಿಕಟ್ಟಿ ಹಲ್ಲೆ ನಡೆಸುತ್ತಾರೆ.

ಆದ್ದರಿಂದ ಕರ್ನಾಟಕದಲ್ಲಿ 'ಜನವಾದಿ'ಯು ಕೋಮುವಾದದ ವಿರುದ್ಧ ನಿರಂತರ ಚಳುವಳಿ ನಡೆಸಬೇಕಿದೆ. ಕರ್ನಾಟಕವು 'ಜಾತ್ಯತೀತ' ಪರಂಪರೆಯ ನಾಡಾಗಿದೆ. ಇಲ್ಲಿ ಶರಣರು, ಸೂಫಿ, ಸಂತರು, ಅವಧೂತರು, ಜಾನಪದ-ತತ್ವಪದಕಾರರು ಜನಸಾಮಾನ್ಯರ ನಡುವೆ ಮಾನವೀಯತೆ ದೀಪ ಹೊತ್ತಿಸಿ ಹೋಗಿದ್ದಾರೆ. ಈ ಎಲ್ಲ ಚಳುವಳಿಗಳನ್ನು ಅರಿಯುತ್ತ ಕೋಮುವಾದದ ಕಾರ್ಗತ್ತಲೆ ತೊಡೆಯಲು ಒಟ್ಟು ಸಮಾನತೆಯ ಸೂರ್ಯೋದಯದ ಕನಸು ನನಸಾಗಿಸಲು ಶ್ರಮಿಸಬೇಕಿದೆ.

ರಾಜಕೀಯ ಹಿಂಸೆ

ರಾಜಕೀಯದಲ್ಲಿ ಅಂದರೆ ನೀತಿ ನಿರೂಪಣಾ ಸ್ಥಾನಗಳಲ್ಲಿ ಮಹಿಳೆಯರು ಹೆಚ್ಚೆಚ್ಚು ತೊಡಗಬೇಕು ಮತ್ತು ಆ ಸ್ಥಾನಗಳಿಗೆ ಹೋದ ಮೇಲೆ ಮಹಿಳಾಪರ ಕಾನೂನು ರಚನೆ ಮತ್ತು ಜಾರಿಗಾಗಿ ಶ್ರಮಿಸಬೇಕು. ಆದರೆ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅತ್ಯಂತ ಕೆಳಮಟ್ಟಕ್ಕೆ ತಳ್ಳುವ ಚಟುವಟಿಕೆಗಳು ಈಚೆಗಿನ ವರ್ಷಗಳಲ್ಲಿ ಅಧಿಕಗೊಳ್ಳುತ್ತಿವೆ. ರಾಜಕೀಯದಲ್ಲಿ ಮಹಿಳೆಯರ ವಿರುದ್ಧ ಮಹಿಳೆಯರನ್ನು ಎತ್ತಿಕಟ್ಟುವ ಕುತಂತ್ರವು ಪಾಳೇಗಾರಿ ಮನಸುಗಳು ಮಾಡುತ್ತಿವೆ.

ಆ ಪಾಳೇಗಾರಿ ಕುತಂತ್ರವನ್ನು ಅರಿತು ಮಹಿಳೆಯು ತನ್ನ ಸ್ವಾಭಿಮಾನ ಅಸ್ತಿತ್ವ ಎತ್ತಿ ಹಿಡಿದರೆ ಅಂತಹ ಮಹಿಳೆಯನ್ನು ಮಾನಸಿಕವಾಗಿ ಹಿಂಸಿಸಿ 'ದಮನ' ಮಾಡುವ ಪ್ರವೃತ್ತಿ ರಾಜಕೀಯದಲ್ಲಿ ಕಾಣುತ್ತಿದ್ದೇವೆ. ಕರ್ನಾಟಕದಲ್ಲಿಯೇ ಇದಕ್ಕೆ ಸರಿಯಾದ ಉದಾಹರಣೆ ಆನೇಕಲ್ಲಿನ ತಾಲ್ಲೂಕು ಪಂಚಾಯತ್ ಅಧ್ಯಕ್ಷೆ 'ಮಂಜುಳಾ ಪ್ರಕರಣ'. ರಾಜಕೀಯ ಪ್ರವೇಶಿಸಿದ ಮಹಿಳೆಯರನ್ನು ಈ ಬಂಡವಾಳಶಾಹಿ ಪಕ್ಷಗಳು ನಡೆಸಿಕೊಳ್ಳುವ ರೀತಿ ಅತ್ಯಂತ ದುಷ್ಟತೆಯಿಂದ ಕೂಡಿದೆ ಎನ್ನುವುದಕ್ಕೆ ಬೆಂಗಳೂರಿನ ಕಾರ್ಪೋರೇಟರ್ ಶೈಲಜ ಕೊಲೆ ಪ್ರಕರಣವೇ ಸಾಕ್ಷಿ.

ಕೃಷಿಯಲ್ಲಿ ಮಹಿಳೆ

ಅತ್ತ ಒಕ್ಕಲುತನ ಕುಸಿಯುತ್ತಿದ್ದರೂ ಇತ್ತ ಕೂಲಿ ಕೆಲಸವಿಲ್ಲದಿದ್ದರೂ ಗ್ರಾಮೀಣ ಮಹಿಳೆಯ ಜೀವನದ ಬಂಡಿಗೆ ನಿರಂತರ ಚಕ್ರವಾಗುತ್ತಿದ್ದಾಳೆ. ಹಾಗೆ ನೋಡಿದರೆ ಒಕ್ಕಲುತನದ ಕೆಲಸ ಕಾರ್ಯಗಳ ಪೈಕಿ ಶೇ.85 ರಷ್ಟು ಕೆಲಸಗಳು ಮಹಿಳೆಯೇ ಮಾಡುತ್ತಾಳೆ. ಕೃಷಿಯಲ್ಲಿ ಪುರುಷನಿಗಿಂತ ಹೆಚ್ಚು ದುಡಿದರೂ ಕೂಲಿ ಮಾತ್ರ ಕಡಿಮೆಯೇ. ಪುರುಷನಿಗೆ 40 ಇದ್ದರೆ ಮಹಿಳೆಗೆ 15 ರಿಂದ 25 ರೂ.

[illegible]
ಮಹಿಳೆಯರ ಕಣ್ಣೀರಕತೆಗೆ ಮೌನದ ಮುನ್ನುಡಿ ಬರೆದು ಬಿಸಿಲ ಬೆಂಕಿ ಉಗುಳಿ ಮಾತಾಡದೆ ಅಸ್ತಂಗತನಾಗುತ್ತಾನೆ.

ಚುನಾವಣೆಗಳಲ್ಲಿ ಜನತೆಗಲ್ಲ ಅಂಗೈಯಲ್ಲಿ ಆಕಾಶ ತೋರಿಸಿ ಕೇಂದ್ರದ ಗದ್ದುಗೆ ಹಿಡಿದ ಬಿಜೆಪಿ ಸರಕಾರ ಜನರ ಮೇಲೆರಗಿದ ಬರವನ್ನು ಎದುರಿಸಲು ಬರಪರಿಹಾರ ಕಾಮಗಾರಿ ಕೆಲಸ ತಗೊಳ್ಳಲಿಲ್ಲ.

ಬಡಜನತೆಯು ಕೂಲಿ ಮಾಡಿ 'ಕಾಳು' ಪಡೆದು ಹಸಿವಿನಿಂದ ಪಾರಾಗಬೇಕಾದ "ಕೂಲಿಗಾಗಿ ಕಾಳು" ಯೋಜನೆಯ ಅಕ್ಕಿಯನ್ನು ಕೂಲಿಕಾರರಿಗೆ ಕೊಡದೆ ಜನಪ್ರತಿನಿಧಿಗಳು, ಅಧಿಕಾರಿಗಳು ಶಾಮಿಲಾಗಿ ಅಪೋಷನ ಮಾಡಿರುವ ಅತ್ಯಂತ ಅಮಾನವೀಯ ಮತ್ತು ಕ್ರೂರ ಪ್ರಕರಣವು ಕರ್ನಾಟಕದಲ್ಲಿ ಬೆಳಕಿಗೆ ಬಂದಿದೆ. ಪ್ರತಿ ಜಿಲ್ಲೆಗಳಲ್ಲಿ ಕೋಟಿಗಟ್ಟಲೇ ಅಕ್ಕಿ ಹಗರಣ ನಡೆದಿದೆ. ಅತ್ಯಂತ ಕಡಿಮೆ ಬೆಲೆಗೆ ಕದ್ದು ಅಕ್ಕಿಯನ್ನು ಹಡಗಿನ ಮೂಲಕ ವಿದೇಶಕ್ಕೆ ಮಾರುವಂತಹ ದೇಶದ್ರೋಹಿ ಜಾಲಗಳು ಪತ್ತೆಯಾಗಿವೆ.

ನಿರುದ್ಯೋಗ

ಆಹಾರ ನೀರು, ಮನೆ, ಶೌಚಾಲಯದ ಸೌಲಭ್ಯ ಮತ್ತು ರೇಷನ್‌ಕಾರ್ಡ್‌ಗಳಿಂದ ಮಹಿಳೆಯರನ್ನು ವಂಚಿಸಿದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಖಾಸಗೀಕರಣ, ಉದಾರೀಕರಣ, ಜಾಗತೀಕರಣವನ್ನು ಭರಾಟೆಯಿಂದ ಜಾರಿ ಮಾಡಲು ಹೊರಟಿವೆ. ಆ ಕಾರಣವಾಗಿಯೇ ಹಳ್ಳಿ-ಪಟ್ಟಣಗಳೆರಡರಲ್ಲೂ ಅಕ್ಷರಸ್ಥರು ಮತ್ತು ಅನರಕ್ಷರಸ್ತರೆಲ್ಲ ನಿರುದ್ಯೋಗಿಗಳಾಗುತ್ತಿದ್ದಾರೆ.

ನಿರುದ್ಯೋಗವು ಮಹಿಳೆಯರನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ. ಬೊಂಬಾಯಿ ಪುಣೆಯಂತಹ ಪಟ್ಟಣಗಳಲ್ಲಿ ಕೆಲಸ ಸಿಗದ ಮಹಿಳೆಯರು ವೇಶ್ಯಾವೃತ್ತಿಗಿಳಿಯುವ ಪರಿಸ್ಥಿತಿ ಬಂದಿದೆ. ಸರಕಾರದ

ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣದ ನೀತಿಯ ಕಾರಣದಿಂದಾಗಿ ಮುಚ್ಚಿಹೋಗುವ ಕಾರ್ಖಾನೆಗಳು ಖಾಸಗಿಯಾಗುವ ಸಾರ್ವಜನಿಕ ವಲಯಗಳಿಂದ ಹೊರಬರುವ ಮಹಿಳಾ ನೌಕರಸ್ಥರ ಪಾಲಿಗೆ



ದುರ್ಭರ ಬದುಕಿನ ಬಿಡುಗಡೆಗೆ ಹೋರಾಟದ ದಾರಿ

'ಬದುಕು' ರೌರವ ನರಕವಾಗಿರುತ್ತಿದೆ.

ಒಕ್ಕಲುತನದಲ್ಲಿ ದುಡಿಯುತ್ತಿರುವ ಅಸಂಖ್ಯಾತ ಮಹಿಳೆಯರು ಮನೆಗಳಲ್ಲಿ ಗುಡಿ ಕೈಗಾರಿಕೆಗಳನ್ನು ನಡೆಸುತ್ತಿರುವವರೂ ಬೀದಿಗೆ ಬಂದಿದ್ದಾರೆ.

ಈಚೆಗೆ ಕರ್ನಾಟಕ ಸರ್ಕಾರವು ಖಾಲಿ ಇರುವ ಹುದ್ದೆಗಳ ಪೈಕಿ ಶೇ 80 ಹುದ್ದೆಗಳನ್ನು ಕಡ್ಡಾಯವಾಗಿ ರದ್ದು ಮಾಡಿರುವ ಅಪಾಯಕಾರಿ ತೀರ್ಮಾನ ತೆಗೆದುಕೊಂಡಿದೆ. ನೌಕರಿ ಸಿಕ್ಕಿತೆಂದು ಕಾಯುತ್ತಿರುವ ಅಸಂಖ್ಯಾತ ಮಹಿಳೆಯರಿಗೆ ಕರ್ನಾಟಕದ ಸರ್ಕಾರ ನಿರಾಶೆಯ ಕೊಡುಗೆ ನೀಡಿದೆ. ಹಾಗೆ ನೋಡಿದರೆ ಕಾಂಗ್ರೆಸ್ ಮತ್ತು ದಳ(ಎಸ್) ಸರ್ಕಾರವು ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮ (CMP)ದಲ್ಲಿ ಮಹಿಳೆಯರಿಗೆ ಉದ್ಯೋಗ ಭದ್ರತೆಯಾಗಲಿ, ಆರ್ಥಿಕ ಸಹಾಯವಾಗಲಿ ಮತ್ತಿತರ ಯಾವುದೇ ವಿಶೇಷ ಬಜೆಟ್‌ಗಳ ಯೋಜನೆ ಹೊಂದಿಲ್ಲದಿರುವುದು ಖಂಡನಾರ್ಹ ಸಂಗತಿಯಾಗಿದೆ.00

ಒಂದೆಡೆ ನಿರುದ್ಯೋಗ ಮತ್ತೊಂದೆಡೆ ಹೆಚ್ಚುತ್ತಿರುವ ಬೆಲೆಗಳಿಂದ ಮಹಿಳೆ ಜರ್ಝರಿತಳಾಗುತ್ತಿದ್ದಾಳೆ. ಜೀವನಾವಶ್ಯಕ ವಸ್ತುಗಳ ಬೆಲೆಗಳು ಹೆಚ್ಚಿವೆ. ವಿದ್ಯುತ್, ನೀರು, ಶಿಕ್ಷಣ, ಆರೋಗ್ಯ ದುಬಾರಿಯಾಗಿದೆ. ಅಕ್ಕಿ, ಗೋದಿ, ಸಕ್ಕರೆ, ಸೀಮೆ ಎಣ್ಣೆ, ಅಡಿಗೆ ಅನಿಲ, ಹೀಗೆ ಎಲ್ಲವೂ ಮೂರು ಪಟ್ಟರಷ್ಟು ಬೆಲೆ ಹೆಚ್ಚಾಗಿವೆ. ಜನಸಾಮಾನ್ಯರು ಬದುಕುವ ಬಯಕೆಯೇ ಬತ್ತಿ ಹೋಗುವಂತೆ ಸರಕಾರದ ಬಜೆಟ್‌ಗಳು ಬರುತ್ತಿವೆ. ಈ ಕಾರಣದಿಂದಾಗಿ ಮಹಿಳೆಯು ಇಡೀ ಕುಟುಂಬವನ್ನು ನಿಭಾಯಿಸಲಿಕ್ಕಾಗದೇ ಸಾಲಗಾರಳಾಗುವ ಪರಿಸ್ಥಿತಿ ಬಂದಿದೆ. ಖಾಸಗಿ ಸಾಲವೂ ಬೆಳೆಯುತ್ತಿದೆ. ನಿರುದ್ಯೋಗ ಮತ್ತು ಬೆಲೆಗಳ ಹೆಚ್ಚಳದಿಂದಾಗಿ ಮಹಿಳೆಯು ಅಪಮಾನದ ಬಾಳು ಬದುಕುವಂತಾಗುತ್ತಿದೆ. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರಗಳೇ ಹೊಣೆಯಾಗುತ್ತವೆ. ಆದ್ದರಿಂದಲೇ **ಜನವಾದಿ ಮಹಿಳಾ ಸಂಘಟನೆಯು ಕನಿಷ್ಠ ನೂರು ದಿನಗಳ ಭರವಸೆಯ ಕೆಲಸವನ್ನು ಮಹಿಳೆಯರಿಗೆ ಕೊಡಬೇಕೆಂದು ಕೇಂದ್ರ ಸರಕಾರಕ್ಕೆ ಒತ್ತಾಯಿಸಿದೆ. ಮತ್ತು ಉದ್ಯೋಗಗಳನ್ನು ಸೃಷ್ಟಿಸಬೇಕೆಂದು ಒತ್ತಾಯಿಸಿದೆ.**

ಶಿಕ್ಷಣ ಮತ್ತು ಮಹಿಳೆ

ಶಿಕ್ಷಣದ ಪ್ರಶ್ನೆಗೆ ಬಂದರೆ ಕರ್ನಾಟಕದ ಮಹಿಳೆಯರ ಅಕ್ಷರದ ಜಗತ್ತು ಕತ್ತಲೆಯ ಕೂಪದಲ್ಲಿ ನರಳುತ್ತಿದೆ. ಅಕ್ಷರವೇ ಅರಿವಿನ ಹೆಬ್ಬಾಗಿಲು. ಅಕ್ಷರದ ಅಸ್ತ್ರದಿಂದ ಬದುಕನ್ನು ಸುಂದರಗೊಳಿಸಲು ಸಾಧ್ಯ ಎಂಬ ಮಾತುಗಳು ಮಹಿಳಾ ಜಗತ್ತಿನಿಂದ ತುಂಬ ದೂರ ಇವೆ. ಕರ್ನಾಟಕದಲ್ಲಿ ಮಹಿಳೆಯರ ಸಾಕ್ಷರತೆಯ ಸ್ಥಿತಿ-ಗತಿಯು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇ.68.7 ರಿಂದ ಶೇ.70.00 ರವರೆಗೆ ಮಹಿಳಾ ಸಾಕ್ಷರತೆ ಇದೆ. ಆದರೆ ಇದೇ ಸಂದರ್ಭದಲ್ಲಿ ಗುಲಬರ್ಗಾದಲ್ಲಿ ಶೇ 24.5 ರಿಂದ ಶೇ 26.00 ರವರೆಗೆ ರಾಯಚೂರು ಶೇ.21.7, ಕೊಪ್ಪಳದಲ್ಲಿ ಶೇ 22.8, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಒಟ್ಟು ಮಹಿಳಾ ಸಾಕ್ಷರತೆಯ ಪ್ರಮಾಣ ದಕ್ಷಿಣ ಕರ್ನಾಟಕದಲ್ಲಿ ಶೇ 63.52 ಇದ್ದರೆ ಉತ್ತರ ಕರ್ನಾಟಕದಲ್ಲಿ ಶೇ 48.99! ಇದೇ ಸಂದರ್ಭದಲ್ಲಿ ಪುರುಷ ಮತ್ತು ಮಹಿಳೆಯರ ನಡುವಿನ ಸಾಕ್ಷರತಾ ಪ್ರಮಾಣದ ಅಂತರ ಶೇ 23.25ರಷ್ಟಿದೆ.

ಮಹಿಳೆಯನ್ನು ಅತ್ಯಂತ ವ್ಯವಸ್ಥಿತವಾಗಿ ಶಿಕ್ಷಣದ ಹಕ್ಕಿನಿಂದ ದೂರ ಇಡುವ ಹುನ್ನಾರಗಳು ನಡೆಯುತ್ತಿವೆ. ಶೇಕಡಾ 60 ಕ್ಕೂ ಹೆಚ್ಚು ಮಹಿಳೆಯರು ಅಕ್ಷರದ ಬೆಳಕೇ ಕಂಡಿಲ್ಲ. ಅಕ್ಷರದ ಹಕ್ಕು ನಮ್ಮೆಲ್ಲರ ಹಕ್ಕು' ಎಂಬ ಘೋಷಣೆ ಹೊತ್ತು ಜನವಾದಿಯ ಬಾವುಟದೊಂದಿಗೆ ಲೇಖನಿಯೂ ಕೈಗೆತ್ತಿಕೊಂಡು ಹೋರಾಡುವುದು ಅನಿವಾರ್ಯವಾಗಲೇಬೇಕು.

ಪತ್ರಿಕೆಗಳಲ್ಲಿ ಲಿಂಗತಾರತಮ್ಯವೂ ತಾಂಡವವಾಡುತ್ತಿದೆ. ಸತಿ ಪದ್ಧತಿಯನ್ನು ವೈಭವೀಕರಿಸಿದ ಪತ್ರಿಕೆಯೂ ಇದೆ.

ರಾಜಕೀಯ ಬದಲಾವಣೆಯಲ್ಲಿ ಮಹಿಳೆಯರು

ಕರ್ನಾಟಕದ ಮಹಿಳೆಯು ಗ್ರಾಮೀಣ ಪ್ರದೇಶದಿಂದ ಪಟ್ಟಣದವರೆಗೂ, ಶ್ರೀಮಂತರಿಂದ ಬಡಾವಣೆಯವರೆಗೂ, ಅನಕ್ಷರಸ್ಥರಿಂದ ಅಕ್ಷರಸ್ಥರವರೆಗೂ ಎಲ್ಲರೂ ಅಮೇರಿಕಾ ಮತ್ತು ಅದರ ಏಳು ಗೆಳೆಯ ದೇಶಗಳು ಹೆಣೆದ ಕುತಂತ್ರದ ದಾಳಗಳಾದ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣಕ್ಕೆ ಬಲಿಯಾಗುವ ಗತಿ ಒದಗಿ ಬಂದಿದೆ. ಆದರೆ ಕರ್ನಾಟಕದ ಮಹಿಳೆಯರು ಸುಮ್ಮನೇ ಕುಳಿತಿಲ್ಲ. ಎಲ್ಲವನ್ನೂ ಸಹಿಸುತ್ತ ನೋವ ನುಂಗುತ್ತ ಹಿಂಜರಿದಿಲ್ಲ. ಬದಲಿಗೆ ಸಂಘಟಿತ ಶಕ್ತಿಯಾಗಿ ಹೋರಾಟದ ಕಣದಲ್ಲಿ ದುಮುಕಿದ್ದಾರೆ.

ಚುನಾವಣಾ ಫಲಿತಾಂಶ ಗಮನಿಸಿದರೆ ಕರ್ನಾಟಕದ ಮಹಿಳೆಯರಲ್ಲಿ ರಾಜಕೀಯ ಪ್ರಜ್ಞೆ ಹೆಚ್ಚಳವಾಗಿದೆ ಎಂಬ ಸಂಗತಿ ಎದ್ದು ಕಾಣುತ್ತದೆ. ಏಕೆಂದರೆ ಈ ಬಾರಿ ಚುನಾವಣೆಯಲ್ಲಿ ಮಹಿಳೆಯರ ಮತಗಳು ಆಳುವ ಕಾಂಗ್ರೆಸ್ ಸರಕಾರದ ವಿರುದ್ಧ ಹಾಗೂ ಕೋಮುವಾದದ ವಿರುದ್ಧ ಉದಾರೀಕರಣ ನೀತಿಗಳ ಚಲಾಯಿಸಲ್ಪಟ್ಟಿವೆ. ಕೋಮುವಾದಿ ಬಿಜೆಪಿಯನ್ನು ಸೋಲಿಸಲು ಸಂಘಟನೆಯ ಕೇಂದ್ರ ಸಮಿತಿಯು ಚುನಾವಣೆಯಲ್ಲಿ ಸಮಸ್ತ ಮಹಿಳೆಯರಿಗೆ ಕರೆಕೊಟ್ಟಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು. ಪ್ರಾದೇಶಿಕ ಅಸಮಾನತೆ ನಿವಾರಣೆ, ಮಹಿಳೆಗೆ ಆಸ್ತಿಯ ಹಕ್ಕಿಗಾಗಿ ಪ್ರಬಲ ಹೋರಾಟ ನಡೆಯಬೇಕಿದೆ.

ಹೀಗೆ ಅಖಿಲಭಾರತ ಜನವಾದಿ ಮಹಿಳಾ ಸಂಘಟನೆಯು ತನ್ನ 5ನೇ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ಮಹಿಳೆಯರ ನೋವ ನಲಿವುಗಳನ್ನು ದುಃಖ-ದುಮ್ಮಾನಗಳನ್ನು ಚರ್ಚಿಸಿ ಪರಸ್ಪರ ಅನುಭವಗಳನ್ನು ಹಂಚಿಕೊಂಡು ಬಲಿಷ್ಠ ಮಹಿಳಾ ಚಳುವಳಿ ಕಟ್ಟಿಬೆಳೆಸುವ ನಿಟ್ಟಿನಲ್ಲಿ ತನ್ಮೂಲಕ ಒಟ್ಟು ಸಮಾನತೆಯ ಸಮಾಜ ಕಟ್ಟಲು ಧೀರೋದಾತ್ತ ಹೆಜ್ಜೆ ಹಾಕಬೇಕಾಗಿದೆ.

ಉದಾರೀಕರಣದ ಪ್ರಭಾವಕ್ಕೆ ಒಳಗಾದ ಮಾಧ್ಯಮಗಳು ಮತ್ತು ಮಹಿಳೆ


ಒಂದೆಡೆ ಶಿಕ್ಷಣದಿಂದ ವಂಚಿತವಾದ ಮಹಿಳಾ ಸಮುದಾಯವನ್ನು ಲಾಭದ ಸರಕಾಗಿಸುವ ಯೋಜನೆ ಹೊಂದಿದ ಉದಾರೀಕರಣದ ಪ್ರಭಾವದಿಂದ ಮಾಧ್ಯಮಗಳು ಹೆಚ್ಚು ಆಕರ್ಷಣೆಗೆ ಒಳಗಾಗಿವೆ. ಖರೀದಿಕೋರ ಸಂಸ್ಕೃತಿಯನ್ನು ಹುಟ್ಟು ಹಾಕಿ ತಾವು ತಯಾರಿಸಿದ ವಸ್ತುಗಳನ್ನು ಭಾರತದಂತಹ ಬಡದೇಶಗಳಲ್ಲಿ ಮಾರಾಟ ಮಾಡಿ ಹಣವನ್ನು ಕೊಳ್ಳೆ ಹೊಡೆಯಲು ಬಹುರಾಷ್ಟ್ರೀಯ ಕಂಪನಿಗಳು ಸಜ್ಜಾಗಿವೆ. ಭಾರತದ ಕೇಂದ್ರ ಸರಕಾರವು ವಿಶ್ವಬ್ಯಾಂಕಿನ ಎಲ್ಲ ಷರತ್ತುಗಳಿಗೆ ಜೈಕಾರಹೇಳಿದ ಕಾರಣವಾಗಿ ನಮ್ಮ ದೇಶದ ಮಹಿಳಾ ಜಗತ್ತು ಬಲಿಯಾಗಬೇಕಾಗಿದೆ.

ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಅತ್ಯಂತ ವ್ಯವಸ್ಥಿತವಾಗಿ ಪೌರಾಣಿಕ, ಸಾಂಪ್ರದಾಯಿಕ ಮತ್ತು ಕಂದಾಚಾರದ ಧಾರವಾಹಿಗಳನ್ನು ಬಿತ್ತರಿಸಲಾ ಗುತ್ತಿದೆ. ಬಹುಪತ್ನಿತ್ವವನ್ನಾಧರಿಸಿದ ಧಾರವಾಹಿಗಳನ್ನು ವೈಭವೀಕರಿಸಲಾಗುತ್ತಿದೆ. ಅತ್ತೆ-ಸೊಸೆಯರ ನಡುವಿನ ಪೈಪೋಟಿ ಪ್ರಚುರಪಡಿಸುವ 'ಹೆಣ್ಣಿಗೆ ಹೆಣ್ಣೇ ಶತ್ರು' ಎಂಬ ಪುರುಷ ಪ್ರಧಾನ ವ್ಯವಸ್ಥೆಯ ಕುತಂತ್ರದ ಘೋಷಣೆಯನ್ನು ಬಿಂಬಿಸಲಾಗುತ್ತಿದೆ.

ಜಾಹಿರಾತುಗಳಲ್ಲೂ ಮತ್ತು ಧಾರವಾಹಿ ಸಿನೇಮಾಗಳಲ್ಲೂ ಮಹಿಳೆಯನ್ನು ಅಶ್ಲೀಲವಾಗಿ ಬಳಸಲಾಗುತ್ತಿದೆ. ಜನವಾದಿಯು ಮಾಧ್ಯಮಗಳಲ್ಲಿ ಮಹಿಳೆಯರನ್ನು ಅಶ್ಲೀಲವಾಗಿ ಮತ್ತು ಸರಕಾಗಿ ಬಳಸುತ್ತಿರುವುದರ ವಿರುದ್ಧ ನಿರಂತರ ಸಂಘರ್ಷ ನಡೆಸಿದೆ.

ಉಯಿಲಿನಿಂದಾಗಿ ಹುಯಿಲು

ಕುರುಡು ಕಾಂಚಾಣ



ಜಿ.ಎಸ್.ಮಣಿ

ಬಿರ್ಲಾ ಕುಟುಂಬದಲ್ಲೊಂದು ಬಿರುಗಾಳಿ

ಟಾಟಾ ಮತ್ತು ಬಿರ್ಲಾಗಳು ಭಾರತದ ದೊಡ್ಡ ಬಂಡವಾಳಶಾಹಿ ಮನೆತನಗಳು. ಬಂಡವಾಳಶಾಹಿಗಳ ಎಲ್ಲ ಲಕ್ಷಣಗಳನ್ನು ಅವರು ತೋರುವುದು ಸಹಜವೇ.

ಈಗ ದೊಡ್ಡ ಹುಯಿಲೆದ್ದಿರುವುದು ಬಿರ್ಲಾ ಮನೆತನದಲ್ಲಿ. ಈ ಕುಟುಂಬದ ಸದಸ್ಯೆ ಶ್ರೀಮತಿ ಪ್ರಿಯಂವದಾ ಬಿರ್ಲಾ ಇತ್ತೀಚೆಗೆ ನಿಧನರಾದರು. ನಿಧನವಾಗುವ ಮುಂಚೆ ಈಕೆ ಉಯಿಲೊಂದನ್ನು ಬರೆದು ರೆಜಿಸ್ಟರ್ ಮಾಡಿದ್ದರು. ಇದರಲ್ಲೇನು ವಿಶೇಷ ಎಂದು ನೀವು ಕೇಳಬಹುದು. ಈ



ಬಿರ್ಲಾ ಕುಟುಂಬ

ಉಯಿಲಿನಲ್ಲಿನ ಆಸ್ತಿಯ ಮೊತ್ತವನ್ನು ತಿಳಿದರೆ ಮೂಗಿನ ಮೇಲೆ ಬೆರಳಿಡುತ್ತೀರಿ. ಆಸ್ತಿಯ ಅಂದಾಜು ಬೆಲೆ ಐದು ಸಾವಿರ ಕೋಟಿ ರೂಪಾಯಿಗಳು!

ದೊಡ್ಡ ಪ್ರಮಾದ (?) ಆಗಿರುವುದು ಎಲ್ಲೆಂದರೆ ಈ ಆಸ್ತಿಯನ್ನು ಅವರು ಕುಟುಂಬದ ಹೊರಗಿನವರೊಬ್ಬರಿಗೆ ಬರೆದಿರುವುದು ಆರ್.ಎಸ್. ಲೋಧಾ ಎನ್ನುವವರು ಈ ಬಿರ್ಲಾ ಕುಟುಂಬದ ಸ್ವಾಮ್ಯದ ಕಂಪನಿಗಳೆಲ್ಲದರ ಲೆಕ್ಕ ಪರಿಶೋಧಕರು. ಈತ ಲೆಕ್ಕ ಪರಿಶೋಧನೆಯ ಜೊತೆಗೆ ಕಂಪನಿಗಳನ್ನು ನಡೆಸುವುದರಲ್ಲೂ ನೆರವು ನೀಡುತ್ತಿದ್ದರು. ಹಲವು ಕಂಪನಿಗಳ ಆಡಳಿತದಲ್ಲೂ ಇದ್ದರು.

ಬಿರ್ಲಾಗಳ ತಕರಾರು ಏನೆಂದರೆ ಈತ ಕುಟುಂಬದ ಸದಸ್ಯನಲ್ಲ, ಹೊರಗಿನವ. ಈತನಿಗೆ ಉಯಿಲನ್ನು ಬರೆಯಬಾರದಿತ್ತು. ಆಸ್ತಿಯನ್ನು ದತ್ತಿ ನೀಡಿದ್ದರೂ ಪರವಾಗಿರಲಿಲ್ಲ. ಹೀಗೆ ಬರೆಯಬಾರದಾಗಿತ್ತು ಎಂಬುದೇ. ಈಗಲೂ ವಿಷಯ ಕೋರ್ಟಿನ ಕಟ್ಟೆ ಏರಿದೆ. ಆಗಲೇ ಹೋರಾಟವು ಪ್ರಾರಂಭವಾಗಿದೆ. ಬಿರ್ಲಾಗಳು ಇದು ನಿಜವಾದ ಉಯಿಲೇ ಅಲ್ಲ ಎನ್ನುತ್ತಿದ್ದಾರೆ. ಲೋಧಾ ಉಯಿಲಿನ ಪ್ರತಿಯನ್ನೇ ನೀಡುತ್ತಿದ್ದಾರೆ.

ಪ್ರಿಯಂವಧಾ ಬಿರ್ಲಾ ದಿವಂಗತ ಮಾಧವ ಪ್ರಸಾಧ್ ಬಿರ್ಲಾ ಅವರ ಪತ್ನಿ. ಈ ದಂಪತಿಗಳಿಗೆ ಮಕ್ಕಳಿಲ್ಲ. ಮಾಧವ ಪ್ರಸಾದ್ ಬಿರ್ಲಾ ನಿಧನರಾದ ನಂತರ ಗೃಹಿಣಿಯಾಗಿ ಗೃಹಕೃತ್ಯಗಳಲ್ಲೇ ತೊಡಗಿದ್ದು ಪ್ರಿಯಂವಧಾ ಎಲ್ಲಾ ಕಂಪನಿಗಳ ಉಸ್ತುವಾರಿ ನೋಡಿಕೊಳ್ಳುತ್ತ ಕಂಪನಿಗಳ ನಿರ್ವಹಣೆಯಲ್ಲಿ ಕುಟುಂಬದ ಆಪ್ತರಾಗಿ ಈ ಕೆಲಸದಲ್ಲಿ ನೆರವು ನೀಡಿದರು.

ಮಕ್ಕಳಿಲ್ಲದ ಕಾರಣ ಬಿರ್ಲಾ ಕುಟುಂಬದವರ ಬಗ್ಗೆ ಒಳ್ಳೆ ಅಭಿಪ್ರಾಯ ಇಲ್ಲವಾದ ಕಾರಣ ಪ್ರಿಯಂವಧಾ ಅವರು ತಮ್ಮ ಆಸ್ತಿಯನ್ನು ಆರ್.ಎಸ್.ಲೋಧಾ ಅವರಿಗೆ ಬರೆದರು ಎನ್ನಲಾಗಿದೆ. ಅಲ್ಲದೆ ಲೋಧಾ ಅವರ ಮಗನನ್ನು ಕಂಪನಿಗಳ ಉಸ್ತುವಾರಿಯಲ್ಲಿ ಪಳಗಿಸಿದ್ದಾರೆ ಎಂದೂ ಹೇಳಲಾಗುತ್ತಿದೆ.

ಈಗ ಬಿರ್ಲಾಗಳೆಲ್ಲರು ಒಂದಾಗಿದ್ದಾರೆ. ಆಸ್ತಿಯಲ್ಲಿ ತಮಗೆ ಚಿಕ್ಕ ಕವಡೆಯೂ ಬೇಡ. ಬೇಕಾದರೆ ಅದು ಪೂರ್ತಿ ದೇಣಿಗೆಯಾಗಿ ಹೋಗಲಿ. ಆದರೆ ಕುಟುಂಬದ ಹೊರಗಿನವರಾದ ಲೋಧಾ ಅವರಿಗೆ ಹೋಗುವುದು ಬೇಡ ಎಂಬುದು ಅವರ ನಿಲುವು. ಹೀಗೆ ಒಗ್ಗಟ್ಟಾಗಿರುವ ಅವರು ಕೋರ್ಟಿನ ಕಟ್ಟೆ ಏರಿದ್ದಾರೆ.

ಉಯಿಲಿಗೆ ಸಾಕ್ಷಿ ಹಾಕಿದ ಇಬ್ಬರು ಸಹ ಈಗ ಅದನ್ನು ಒಪ್ಪಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ.

ಈ ನಡುವೆ ಕೇಸು ಕೋರ್ಟಿಗೆ ಬಂದಾಗ ನ್ಯಾಯಾಧೀಶರು ಬಿರ್ಲಾ ಕುಟುಂಬದವರನ್ನು ನಾನು ಹತ್ತಿರದಿಂದ ಬಲ್ಲವನಾದ್ದರಿಂದ ಈ ಕೇಸನ್ನು ನಡೆಸಲಾರೆ. ಬೇರೆ ನ್ಯಾಯಾಧೀಶರಿಗೆ ಈ ಕೇಸನ್ನು ಕೊಡಿ ಎಂದಿದ್ದಾರೆ. ಒಟ್ಟಾರೆಯಾಗಿ ದಿನನಿತ್ಯವೂ ನಮ್ಮ ಸುದ್ದಿ ಮಾಧ್ಯಮಗಳಲ್ಲಿ ಪ್ರಿಯಂವಧಾ ಅವರ ಉಯಿಲಿನ ಸುದ್ದಿ ಹುಯಿಲೆಬ್ಬಿಸುತ್ತದೆ.

ಹಿಂದೆ ಪಾಳೇಗಾರಿ ವ್ಯವಸ್ಥೆಯಲ್ಲಿ ರಾಜರುಗಳು ತಮ್ಮ ಉತ್ತರಾಧಿಕಾರಿಗಳನ್ನು ತಮ್ಮ ಕುಟುಂಬದೊಳಗಿನಿಂದಲೇ (ಮಕ್ಕಳಿಲ್ಲದಿದ್ದರೆ) ಆಯ್ದುಕೊಳ್ಳುತ್ತಿದ್ದಂತೆ ಈ ಬಂಡವಾಳಶಾಹಿ ಮನೆತನದಲ್ಲೂ ನಡೆಯುತ್ತಿದೆ. ಈ ಬಂಡವಾಳ ಕ್ಕಾಗಿ (ಆಸ್ತಿಗಾಗಿ) ಯಾವುದೇ ನೀತಿಗಳ ಮಿತಿಯಿಲ್ಲದೆ ಹೋರಾಟ ನಡೆಯುತ್ತಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಸಂಪತ್ತನ್ನು ಸೃಷ್ಟಿಸಿದವರೇ ಕಾರ್ಮಿಕರು. ಈ ಕಾರ್ಮಿಕರ ಬಗ್ಗೆ ಯಾವುದೇ ಮಾತು ಈ ನಮ್ಮ ಬೂರ್ಜ್ವಾ ಮಾಧ್ಯಮಗಳಲ್ಲಿ ಬರುವುದಿಲ್ಲ. ನಿಜದಲ್ಲಿ ಕಾರ್ಮಿಕ ವರ್ಗ ಮಾತ್ರ ತಾನು ಸೃಷ್ಟಿಸಿದ ಸಂಪತ್ತು ಇಡೀ ಮಾನವ ಜನಾಂಗದ ಉಪಯೋಗಕ್ಕಾಗಿ ಎಂಬ ನಿಲುವನ್ನು ತಳೆಯುತ್ತದೆ. ಕಾರ್ಮಿಕರ

> **ಕಾರ್ಮಿಕ ವರ್ಗ ಮಾತ್ರ ತಾನು ಸೃಷ್ಟಿಸಿದ ಸಂಪತ್ತು ಇಡೀ ಮಾನವ ಜನಾಂಗದ ಉಪಯೋಗಕ್ಕಾಗಿ ಎಂಬ ನಿಲುವನ್ನು ತಳೆಯುತ್ತದೆ. ಕಾರ್ಮಿಕರ ಶೋಷಣೆ ಮಾಡಿ ಸಾಮ್ರಾಜ್ಯ ಕಟ್ಟುವ ಬಂಡವಾಳಶಾಹಿಗಳಿಗೆ ಇದು ತಮ್ಮ ಖಾಸಗಿ ಆಸ್ತಿ.**

ಶೋಷಣೆ ಮಾಡಿ ಸಾಮ್ರಾಜ್ಯ ಕಟ್ಟುವ ಬಂಡವಾಳಶಾಹಿಗಳಿಗೆ ಇದು ತಮ್ಮ ಖಾಸಗಿ ಆಸ್ತಿ. ಆದ್ದರಿಂದಲೇ ಈ ಸಮಸ್ಯೆ ಉಂಟಾಗಿರುವುದು ತಮ್ಮ ಕುಟುಂಬದಲ್ಲಿ ಈ ಆಸ್ತಿ ಉಳಿದರೆ ತಾವು ಅಷ್ಟು ಶಕ್ತಿಶಾಲಿಗಳಾಗುತ್ತೇವೆ ಎಂಬುದೇ ಬಿರ್ಲಾ ಕುಟುಂಬದವರ ವಿಚಾರ. ಅದಕ್ಕಾಗಿಯೇ ಈ ಹೊಡೆದಾಟ.ಐದು ಸಾವಿರ ಕೋಟಿ ರೂಪಾಯಿಗಳ ಆಸ್ತಿ (ಅದು ಅಷ್ಟಿರಬಹುದು ಅಥವಾ ಇಲ್ಲದಿರಬಹುದು) ಒಬ್ಬನ ದುಡಿಮೆಯಿಂದಂತೂ ಬರಲು ಸಾಧ್ಯವಿಲ್ಲ. ಅಲ್ಲದೆ ಶೋಷಣೆ, ಇಲ್ಲದೆಯೂ ಬರಲು ಸಾಧ್ಯವಿಲ್ಲ.

ಬಂಡವಾಳಕ್ಕಾಗಿ ಎಂತೆಂತಹ ನಾಟಕಗಳು ನಡೆಯುತ್ತವೆ ಎಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆ.

ಜನಾದೇಶದ ಜಾರಿಗೆ ಜನರೇ ಹೋರಾಡಬೇಕು

ದೇಶದ ಜನತೆ ಎನ್‌ಡಿಎ ಸರ್ಕಾರ ನೀತಿಗಳ ವಿರುದ್ಧ ಜನಾದೇಶವನ್ನು 2004ರ ಸಾರ್ವತ್ರಿಕ ಚುನಾವಣೆಗಳಲ್ಲಿ ನೀಡಿದರು. ಆದರೆ ಹೊಸ ಸರ್ಕಾರಗಳು ಮಂಡಿಸಿರುವ ಬಜೆಟ್‌ಗಳು ಈ ಜನಾದೇಶವನ್ನು ಸರ್ಕಾರಗಳು ತತ್ವಶಃ ಅರ್ಥಮಾಡಿಕೊಂಡಿಲ್ಲವೆಂಬುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಸಂಘಟಿಸಿದ ಸಭೆಯೊಂದರಲ್ಲಿ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಹೇಳಿದರು.

ಎನ್‌ಡಿಎ ಸರ್ಕಾರದ ವಿರುದ್ಧ ಉದಾರೀಕರಣದ ವಿರುದ್ಧ ಜನ ಮತ ನೀಡುತ್ತಿದ್ದಂತೆ ಬಂಡವಾಳಶಾಹಿಗಳು ತುರ್ತಾಗಿ ಶೇರು ಮಾರುಕಟ್ಟೆಯಲ್ಲಿನ ತಮ್ಮ ಹೂಡಿಕೆಗಳನ್ನು ಹಿಂತೆಗೆದುಕೊಂಡು ಮಾರುಕಟ್ಟೆ ಕುಸಿಯುವಂತೆ ನೋಡಿಕೊಂಡರು. ತಮ್ಮ ಆಸಕ್ತಿಗೆ ಕುಂದು ಬಂದಾಗ ಎವೆಯಿಕ್ಕುವುದರೊಳಗೆ ತಮ್ಮ ಪ್ರತಿಕ್ರಿಯೆಯನ್ನು ಅವರು ತೋರಿದರಾದರೆ, ದೇಶದ ಜನ ತಮ್ಮ ಆದೇಶವನ್ನು ಸರ್ಕಾರಗಳು ಪಾಲಿಸದಿದ್ದರೆ ಕೂಡಲೇ ಕಾರ್ಯಪ್ರವೃತ್ತರಾಗಬೇಡವೆ ಎಂದು ಕೇಳಿದ ಅವರು ಜನ ತಮ್ಮ ಆದೇಶದ ಜಾರಿಗೂ ಹೋರಾಡಬೇಕು ಎಂದರೆ.

ಕಾರ್ಮಿಕರ, ರೈತರ, ಹಿತಾಸಕ್ತಿಗಳಿಗೆ ವಿರುದ್ಧವಾಗಿ ಬರುವ ಪ್ರತಿಯೊಂದು ನೀತಿಯನ್ನೂ ಜನ ವಿರೋಧಿಸಬೇಕು, ಹೋರಾಟಗಳನ್ನು ನಡೆಸಬೇಕು ಎಂದು ಅವರು ಕರೆ ನೀಡಿದರು.

ಚುನಾವಣೆ ಘೋಷಣೆ ಬಂದಾಗಿನಿಂದ ಬಿಜೆಪಿ ಕೂಡ ಏನೇನು ಮಾಡಿತು ಎಂಬುದನ್ನು ವಿವರಿಸಿದ ಅವರು ಸಮೂಹ ಮಾಧ್ಯಮಗಳು ಸಮೀಕ್ಷೆ ನಡೆಸಿ ಪರಿಣಾಮಗಳನ್ನು ಹೇಳಿ ಹಾಸ್ಯಾಸ್ಪದ ವಾದವನ್ನು ವಿವರಿಸಿದರು. ಈ ಮಾಧ್ಯಮಗಳು ವಾಸ್ತವವನ್ನು ಗ್ರಹಿಸುವುದರಲ್ಲಿ ಪೂರ್ತಿ ವಿಫಲವಾದವು ಎಂದು ಹೇಳಿದರು. ಈ ಎಲ್ಲ ತಂತ್ರಗಳನ್ನು ಸಾಮಾನ್ಯ ಜನ ವಿಫಲಗೊಳಿಸಿ ಆದೇಶ ನೀಡಿದ್ದನ್ನು ಅವರು ವಿವರಿಸಿದರು.

ಚುನಾವಣಾ ಫಲಿತಾಂಶಗಳನ್ನು ವಿಶ್ಲೇಷಿಸಿದ ಅವರು ಕೇಂದ್ರ ಹಾಗೂ ರಾಜ್ಯ ಬಜೆಟ್‌ಗಳನ್ನು ವಿಶ್ಲೇಷಿಸಿದರು. ಒಟ್ಟಾರೆಯಾಗಿ ಈ ಬಜೆಟ್‌ಗಳಲ್ಲಿ ಜನಾದೇಶವನ್ನು ಕಡೆಗಣಿಸಿರುವುದನ್ನು ವಿವರಿಸಿದ ಅವರು ಜನತೆ ತಮ್ಮ ಆದೇಶವನ್ನು ಜಾರಿಗೆ ತರಲು ದಿನ ನಿತ್ಯ ಹೋರಾಟಗಳಲ್ಲಿ ತೊಡಗಬೇಕಾಗುತ್ತದೆ. ಶೇರು ಮಾರುಕಟ್ಟೆಗಳಲ್ಲಿ ಹೂಡಿದ ಹಣವನ್ನು ಹಿಂತೆಗೆದುಕೊಂಡು ಬಂಡವಾಳಿಗ ತುರ್ತು ಪ್ರತಿಭಟನೆ ತೋರುವಂತೆ ರೈತ ಕಾರ್ಮಿಕರು ತಮ್ಮ ಹಿತಾಸಕ್ತಿಗಳಿಗೆ ಧಕ್ಕೆ ಬಂದಾಗ ಪ್ರತಿಭಟನೆಗೆ ಇಳಿಯಬೇಕು ಎಂದರು. ಆ ಮೂಲಕ ಮಾತ್ರ ಜನತೆಯ ಆಶಯಗಳು ಈಡೇರಲು ಸಾಧ್ಯ ಎಂದರು.

ಸಭೆಯ ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಕಾಂ। ಎನ್.ಎಸ್.ಪ್ರಭಾಕರ್ ವಹಿಸಿದ್ದರು. ಕಾಂ।ಬಸವರಾಜ್, ಕಾಂ।ಜಿ. ಜಯರಾಮ್ ಮತ್ತು ಕಾಂ। ಹೆಚ್.ಎಸ್.ಜಗದೀಶ್ ವೇದಿಕೆಯ ಮೇಲಿದ್ದರು.

ಆರಂಭದಲ್ಲಿ ಬಾಲಾಜಿ ರಾವ್ ಸ್ವಾಗತಿಸಿದರು. ಅಂತ್ಯದಲ್ಲಿ ಸುಬ್ರಮಣ್ಯ ಅವರು ವಂದನಾರ್ಪಣೆ ಮಾಡಿದರು.

- ವರದಿ **ಜಿ.ಎಸ್.ಮಣಿ** ಮತ್ತು **ಬಾಲಾಜಿರಾವ್**

ನಮ್ಮ ನಿಮ್ಮ ಸಂವಾದ

ವ್ಯಕ್ತಿ ಹಾಗೂ ರಾಜಕೀಯ ಸ್ವಾತಂತ್ರ್ಯ ಕೇವಲ ಸಂವಿಧಾನದಲ್ಲಿದ್ದರೆ ಸಾಲದು

ಮಾನ್ಯರೇ,

ದಿ: ಜುಲೈ 20 ರಂದು ರಾಜಕೀಯ ಪಕ್ಷದ ನಾಯಕ ಕರ್ನಾಟಕ ಸಿಪಿಐ(ಎಂ) ಪಕ್ಷದ ಕಾರ್ಯದರ್ಶಿಗಳೂ ಆದ ಜಿ.ಎನ್.ನಾಗರಾಜ್ ಅವರು ತಮ್ಮ ಪಕ್ಷದ ಕಾರ್ಯಕರ್ತರು, ಕಾರ್ಮಿಕರು ಬಂಧನಗೊಳ್ಳುತ್ತಿರುವುದಕ್ಕೆ ವಿವರಣೆ ಪಡೆಯಲೆಂದು ನಂಜನಗೂಡು ಪೊಲೀಸ್ ಸ್ಟೇಶನ್‌ಗೆ ಹೋದಾಗ ಪೊಲೀಸ್ ಅಧಿಕಾರಿಗಳು ದೈಹಿಕವಾಗಿ ಹಲ್ಲೆ ಮೂಲಕ ಆತಂಕವನ್ನೊಡ್ಡಿ ದ್ದಲ್ಲದೆ ಅವರನ್ನು ಬಂಧನಕ್ಕೊಳಪಡಿಸಿದರು ಎಂಬುದನ್ನು ಕೇಳಿ ಸಖೇದಾಶ್ಚರ್ಯವಾಯಿತು. ಈ ಘಟನೆ ನಾವೇನು ಪ್ರಜಾಪ್ರಭುತ್ವದಲ್ಲಿದ್ದೇವೊ ಅಥವಾ ತುರ್ತುಪರಿಸ್ಥಿತಿಯ ಜಾರಿಯಲ್ಲಿದ್ದೇವೋ ಎಂದು ತಿಳಿಯದಾಗಿದೆ. ಇಲ್ಲಿಯ ಸ್ಥಿತಿಯ ಮಾಹಿತಿ ಉಪಮುಖ್ಯಮಂತ್ರಿಗಳಿಗೆ ತಿಳಿಯುತ್ತಿದ್ದಂತೆ ಅವರು ಸಂದೇಶ ಕಳಿಸಿದ ಪರಿಣಾಮವಾಗಿ ಜಿಲ್ಲಾ ಪೊಲೀಸ್ ಅಧಿಕಾರಿಗಳು ಸ್ವತಃ ಬಂದು ಬಿಡುಗಡೆಗೊಳಿಸಿದರು ಎಂಬ ವಾರ್ತೆ ತುಸು ಸಮಾಧಾನ ತರುತ್ತದಾದರೂ ಸ್ಥಳೀಯ ಪೊಲೀಸ್ ಅಧಿಕಾರಿಯ ನಿರ್ಲಜ್ಜವರ್ತನೆ ಖಂಡನೀಯವಾಗಿದೆ. ಸರಕಾರ ಬದಲಾಗಿದೆ; ಆದರೆ ಅದು ಎಂಥ ಬದಲಾವಣೆ? ಅದರ ಯೋಗ್ಯತೆಯಲ್ಲಿ (ಕ್ವಾಲಿಟೇಟಿವ್) ಬದಲಾವಣೆ ಆಗಿದೆಯೋ ಎಂಬುದು ಆಡಳಿತಗಾರರ ವರ್ತನೆಯಲ್ಲಿ ವ್ಯಕ್ತವಾಗಬೇಕಾಗುತ್ತದೆ. ಇದು ಸರಕಾರ ಮಂಡಿಸುವ ಮುಂಗಡ ಪತ್ರದಷ್ಟೇ ಮಹತ್ವದ್ದಾಗಿದೆ. ವ್ಯಕ್ತಿ ಹಾಗೂ ರಾಜಕೀಯ ಸ್ವಾತಂತ್ರ್ಯ ಕೇವಲ ಸಂವಿಧಾನದಲ್ಲಿದ್ದರೆ ಸಾಲದು ಅದು ಸರಕಾರದ ಮತ್ತು ಅದರ ಅಂಗವಾದ ಆಡಳಿತ ವ್ಯವಸ್ಥೆಯಲ್ಲಿ ರೂಪು ಪಡೆಯಬೇಕು. ಪ್ರಜಾಪ್ರಭುತ್ವ ಎಲ್ಲಾದರೂ ಬೆಳೆಯುವುದಿಲ್ಲ ಅದನ್ನು ಬೆಳೆಸಬೇಕು ಎಂದು ಸ್ವತಃ ಡಾ. ಅಂಬೇಡ್ಕರ್‌ರೇ ಹೇಳಿದ್ದಾರೆ. ಆದರೆ ಇದು ನಂಜನಗೂಡಿನ ಪೊಲೀಸ್ ಅಧಿಕಾರಿಗಳಂಥವರ ಗೂಂಡಾವರ್ತನೆಯಿಂದ ಬೆಳೆಸಲಾಗುವುದಿಲ್ಲ. ಒಬ್ಬ ರಾಜ್ಯ ನೇತಾರನನ್ನು ಅಪಮಾನಗೊಳಿಸಿದ ಅಧಿಕಾರಿಯನ್ನು ಶಿಕ್ಷಿಸಿಯೇ ಶಿಕ್ಷಣ ಕೊಡಬೇಕು.

- **ಡಾ.ಆರ್.ವಿ.ಭಂಡಾರಿ**
ಹೊನ್ನಾವರ

ವೆನೆಜುವೆಲಾ ಅಧ್ಯಕ್ಷ ಚವೇಝ್‌ಗೆ ಸವಾಲು
ಚಿಲಿ-ನಿಕರಾಗುವ ದುರಂತದ ಹೊಸ ಅವತಾರ?

ಶರತ್ ಚಂದ್ರ

ವೆನಿಜುವೆಲಾದಲ್ಲಿ ಅಮೆರಿಕಾ ಮತ್ತು ಪ್ರತಿಗಾಮಿಗಳು ಬುಡಮೇಲು ಕೃತ್ಯಗಳಲ್ಲಿ ತೊಡಗಿದ್ದಾರೆ. ಜನಪರ ಸರ್ಕಾರವನ್ನು ಉರುಳಿಸಲು ಹೂಡಿರುವ ಷಡ್ಯಂತ್ರಗಳೇನು?

ದಕ್ಷಿಣ ಅಮೇರಿಕಾದಲ್ಲಿ ಯಾವುದೇ ಜನಪರ ಸರ್ಕಾರ ಬರಲಿ, ಅದು ಜನಪರ ಕಾರ್ಯಕ್ರಮಗಳನ್ನು ಹಾಕಿಕೊಂಡ ಕೂಡಲೇ, ಉತ್ತರ ಅಮೇರಿಕಾದಲ್ಲಿ ಒಂದು ಗ್ಯಾಂಗ್ ತನ್ನ ಕಾರ್ಯ ರಭಸದಲ್ಲಿ ಆರಂಭಿಸುತ್ತದೆ. ಸಿಐಎ ಮತ್ತು ಅದರ ಸಾಕುಪ್ರಾಣಿಗಳು ಬೊಗಳಲು, ಕಚ್ಚಲು ಆರಂಭಿಸುತ್ತವೆ. ಅಪಾರ ಹಣ ಹರಿಯುತ್ತದೆ. ಮಿಲಿಟರಿ ಕ್ಷಿಪ್ರ ಕ್ರಾಂತಿಗೆ ಪ್ರಯತ್ನ ನಡೆಯುತ್ತದೆ. ಎಲ್ಲಾ ಸರ್ಕಾರ-ವಿರೋಧಿ, ಅಮೇರಿಕ-ಪರ ಶಕ್ತಿಗಳಿಗೆ ಎಲ್ಲಾ ರೀತಿಯ ಬೆಂಬಲ ದೊರೆಯುತ್ತದೆ. ಮಾಧ್ಯಮಗಳಲ್ಲಿ ಭರಾಟೆಯ ಪ್ರಚಾರ ನಡೆಯುತ್ತದೆ. ಆರ್ಥಿಕವಾಗಿ ಸರ್ಕಾರ ಕುತ್ತಿಗೆ ಹಿಚುಕಿ, ಜನರೇ ಸರ್ಕಾರದ ವಿರುದ್ಧ ಏಳುವಂತೆ ಪ್ರಯತ್ನಿಸಲಾಗುತ್ತದೆ. ಒಟ್ಟಾರೆಯಾಗಿ ಈ 'ಗ್ಯಾಂಗ್' ಸರ್ಕಾರ ಬೀಳಿಸುವವರೆಗೆ ವಿರಮಿಸುವುದಿಲ್ಲ.

ಆಗಸ್ಟ್ 15 ರಂದು ಜನಮತ ಸಂಗ್ರಹ

ಹಿಂದೆ 1937 ರಲ್ಲಿ ಚಿಲಿಯಲ್ಲಿ ಇದು ನಡೆದಿತ್ತು. 80 ರ ದಶಕದಲ್ಲಿ ನಿಕರಾಗುವದಲ್ಲಿ ಆಗಿತ್ತು. ಈಗ ವೆನಿಜುವೆಲಾದಲ್ಲಿ ಈ ದುರಂತದ ಹೊಸ ಅವತಾರಕ್ಕೆ ಪ್ರಯತ್ನ ನಡೆಯುತ್ತಿದೆ. 'ಗ್ಯಾಂಗ್' ಆಗಲೇ ಕೆಲಸ ಆರಂಭಿಸಿದೆ. ಮಿಲಿಟರಿ ಕ್ಷಿಪ್ರಕ್ರಾಂತಿ ಪ್ರಯತ್ನ ಈಗಾಗಲೇ ನಡೆದು ವಿಫಲವಾಗಿದೆ. ಆರ್ಥಿಕವಾಗಿ ಕತ್ತು ಹಿಚುಕುವ ಪ್ರಯತ್ನ ಇನ್ನೂ ನಡೆದಿದೆ. ಈಗ ಹೊಸ ಪ್ರಯತ್ನ ವೆನಜುವೆಲಾ ಸಂವಿಧಾನದಲ್ಲಿ ಇರುವ ಅಧ್ಯಕ್ಷರನ್ನು ವಾಪಸು ಕರೆಸುವ ಜನಮತ ಸಂಗ್ರಹವನ್ನು ಬಳಸಿ ಅಧ್ಯಕ್ಷ ಚವೇಝುರನ್ನು ಪದಚ್ಯುತ ಮಾಡುವ ಪ್ರಯತ್ನ. ಒಂದೆರೆಡು ವಿಫಲ ಪ್ರಯತ್ನಗಳ ನಂತರ, ಅಧ್ಯಕ್ಷರನ್ನು ವಾಪಸು ಕರೆಸುವ ಅರ್ಜಿಗೆ ಬೇಕಾದ ಸಹಿಗಳನ್ನು ವಿರೋಧಿ-ಶಕ್ತಿಗಳು ಸಂಗ್ರಹಿಸಿವೆ. ಆಗಸ್ಟ್ 15 ರಂದು ಅಧ್ಯಕ್ಷ ಚವೇಝುರನ್ನು ವಾಪಸು ಕರೆಯಬೇಕೆ ಎಂಬ ಜನಮತ ಸಂಗ್ರಹ ನಡೆಯಲಿದೆ. ಈ ಬಗ್ಗೆ ಭರದಿಂದ ರಾಜಕೀಯ ಪ್ರಚಾರ ನಡೆದಿದೆ. ಸರ್ಕಾರ-ಸೈನ್ಯದ ಒಳಗಿರುವ ಚವೇಝು-ವಿರೋಧಿ ಬಲಪಂಥೀಯ ಶಕ್ತಿಗಳು ಎಲ್ಲಾ ರೀತಿಯ ಅಕ್ರಮಕ್ಕೆ ಸಿದ್ಧತೆ ನಡೆಸಿವೆ. ಆದರೆ ಚವೇಝ್ ಸಹ ಈ ಸವಾಲನ್ನು ರಾಜಕೀಯ ಹೋರಾಟದ ಭಾಗವಾಗಿ ಸ್ವೀಕರಿಸಿದ್ದಾರೆ. ಹಲವು ಸಮೀಕ್ಷೆಗಳು ಅಧ್ಯಕ್ಷ ಚವೇಝ್ ಶೇಕಡಾ 7 ರಿಂದ 11 ರಷ್ಟು ಮತಗಳಿಂದ ಗೆಲ್ಲುತ್ತಾರೆ ಎಂದುಹೇಳಿವೆ.



ಆರ್ಥಿಕ-ರಾಜಕೀಯ ಬುಡಮೇಲು ಕೃತ್ಯ

ಈ ರಾಜಕೀಯ ಹೋರಾಟ ಯಾವ ಸನ್ನಿವೇಶದಲ್ಲಿ ನಡೆಯುತ್ತಿದೆ? ಅಧ್ಯಕ್ಷ - ಚವೇಝ್ ಪರ ಶಕ್ತಿಗಳು ಯಾರು? ವಿರೋಧಿ ಶಕ್ತಿಗಳು ಯಾರು? ಈ ಹೋರಾಟದ ಮಹತ್ವವೇನು? ವೆನೆಜುವೆಲಾದ ಬಡವರಿಗೆ ಚವೇಝ್ ಆಗಲೇ ಏನು ಸಾಧ್ಯ ಎಂದು ತೋರಿಸಿಕೊಟ್ಟಿದ್ದಾರೆ. ತಮ್ಮ ಅಧ್ಯಕ್ಷೀಯ ಚುನಾವಣೆಗಳಲ್ಲಿ ಕೊಟ್ಟ ಹಲವು ಭರವಸೆಗಳನ್ನು ಪೂರೈಸಿದ್ದಾರೆ. ಶಿಕ್ಷಣದ ಮೇಲೆ ಸಾರ್ವಜನಿಕ ವೆಚ್ಚ ನಾಲ್ಕು ಪಟ್ಟು ಆಗಿದೆ. ಆರೋಗ್ಯ ಸೇವೆ ಮೇಲೆ ವೆಚ್ಚ ಮೂರು ಪಟ್ಟು ಆಗಿದೆ. ಸಾಕ್ಷರತಾ ಪ್ರಮಾಣ ಏರಿದೆ. ಸ್ಕೂಲುಗಳಲ್ಲಿ ವಿದ್ಯಾರ್ಥಿಗಳು ಮುಂದುವರೆಯುವ ಪ್ರಮಾಣ, ಕಲಿಕೆ ಹೆಚ್ಚಿದೆ. ಶಿಶು ಮರಣ ಪ್ರಮಾಣ ಆಗಲೇ ಕಡಿಮೆ ಆಗಿದೆ. ಭೂ ಸುಧಾರಣಾ ಕ್ರಮದ ಜಾರಿ ರಭಸದಿಂದ ಸಾಗಿದೆ.

ಇವೆಲ್ಲಾ ರಾಜಕೀಯ ವಿರೋಧಿಗಳು ಮತ್ತು ಸಾಮ್ರಾಜ್ಯಶಾಹಿ ಆರ್ಥಿಕ ಬುಡಮೇಲು ಕೃತ್ಯಗಳ ನಡುವೆಯೂ ನಡೆದಿದೆ ಎಂಬುದು ಗಮನಾರ್ಹ. ಕಳೆದ ಐದು ವರ್ಷಗಳಲ್ಲಿ - ಒಂದು ಮಿಲಿಟರಿ ಕ್ಷಿಪ್ರಕ್ರಾಂತಿ ಯತ್ನ, ತೈಲ ಮುಷ್ಕರ, ವಿದೇಶಿ ಬಂಡವಾಳ ಪಲಾಯನ - ಮುಂತಾದವುಗಳಿಂದ ಒಟ್ಟು ಉತ್ಪಾದನೆ ಶೇಕಡಾ 4 ರಷ್ಟು ಕಡಿಮೆ ಆಗಿದೆ. ಆದರೂ ಈ ವರ್ಷ ಉತ್ಪಾದನೆ ಶೇಕಡಾ 12 ರಷ್ಟು ಏರಲಿದೆ. ಆದರೂ ತೈಲದ ಅಂತರ್‌ರಾಷ್ಟ್ರೀಯ ಬೆಲೆ ಏರಿರುವುದರಿಂದ(ವೆನೆಜುವೆಲಾ ಜಗತ್ತಿನ 5ನೇ ಅತಿದೊಡ್ಡ ತೈಲ ಉತ್ಪಾದಕ) ಸರ್ಕಾರ ತನ್ನ ಸಾಮಾಜಿಕ ಕಾರ್ಯಕ್ರಮಗಳನ್ನು ವಿಸ್ತರಿಸುತ್ತಿದೆ. ಇದು ವೆನಿಜುವೆಲಾದ ಶ್ರೀಮಂತರಿಗೂ, ಅಮೆರಿಕದ ಆಳುವ ವಲಯಗಳಿಗೆ ನುಂಗಲಾರದ ತುತ್ತಾಗಿದೆ. ಚವೇಝ್ 2000 ರಲ್ಲಿ ಆರು ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. 2002 ರಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿ ಪ್ರಯತ್ನ ನಡೆದು, ಒಂದೇ ದಿನದಲ್ಲಿ ವಿಫಲವಾಯಿತು. ದೀರ್ಘ ತೈಲ ಮುಷ್ಕರ (ಮಾಲಕರು ಹೂರಿಸಿದ), ವ್ಯಾಪಾರ ಬಂದ್ ತಿಂಗಳುಗಳ ಕಾಲ ನಡೆಯಿತು.

ಖಾಸಗಿ ಟಿ.ವಿ. ಚಾನಲ್ ಅಧಿಕೃತ ವಿರೋಧ ಪಕ್ಷ?

ವೆನಿಜುವೆಲಾದ ಸುದ್ದಿ ಮಾಧ್ಯಮಗಳು ಅದರಲ್ಲೂ ಖಾಸಗಿ ಟಿವಿ ಚಾನೆಲ್‌ಗಳು ಪ್ರಮುಖ ರಾಜಕೀಯ ವಿರೋಧಿ ಶಕ್ತಿಯ ಕೆಲಸ ಮಾಡುತ್ತಿವೆ. ಸುದ್ದಿ ಮಾಧ್ಯಮಗಳು ಇರಬೇಕಾದ ಪಕ್ಷಪಾತ-ರಹಿತತೆ, ಸ್ವತಂತ್ರ ನೀತಿಗಳನ್ನು ಗಾಳಿಗೆ ತೂರಿವೆ. ಪ್ರಮುಖ ನಾಲ್ಕು ಟಿವಿ ಸ್ಟೇಷನ್‌ಗಳ ಮಾಲಕರ ತುತ್ತೂರಿಯಾಗಿದೆ. ವಿರೋಧ ಪಕ್ಷಗಳ ರಾಜಕೀಯ ಬಲ ಜನಬೆಂಬಲ ಕಡಿಮೆ ಇರುವುದರಿಂದ ಇವರೇ ವಿರೋಧಿ ರಾಜಕೀಯ ನಡೆಸುತ್ತಿದ್ದಾರೆ. ಇವರಿಗೆ ಅಪಾರ ಹಣ ಅಮೆರಿಕದ ಸಿಐಎ ಮತ್ತು ಅದರ ಸಹಚರ ಸಂಘಟನೆಗಳಿಂದ ಬರುತ್ತಿದೆ. ವೆನೆಜುವೆಲಾದ ಖಾಸಗಿ ಟಿ.ವಿ. ಚಾನೆಲ್ ಆರ್‌ಸಿಟಿವಿ, ಅಮೆರಿಕನ್ ಸಲಹಾಗಾರರನ್ನು ನೇಮಿಸಿದೆ.

ಸಿಐಎ ಮತ್ತು ಸಹಚರರು

ಸಿಐಎ ಹಲವು ಸಂಘಟನೆಗಳ ಮೂಲಕ ನೇರ ರಾಜಕೀಯ ಹಸ್ತಕ್ಷೇಪ ಮಾಡುತ್ತಿದೆ. ಅಂತಹ ಸಂಘಟನೆಗಳೆಂದರೆ - OAS (ದಕ್ಷಿಣ ಅಮೆರಿಕದ ದೇಶಗಳ ಒಕ್ಕೂಟ), ಕಾರ್ಟರ್ ಸೆಂಟರ್ (ಮಾಜಿ ಅಮೆರಿಕನ್ ಅಧ್ಯಕ್ಷರು ಸ್ಥಾಪಿಸಿ, ಎಲ್ಲಾ ಕಡೆ ಪ್ರಜಾಪ್ರಭುತ್ವ ಸ್ಥಾಪಿಸುವ ಹೆಸರಲ್ಲಿ ಹಸ್ತಕ್ಷೇಪ ಮಾಡುವ ಸಂಘಟನೆ), NED(NATIONAL ENDOWMENT FOR DEMOCRECY-ಪ್ರಜಾಪ್ರಭುತ್ವ ಸ್ಥಾಪಿಸುವ - ಬಲಪಡಿಸುವ ಹೆಸರಲ್ಲಿ ಹಸ್ತಕ್ಷೇಪ ಮಾಡುವ ಇನ್ನೊಂದು ಸಂಘಟನೆ), AIFLD (ಮಾಲಿಕರ ಪರ ಕೆಲಸ ಮಾಡುವ ಪ್ರತಿಗಾಮಿ ಟ್ರೇಡ್ ಯೂನಿಯನ್). ಇವೆಲ್ಲಾ ಸಂಘಟನೆಗಳಿಗೆ ಸಿಐಎ ನಿಂದ ಕನಿಷ್ಠ ಪ್ರತಿ ವರ್ಷ ಹತ್ತು ಲಕ್ಷ ಡಾಲರು ಹರಿದುಬರುತ್ತಿದೆ. ಮಿಲಿಟರಿ ಕ್ಷಿಪ್ರಕ್ರಾಂತಿ, ತೈಲ ಮುಷ್ಕರ, ಲಾಕ್‌ಔಟುಗಳಲ್ಲಿ ಇವೆಲ್ಲಾ ಸಕ್ರಿಯವಾಗಿ ಮುಕ್ತವಾಗಿ ಪಾತ್ರವಹಿಸಿವೆ. ಅಧ್ಯಕ್ಷರನ್ನು ವಾಪಸು ಕರೆಸುವ ಅರ್ಜಿಗೆ ಸಹಿ ಸಂಗ್ರಹದಲ್ಲಿ ಇವೆಲ್ಲಾ ನೇರ ಪಾತ್ರವಹಿಸಿವೆ. ಹಿಚ್ಚಿನ ಈ ಸಂಘಟನೆಗಳು ನಿಕರಾಗುವದಲ್ಲಿ ಪ್ರಗತಿಪರ ಸ್ಯಾಂಟಿನಿಸ್ಟಾಗಳನ್ನು ಅಧಿಕಾರದಿಂದ ಇಳಿಸುವ ಯೋಜನೆಯಲ್ಲಿ ಭಾಗವಹಿಸಿ 'ಅನುಭವ' ಹೊಂದಿರುವವರು.

ಮಹತ್ವದ ರಾಜಕೀಯ ಪ್ರಶ್ನೆ

ಅಧ್ಯಕ್ಷ ಚವೇಝ್ ಪರ ವೆನೆಜುವೆಲಾದ ಬಹುಸಂಖ್ಯಾತ ಬಡವರು ಇದ್ದಾರೆ. ಈ ಸರ್ಕಾರ ಕೆಳಗಿಳಿಸಿದರೆ, ತಮ್ಮ ಹಿತಾಸಕ್ತಿಗೆ ಧಕ್ಕೆ ಎಂಬುದು ಅವರಿಗೆ ಸ್ಪಷ್ಟವಾಗಿ ಗೊತ್ತಿದೆ. ಕಳೆದ ಐದು ವರ್ಷಗಳ ಹೋರಾಟದಲ್ಲಿ ಅವರು ಚವೇಝ್ ಜತೆಗೆ ನಿಂತಿದ್ದಾರೆ. ಮಿಲಿಟರಿ ಕ್ಷಿಪ್ರಕ್ರಾಂತಿ ನಾಯಕರನ್ನು ಒಂದೇ ದಿನದಲ್ಲಿ ಕೆಳಗಿಳಿಸಿದ್ದಾರೆ. ಮುಷ್ಕರ-ಲಾಕೌಟ್‌ಗಳನ್ನು ಲೆಕ್ಕಿಸದೆ, ಆರ್ಥಿಕ ಬುಡಮೇಲು ಕೃತ್ಯ - ಎದುರಿಸಿ ನಿಂತಿದ್ದಾರೆ. ಈ ಬಹುಸಂಖ್ಯಾತ ಜನ ಆಗಸ್ಟ್ 15 ರಂದು ಭಾರಿ ಸಂಖ್ಯೆಯಲ್ಲಿ ಚವೇಝ್ ಜತೆ ನಿಲ್ಲುತ್ತಾರೆ ಎಂಬುದು

ಬರಿಯ ಆ ದೇಶಕ್ಕೆ ಸೀಮಿತವಾದ ಪ್ರಶ್ನೆ ಅಲ್ಲ. ಭ್ರಷ್ಟ-ಅಧ್ಯಕ್ಷ, ಅಧ್ಯಕ್ಷರನ್ನು ಕೆಳಗಿಳಿಸಲು ಇಂದು ಈ ಕ್ರಮವನ್ನು ದುರ್ಬಳಕೆ ಮಾಡಲಾಗುತ್ತಿದೆ. ಇದು ಇಡಿ ದಕ್ಷಿಣ ಅಮೆರಿಕಾ ಮತ್ತು ಜಗತ್ತಿನ ಎಲ್ಲಾ ಮೂರನೇ ಜಗತ್ತಿನ ದೇಶಗಳ ಮಾತ್ರವಲ್ಲ, ಎಲ್ಲಾ ದೇಶಗಳ ದುಡಿಯುವ ಜನರಿಗೆ ಮಹತ್ವದ ಜನ-ಮತ ಸಂಗ್ರಹ ಉಳ್ಳವರ - ಇಲ್ಲದವರ ನಡುವೆ ವರ್ಗಹೋರಾಟದಲ್ಲಿ ಮಹತ್ವದ ಘಟ್ಟ. ಸಾಮ್ರಾಜ್ಯಶಾಹಿಯ ಆಟ ನಡೆಯದಂತೆ ಮಾಡಲು ಪ್ರಚಾರ ಪ್ರಕ್ಷೋಭೆ ಅಗತ್ಯ.

ರಾಷ್ಟ್ರಮಟ್ಟದ ರಾಜಕೀಯ ಪ್ರಚಾರ....

ಪುಟ 5 ರಿಂದ

ಸಿಪಿಐ(ಎಂ) ಈ ಕೆಳಕಂಡ ಅಂಶಗಳನ್ನು ಗುರುತಿಸಿದೆ.

1. ಬಿಜೆಪಿ - ಆರ್.ಎಸ್.ಎಸ್ ಕೂಟವು ಕೋಮುವಾದಿ ಹಿಂದುತ್ವ ಅಜೆಂಡಾವನ್ನು ಪುನಃ ಕೈಗೆತ್ತಿಕೊಳ್ಳುವುದರ ಅಪಾಯ ಮತ್ತು ಸಂಸತ್ತಿನ ಕಲಾಪಗಳಿಗೆ ತಡೆಯೊಡ್ಡುವುದರ ಮೂಲಕ ಚುನಾವಣಾ ಆದೇಶವನ್ನು ತಿರಸ್ಕರಿಸುವುದರ ವಿರುದ್ಧ ಜನರನ್ನು ಜಾಗೃತಗೊಳಿಸುವುದು.

2. ಪ್ರಭುತ್ವದ ವಿವಿಧ ಸಂಘ ಸಂಸ್ಥೆಗಳಲ್ಲಿ ಕೋಮುವಾದಿ ಶಕ್ತಿಗಳು ಮತ್ತು ಸಿದ್ದಾಂತವನ್ನು ಮೂಲೋತ್ಪಾಟದನೆ ಮಾಡುವುದು ಮತ್ತು ಜಾತ್ಯಾತೀತ ತತ್ವವನ್ನು ಬಲಪಡಿಸುವ ಅಗತ್ಯತೆ.

3. ಸೆಪ್ಟೆಂಬರ್ 1 ರಂದು 'ಸಾಮ್ರಾಜ್ಯಶಾಹಿ ವಿರೋಧಿ- ಯುದ್ಧ ವಿರೋಧಿ ದಿನ' ಆಚರಿಸುವುದು. ಹಿಂದಿನ ಬಿಜೆಪಿ ನೇತೃತ್ವದ ಸರಕಾರ ಅನುಸರಿಸಿದ ಅಮೇರಿಕಾ - ಪರ, ಇಸ್ರೇಲಿ-ಪರ ನೀತಿಯನ್ನು ಕೈಬಿಟ್ಟು ಸ್ವತಂತ್ರ ವಿದೇಶಾಂಗ ನೀತಿ ಅನುಸರಿಸುವ ಅಗತ್ಯತೆಯನ್ನು ಪ್ರಚಾರಪಡಿಸುವುದು.

4. ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಸೂಚಿತವಾಗಿರುವ ಜನಪರ ಅಂಶಗಳಾದ ರಾಷ್ಟ್ರೀಯ ಉದ್ಯೋಗ ಖಾತರಿ ಕಾಯಿದೆ (ಎನ್‌ಇಜಿ ಆ್ಯಕ್ಟ್) ಕೃಷಿ ಕಾರ್ಮಿಕರಿಗಾಗಿ ಕೇಂದ್ರಶಾಸನ, ಮಹಿಳೆಯರಿಗೆ ಶೇ.33 ಮೀಸಲಾತಿ, ಕೃಷಿ ಕ್ಷೇತ್ರದಲ್ಲಿ ಸಾರ್ವಜನಿಕ ಹೂಡಿಕೆಯ ಹೆಚ್ಚಳ, ರೈತರ ಸಾಲ ಸೌಲಭ್ಯಗಳಲ್ಲಿ ಹೆಚ್ಚಳ ಮತ್ತು ಆರೋಗ್ಯ ಮತ್ತು ಶಿಕ್ಷಣಕ್ಕೆ ಹೆಚ್ಚು ಹಣ ವಿನಿಯೋಗ.

5. ಎಲ್ಲಾ ಬಡಜನರಿಗೆ ಬಿಪಿಎಲ್ ಕಾರ್ಡ್ ವಿತರಣೆ, ವಿಶೇಷವಾಗಿ ಹಿಂದುಳಿದ ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಲ್ಲಿ ರೇಶನ್ ವ್ಯವಸ್ಥೆಯನ್ನು ಬಲಪಡಿಸುವುದು.

6. ಟೆಲಿಕಾಂ, ವಿಮೆ ಮತ್ತು ನಾಗರೀಕ ವಿಮಾನ ಯಾನ ಕ್ಷೇತ್ರಗಳಲ್ಲಿ ವಿದೇಶಿ ನೇರಬಂಡವಾಳ (ಎಫ್‌ಡಿಐ) ಹೆಚ್ಚಳವೂ ಸೇರಿದಂತೆ ವಿವಿಧ ಆಯಕಟ್ಟಿನ ಕ್ಷೇತ್ರದಲ್ಲಿ ವಿದೇಶ ಬಂಡವಾಳವನ್ನು ಹೆಚ್ಚಿಸುವ ಅಪಾಯದ ಕುರಿತು ವಿವರಣೆ. ಲಾಭದಾಯಕವಾದ ಮುಂಬೈ ಮತ್ತು ದೆಹಲಿ ವಿಮಾನ ನಿಲ್ದಾಣಗಳನ್ನು ಖಾಸಗೀಯವರಿಗೆ ವಹಿಸುವುದಕ್ಕೆ ತಡೆ.

7. ಜನರ ಉಳಿತಾಯದ ಹಣಕ್ಕೆ ತಕ್ಕ ಪ್ರತಿಫಲ. ನೌಕರರ ಪಿ.ಎಫ್ ಹಣಕ್ಕೆ ಬಡ್ಡಿ ಕಡಿತ ಸಲ್ಲದು.

8. ಅರಣ್ಯ ಪ್ರದೇಶದಲ್ಲಿ ಬುಡಕಟ್ಟು ಜನಾಂಗದವರನ್ನು ತೆರವುಗೊಳಿಸುವುದಕ್ಕೆ ತಡೆ ಮತ್ತು ಅವರ ಹಕ್ಕುಗಳ ರಕ್ಷಣೆ.

9. ಡೀಸೆಲ್ ಮತ್ತು ಪೆಟ್ರೋಲ್ ದರವನ್ನು ಆಗಾಗ ಹೆಚ್ಚಿಸುವುದಕ್ಕೆ ವಿರೋಧ. ಚಿಲ್ಲರೆ ಗ್ರಾಹಕರ ಮೇಲೆ ಹೊರೆಯನ್ನು ಕಡಿಮೆ ಮಾಡುವುದಕ್ಕೋಸ್ಕರ ಆಮದು ತೆರಿಗೆ ಮತ್ತು ಅಬಕಾರಿ ತೆರಿಗೆಯನ್ನು ಪುನರ್ರಚಿಸುವುದು.

10. 'ಕೂಲಿಗಾಗಿ ಕಾಳು' ಯೋಜನೆ, ಕುಡಿಯುವ ನೀರು, ಮೇವು ಮೂಲಕ ಬರಪೀಡಿತ ಪ್ರದೇಶದ ಜನರಿಗೆ ತುರ್ತು ಪರಿಹಾರ, ಅತಿಯಾಗಿ ತೊಂದರೆಗೊಳಗಾದ ಪ್ರದೇಶದಲ್ಲಿ ಉಚಿತವಾಗಿ ಆಹಾರ ಧಾನ್ಯಗಳ ಪೂರೈಕೆ. ಪ್ರವಾಹಪೀಡಿತ ಪ್ರದೇಶಗಳಿಗೆ ಸೂಕ್ತ ಪರಿಹಾರ ಮತ್ತು ಪುನರ್ವಸತಿ ಸೌಲಭ್ಯ. ಪ್ರವಾಹತಡೆಗೆ ಕೇಂದ್ರ ಸರಕಾರ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು.

11. ಸುಪ್ರೀಂಕೋರ್ಟ್‌ನ ತೀರ್ಪಿನಿಂದ ವಿದ್ಯಾರ್ಥಿಗಳಿಗಾದ ಅನ್ಯಾಯವನ್ನು ಹೋಗಲಾಡಿಸಲು ಉನ್ನತ ಶಿಕ್ಷಣದಲ್ಲಿ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ಶುಲ್ಕವನ್ನು ಕ್ರಮಬದ್ಧಗೊಳಿಸಲು ರಾಜ್ಯ ಸರಕಾರಗಳಿಗೆ ಸೂಕ್ತ ಅಧಿಕಾರ ನೀಡಲು ಕೇಂದ್ರ ಶಾಸನದ ಜಾರಿ.

ಅಥೆನ್ಸ್ ಒಲಂಪಿಕ್ಸ್....

ಪುಟ 12 ರಿಂದ

ಬಹು ರಾಷ್ಟ್ರೀಯ ಕಂಪನಿಗಳ ಬೆಂಬಲದಿಂದ ಒಲಂಪಿಕ್ಸ್ ಕ್ರೀಡೆ ನಡೆಸುವ ಅವಕಾಶವನ್ನು ದಕ್ಕಿಸಿಕೊಳ್ಳಲು ಶ್ರೀಮಂತ ರಾಷ್ಟ್ರಗಳು ಮುಂದಾಗುತ್ತಿವೆ. ಒಲಂಪಿಕ್ಸ್ ಕ್ರೀಡೆಗಳನ್ನು ತಮ್ಮ ರಾಷ್ಟ್ರಗಳ ನಗರಗಳಲ್ಲಿ ನಡೆಸುವಂತೆ ಅವಕಾಶ ಗಳಿಸಿಕೊಳ್ಳಲು ಹಲವು ದೇಶಗಳು ಅಂತರ್‌ರಾಷ್ಟ್ರೀಯ ಒಲಂಪಿಕ್ಸ್ ಸಮಿತಿ ಸದಸ್ಯರಿಗೆ ಲಂಚ ನೀಡಿದ ಅಪಾದನೆಗಳು ಕೇಳಿ ಬರುತ್ತಿವೆ. ಒಲಂಪಿಕ್ಸ್‌ನ್ನು ರಾಷ್ಟ್ರಗಳ ಹೆಸರಿನಲ್ಲಿ ನಡೆಸದೆ ನಗರಗಳ ಹೆಸರಿನಲ್ಲಿ ನಡೆಸುವುದು ಪದ್ಧತಿ. ಇದರಿಂದ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಈ ನಗರಗಳು ಬಹುರಾಷ್ಟ್ರೀಯ ಕಂಪನಿಗಳನ್ನು ಅವಲಂಬಿಸುತ್ತಿವೆ. ಗ್ರೀಸ್‌ನಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದ ಸಮಾಜವಾದಿ ಸರ್ಕಾರ ಸ್ವಂತವಾಗಿ ಅಥೆನ್ಸ್ ಒಲಂಪಿಕ್ಸ್‌ನ್ನು ನಡೆಸಲು ನಿರ್ಧರಿಸಿದೆ ಕಾರಣ ಈ ಸಲ ಬಹುರಾಷ್ಟ್ರೀಯ ಕಂಪನಿಗಳು ತೆಪ್ಪಗಾಗಿವೆ.

ಅನೇಕ ರಾಜಕೀಯ, ಆರ್ಥಿಕ, ಸಾಮಾಜಿಕ, ಯುದ್ಧ ಇತ್ಯಾದಿ ಅಡೆತಡೆಗಳ ನಡುವೆ ಒಲಂಪಿಕ್ ಕ್ರೀಡಾ ಚಳುವಳಿ ಸ್ಪರ್ಧಿಸುವ ಕ್ರೀಡಾಪಟುಗಳ ಸ್ಪರ್ಧಾ ಮನೋಭಾವ, ಧೈರ್ಯ, ಸ್ಥೈರ್ಯಗಳಿಂದ ಉಳಿದುಕೊಂಡುಬಂದಿವೆ.



ಅಡ್ಡಗೋಡೆಗಳೊಡೆದು ಐಕ್ಯತೆ ಸಾರುವ 'ಒಲಂಪಿಕ್ಸ್'



ಅಥೆನ್ಸ್
ಒಲಿಂಪಿಕ್ 2004

ಒಲಂಪಿಕ್ಸ್ ಕ್ರೀಡೆಗೆ ಶತಶತಮಾನಗಳ ಇತಿಹಾಸವಿದೆ. ದೇಶದೇಶಗಳ ನಡುವೆ ಬಾಂಧವ್ಯ ಬೆಸೆವ ಆಶಯವಿದೆ. ವೈಭವವಿದೆ. ಸಂಘರ್ಷಗಳ, ವೈಷಮ್ಯಗಳ ಏರಿಳಿತಗಳ ನಡುವೆ ಇಂತಹ ಮಹಾನ್ ಕ್ರೀಡಾ ಮೇಳ ಒಲಂಪಿಕ್ಸ್ ಈಗ ಮತ್ತೆ ತನ್ನ ತವರಿನಲ್ಲಿ ನಡೆಯುತ್ತಿದೆ. ಅದರ ಇತಿಹಾಸ, ವರ್ತಮಾನಗಳನ್ನು ಲೇಖಕರು ಇಲ್ಲಿ ತೆರೆದಿಟ್ಟಿದ್ದಾರೆ.

2004 ರ ಒಲಂಪಿಕ್ಸ್ ಕ್ರೀಡಾಕೂಟ ಪ್ರಾಚೀನ ಹಾಗೂ ನವ್ಯ ಒಲಂಪಿಕ್ ಕ್ರೀಡೆಯ ಉಗಮಸ್ಥಾನವಾದ ಗ್ರೀಸ್‌ನ ಅಥೆನ್ಸ್‌ನಲ್ಲಿ ಇದೇ ಅಗಸ್ಟ್ 13 ರಿಂದ 29 ರವರೆಗೆ ನಡೆಯಲಿದೆ. ಪ್ರಪಂಚದ ಜನರು ಒಂದೆಡೆ ಐಕ್ಯತೆಯಿಂದ ಸೇರುವ ಒಂದು ಘಟನೆ ಇಂದು ಒಲಂಪಿಕ್ ಕ್ರೀಡಾಕೂಟದಲ್ಲಿ ಮಾತ್ರ ಕಾಣಬಹುದು. ಒಂದು ಶತಮಾನದ ಇತಿಹಾಸವಿರುವ ಆಧುನಿಕ ಒಲಂಪಿಕ್ ಕ್ರೀಡೆ ಆರಂಭವಾದದ್ದು 1896 ರಲ್ಲಿ ಗ್ರೀಸ್ ದೇಶದ ಒಲಂಪಿಯಾದಲ್ಲಿ. ಇದೀಗ ಒಂದು ಶತಮಾನದ ನಂತರ ಪುನಃ ಆಧುನಿಕ ಒಲಂಪಿಕ್ಸ್ ಕ್ರೀಡೋತ್ಸವ ಗ್ರೀಸ್‌ನ ಅಥೆನ್ಸ್‌ನಲ್ಲಿ ನಡೆಯುತ್ತಿದೆ.

ಪ್ರಾಚೀನ ಒಲಂಪಿಕ್ಸ್ ಆರಂಭವಾದದ್ದು ಕ್ರಿ.ಪೂರ್ವ 776 ರಲ್ಲಿ ಗ್ರೀಸ್ ದೇಶದ ಒಲಂಪಿಯಾದಲ್ಲಿ ಗ್ರೀಸ್ ದೇವತೆ ಜ್ಯೂಸ್ ಗೌರವಕ್ಕಾಗಿ ನಡೆಯುತ್ತಿದ್ದ ಧಾರ್ಮಿಕ ಸಮಾರಂಭದ ಭಾಗವಾಗಿ ಈ ಕ್ರೀಡೋತ್ಸವ ನಡೆಯುತ್ತಿತ್ತು. ಅಂದು ವಿಜೇತರಿಗೆ ಚಿನ್ನದ ಪದಕ ಬದಲು ಆಲಿವ್ ಎಲೆಗಳ ಕಿರೀಟ ತೊಡಿಸಲಾಗುತ್ತಿತ್ತು. ಗೆದ್ದವರಿಗೆ ಆಯಾ ಊರಿನ ಜನತೆ ಹಣ ಬಹುಮಾನ ನೀಡುತ್ತಿದ್ದರು. ಪ್ರಾಚೀನ ಒಲಂಪಿಕ್ ಕ್ರೀಡಾಕೂಟದಲ್ಲಿ ಗೆಲ್ಲುವುದು ಊರಿನ ಜನತೆಯ ಹೆಮ್ಮೆಯ ವಿಷಯವಾಗಿತ್ತು. ಕಿ.ಪೂರ್ವ



393 ರವರೆಗೆ ಪ್ರಾಚೀನ ಒಲಂಪಿಕ್ಸ್ ನಡೆಯುತ್ತಿತ್ತು. ರೋಮನ್ನರು ಗ್ರೀಸ್ ದೇಶವನ್ನು ಆಕ್ರಮಿಸಿಕೊಂಡ ನಂತರ ರೋಮ್‌ನ ಚಕ್ರವರ್ತಿ ಥಿಯೋಡಿಯನ್ ಒಲಂಪಿಕ್ ಕ್ರೀಡೆಗಳನ್ನು ನಿಷೇಧಿಸಿದ.

ಆಧುನಿಕ ಒಲಂಪಿಕ್ಸ್‌ನ ಪ್ರಥಮ ಕ್ರೀಡೋತ್ಸವ 1896 ರ ಗ್ರೀಸ್‌ನ ಅಥೆನ್ಸ್‌ನಲ್ಲಿ ನಡೆಯಿತು. ಫ್ರಾನ್ಸ್ ದೇಶದ ಮಾನವತಾವಾದಿ ಬ್ಯಾರನ್ ಪಿಯರೆ ಡಿ ಕೂಬರ್ತಿನ್ ಆಧುನಿಕ ಒಲಂಪಿಕ್ಸ್ ಕ್ರೀಡೆಯ ಪಿತಾಮಹ. ತನ್ನ ವಿಶ್ವ ಪರ್ಯಟನೆಯ ಸಮಯದಲ್ಲಿ ಕ್ರೀಡೆಯ ಬಗ್ಗೆ ಆಸಕ್ತಿ ತಳೆದ ಕೂಬರ್ತಿನ್ ದೇಹ ಹಾಗೂ ಮನಸ್ಸಿನ ಸ್ವಾಸ್ಥ್ಯಕ್ಕೆ ಗ್ರೀಕರು ನಡೆಸುತ್ತಿದ್ದ ಕ್ರೀಡೋತ್ಸವ ಮಹತ್ವದ ಬಗ್ಗೆ ವಿಶ್ಲೇಷಣೆ ನಡೆಸಿ ಆಧುನಿಕ ಒಲಂಪಿಕ್ಸ್ ಕ್ರೀಡೆಗಳ ಆರಂಭಕ್ಕೆ ಪ್ರಯತ್ನ ಆರಂಭಿಸಿದೆ. ಪ್ರಾಚೀನ ಒಲಂಪಿಕ್ಸ್‌ನಿಂದ ಉತ್ತೇಜನಗೊಂಡ ಕೋಬರ್ತೀನ್ ಪ್ರಯತ್ನದಿಂದ ಪ್ರಥಮ ಒಲಂಪಿಕ್ ಕ್ರೀಡೆ 1896 ರಲ್ಲಿ ಪ್ರಥಮವಾಗಿ ಅಥೆನ್ಸ್‌ನಲ್ಲಿ ನಡೆಯಿತು. 14 ರಾಷ್ಟ್ರಗಳ 245 ಮಂದಿ ಸ್ಪರ್ಧಿಗಳಿದ್ದ ಈ ಕ್ರೀಡೆ ಮುಂದೆ ಅನೇಕ ಅಡೆತಡೆಗಳ ನಡುವೆ ಈವರೆಗೂ ಒಂದು ಚಳುವಳಿಯಾಗಿ ಉಳಿದಿದೆ. ಲೆಕ್ಕದಲ್ಲಿ ಅಥೆನ್ಸ್‌ನಲ್ಲಿ ಇದೀಗ ನಡೆಯುವ ಒಲಂಪಿಕ್ಸ್ 25 ನೇ ಕ್ರೀಡೋತ್ಸವದಲ್ಲಿ 203 ರಾಷ್ಟ್ರಗಳ ಹನ್ನೊಂದು ಸಾವಿರ ಸ್ಪರ್ಧಾಳುಗಳು ಭಾಗವಹಿಸುತ್ತಿದ್ದಾರೆ. ದೇಶ-ದೇಶಗಳ ನಡುವೆ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಭಾಂದವ್ಯವನ್ನು ಬೆಸೆಯುವ ಉದ್ದೇಶಕ್ಕಾಗಿ ಆಧುನಿಕ ಒಲಂಪಿಕ್ಸ್ ಅನ್ನು ಆರಂಭಿಸಲು ಕೊಬರ್ತಿನ ಮುಂದಾದ. ಈ ಪ್ರಯತ್ನ ಹಲವಾರು ಏಳುಬೀಳುಗಳ ನಡುವೆ ಬಹುಮಟ್ಟಿಗೆ ಇಂದು ಯಶಸ್ವಿಯಾಗಿದೆ.

ಅಡೆತಡೆಗಳು - ಬಹಿಷ್ಕಾರ- ಯುದ್ಧ: ರಾಜಕೀಯ ಸಂಘರ್ಷ

1896 ರಲ್ಲಿ ಆರಂಭಗೊಂಡ ಆಧುನಿಕ ಒಲಂಪಿಕ್ಸ್‌ಗೆ 1994 ರಲ್ಲಿಯೇ ಅಡೆತಡೆಗಳು ಆರಂಭವಾದವು. ಒಲಂಪಿಕ್ಸ್ ಕ್ರೀಡೆಯನ್ನು ನಡೆಸಲು ರಾಷ್ಟ್ರಗಳ ನಡುವೆ ಅಂದಿನಿಂದಲೇ ಸ್ಪರ್ಧೆ ಆರಂಭವಾಯಿತು. (2000 ರ ಒಲಂಪಿಕ್ಸ್ ಚೀನಾಕ್ಕೆ ದಕ್ಕಬೇಕಾಗಿದ್ದು ಬಹುರಾಷ್ಟ್ರೀಯ ಕಂಪನಿಗಳ ಹುನ್ನಾರದಿಂದ ಆಸ್ಟ್ರೇಲಿಯಾಕ್ಕೆ ದಕ್ಕಿತು) ಮೊದಲನೇ ಮಹಾಯುದ್ಧದ ಕಾರಣ 1916 ರಲ್ಲಿ ಹಾಗೂ ಎರಡನೇ ಮಹಾಯುದ್ಧದ ಕಾರಣ 1940 ಹಾಗೂ 1944 ರಲ್ಲಿ ಒಲಂಪಿಕ್ಸ್ ನಡೆಯಲಿಲ್ಲ. 1936 ರಲ್ಲಿ ಬರ್ಲಿನ್‌ನಲ್ಲಿ ನಡೆದ ಒಲಂಪಿಕ್ಸ್ ಕ್ರೀಡೆಗೆ ಸರ್ವಾಧಿಕಾರಿ ಹಿಟ್ಲರ್ 25 ಮಿಲಿಯನ್ ಡಾಲರ್ ಹಣ ಖರ್ಚು ಮಾಡಿ ಈ ಮೂಲಕ ಆರ್ಯನ್ನರ ಶ್ರೇಷ್ಟತೆ ಮೆರೆಸಲು ಪ್ರಯತ್ನಿಸಿದ್ದ. ಆದರೆ ಅಮೇರಿಕಾದ ನಿಗ್ರೋ ಸಂಜಾತ ರೆಸಿ ಓವೆನ್ಸ್ 1906 ರ ಬರ್ಲಿನ್ ಒಲಂಪಿಕ್ಸ್‌ನಲ್ಲಿ ಒಂದು ಚಿನ್ನದ ಪದಕ ಗೆದ್ದು ಹಿಟ್ಲರ್‌ನನ್ನು ಸ್ವಾಗತಿಸಿದ. ರೆಸ್ಸಿ ಒವೆನ್ಸ್ ಕೈಕುಲುಕಲು ಹಿಟ್ಲರ್ ನಿರಾಕರಿಸಿದ್ದ. 1952 ರಂದು ಸೋವಿಯತ್ ಏಷ್ಯಾ ಒಲಂಪಿಕ್ಸ್‌ನಲ್ಲಿ ಭಾಗವಹಿಸಲು ಆರಂಭಿಸಿದ ನಂತರ ಅಮೇರಿಕಾ ಹಾಗೂ ರಷ್ಯಾ ನಡುವೆ ಕ್ರೀಡೆಯಲ್ಲಿ ಪೈಪೋಟಿ ಹೊಸ ಆಯಾಮ ಪಡೆಯಿತು. ಸೋವಿಯತ್ ರಷ್ಯಾ ವಿಭಜನೆ, ಪೂರ್ವ ಯುರೋಪ್ ರಾಷ್ಟ್ರಗಳಲ್ಲಿ ಸಮಾಜವಾದಕ್ಕೆ ಹಿನ್ನಡೆಯಾಗುವವರೆಗೂ ಕಮ್ಯೂನಿಸ್ಟ್ ರಾಷ್ಟ್ರಗಳು ಒಲಂಪಿಕ್ಸ್‌ನಲ್ಲಿ ದೈತ್ಯ ಶಕ್ತಿಯಾಗಿದ್ದವು. ಇಂದಿಗೂ ಪುಟ್ಟ ಕ್ಯೂಬಾ ಹಾಗೂ ಚೀನಾ ಈ ಪರಂಪರೆಯನ್ನು ಮುಂದುವರಿಸಿದೆ.

1956 ರಲ್ಲಿ ಮೆಲ್ಬೋರ್ನ್ ಒಲಂಪಿಕ್ಸ್‌ನಿಂದ ಬಹಿಷ್ಕಾರದ ಅಲೆ ಆರಂಭವಾಯಿತು. 1956 ರಲ್ಲಿ ಇಸ್ರೇಲ್ ಸುಯೇಜ್ ಕಾಲುವೆಯನ್ನು ಆಕ್ರಮಿಸಿಕೊಂಡ ಕಾರಣ ಈಜಿಪ್ಟ್, ಲೆಬನಾನ್, ಇರಾಕ್ ಒಲಂಪಿಕ್ಸ್‌ನ್ನು ಬಹಿಷ್ಕರಿಸಿದ್ದವು. ಇದೇ ವರ್ಷ ರಷ್ಯಾ ಹಂಗೆರಿ ಯನ್ನು ಆಕ್ರಮಿಸಿದೆ ಎಂದು ಹುಯಿಲೆಬ್ಬಿಸಿ ಹಾಲೆಂಡ್ ಸ್ಪೇನ್, ಸ್ವಿಜರ್‌ಲ್ಯಾಂಡ್ ಒಲಂಪಿಕ್ಸ್‌ನ್ನು ಬಹಿಷ್ಕರಿಸಿದ್ದವು. 1968 ರಲ್ಲಿ ಮೆಕ್ಸಿಕೋದಲ್ಲಿ ವಿದ್ಯಾರ್ಥಿ ಚಳುವಳಿಗಾರರ ಮೇಲೆ ನಡೆದ ಸೈನ್ಯದ ದಬ್ಬಾಳಿಕೆಯನ್ನು ಪ್ರತಿಭಟಿಸಿ ಅನೇಕ ರಾಷ್ಟ್ರಗಳು ಮೆಕ್ಸಿಕೋ ಒಲಂಪಿಕ್ಸ್‌ನಿಂದ ದೂರ ಉಳಿದವು. 1972 ರ ಮ್ಯೂನಿಚ್ ಒಲಂಪಿಕ್ಸ್ ನಲ್ಲಿ ಕ್ರೀಡಾ ಗ್ರಾಮ ಪ್ರವೇಶಿಸಿದ್ದ ಅರಬ್ ಭಯೋತ್ಪಾದಕರು 9 ಮಂದಿ ಇಸ್ರೇಲ್ ಕ್ರೀಡಾ ಪಟುಗಳನ್ನು ಒತ್ತೆಯಾಳುಗಳಾಗಿ ಇರಿಸಿಕೊಂಡು ನಂತರ ಕೊಂದು ಹಾಕಿದ್ದು ಇಂದಿಗೂ ಈ ಕ್ರೀಡೋತ್ಸವದ ಒಂದು ಕಪ್ಪು ಚುಕ್ಕೆಯಾಗಿ ಉಳಿದಿದೆ. 1976 ರಲ್ಲಿ ಕೆನಡಾದ ಮಾಂಟ್ರಿಯಲ್ ನಲ್ಲಿ ಒಲಂಪಿಕ್ಸ್ ನಡೆದಾಗ ವರ್ಣಬೇದ ನೀತಿ ಅನುಸರಿಸುತ್ತಿದ್ದ ದಕ್ಷಿಣ ಆಫ್ರಿಕಾ ಜೊತೆ ಕ್ರೀಡಾ ಸಂಭಂದ ಇರಿಸಿಕೊಂಡ ನ್ಯೂಜಿಲ್ಯಾಂಡ್‌ನ್ನು ಒಲಂಪಿಕ್ಸ್‌ನಲ್ಲಿ ಸೇರಿಸಿಕೊಂಡ ಕಾರಣ ಮುಂದಿಟ್ಟು 32 ಆಫ್ರಿಕಾದ ರಾಷ್ಟ್ರಗಳು ಕ್ರೀಡೆಯನ್ನು ಬಹಿಷ್ಕರಿಸಿದ್ದವು.

ಒಲಂಪಿಕ್ಸ್ ಬಹಿಷ್ಕಾರಕ್ಕೆ ಪ್ರಥಮವಾಗಿ ದೊಡ್ಡ ರೀತಿಯಲ್ಲಿ ನಾಂದಿ ಹಾಡಿದ ಕೀರ್ತಿ ಅಮೇರಿಕಾದ ಅಧ್ಯಕ್ಷನಾಗಿದ್ದ ಜಿಮ್ಮಿ ಕಾರ್ಟರ್‌ಗೆ ಸಲ್ಲುತ್ತದೆ. 1980 ರಲ್ಲಿ ಮಾಸ್ಕೋದಲ್ಲಿ ಒಲಂಪಿಕ್ಸ್ ನಡೆದಾಗ ರಷ್ಯಾ ಅಫ್‌ಘಾನಿಸ್ಥಾನದ ಮೇಲೆ ಆಕ್ರಮಣ ಮಾಡಿದೆ ಎಂಬ ಕಾರಣ ಮುಂದಿಟ್ಟು ಅಮೇರಿಕಾ ನೇತೃತ್ವದಲ್ಲಿ ಆದರ ಎಲ್ಲಾ ಮಿತ್ರ ರಾಷ್ಟ್ರಗಳು ಮಾಸ್ಕೋ ಒಲಂಪಿಕ್ಸ್‌ನ್ನು ಬಹಿಷ್ಕರಿಸಿದ್ದವು. ಆದರೆ ವಿಶೇಷವೆಂದರೆ ಅಮೆರಿಕಾದ ಮಿತ್ರ ರಾಷ್ಟ್ರ ಫ್ರಾನ್ಸ್ ಹಾಗೂ ಇಂಗ್ಲೇಡ್‌ನ ಸ್ಪರ್ಧಿಗಳು ತಮ್ಮ ರಾಷ್ಟ್ರದ ಸರ್ಕಾರಗಳ ತೀರ್ಮಾನಕ್ಕೆ ವಿರುದ್ಧವಾಗಿ ಮಾಸ್ಕೋ ಒಲಂಪಿಕ್ಸ್‌ನಲ್ಲಿ ಭಾಗವಹಿಸಿದ್ದರು. 1984 ರಲ್ಲಿ ಪ್ರತಿಕ್ರಿಯೆಯಾಗಿ ರಷ್ಯಾ ಹಾಗೂ ಆದರ ಮಿತ್ರ ರಾಷ್ಟ್ರಗಳು ಭದ್ರತೆಯ ಕಾರಣವೆಂದು ಲಾಸ್ ಎಂಜಲೀಸ್ ಒಲಂಪಿಕ್ಸ್‌ನಿಂದ ದೂರ ಉಳಿದವು. 1988 ರ ಸಿಯೋಲ್ ಒಲಂಪಿಕ್ಸ್‌ನ್ನು ಕ್ಯೂಬಾ, ಉತ್ತರ ಕೊರಿಯಾ ಹಾಗೂ ಇಥಿಯೋಪಿಯಾ ರಾಷ್ಟ್ರಗಳು



ಬಹಿಷ್ಕರಿಸಿದ್ದವು. 1992 ರ ಸ್ಪೇನ್‌ನ ಬಾರ್ಸಿಲೋನಾ ಒಲಂಪಿಕ್ಸ್‌ನಿಂದ ಬಹಿಷ್ಕಾರದ ಪದ್ಧತಿ ಕೊನೆಗೊಂಡಿದೆ.

ಬಹುರಾಷ್ಟ್ರೀಯ ಕಂಪನಿಗಳ ಹಿಡಿತ

1984 ರ ಲಾಸ್ ಏಂಜಲೀಸ್ ಒಲಂಪಿಕ್ಸ್‌ನಿಂದ ಈ ಕ್ರೀಡೋತ್ಸವದ ಮೇಲೆ ಬಹುರಾಷ್ಟ್ರೀಯ ಕಂಪನಿಗಳು ಪ್ರಾಯೋಜಕರ ಹೆಸರಿನಲ್ಲಿ ಹಿಡಿತ ಸಾಧಿಸಿದೆ. 2000 ರ ಸಿಡ್ನಿ ಒಲಂಪಿಕ್ಸ್‌ನಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಜಾಹಿರಾತು ಪ್ರಸಾರಕ್ಕೆ ಅನುಕೂಲವಾಗುವಂತೆ ಕ್ರೀಡೆಗಳ ಸಮಯವನ್ನೇ ಬದಲಾಯಿಸಿ ಸ್ಪರ್ಧಿಗಳಿಗೆ ತೊಂದರೆ ಉಂಟುಮಾಡಲಾಯಿತು.

ಪುಟ 11 ಕ್ಕೆ

ಮೆಲ್ಕಿಯೋರ್.ಆರ್.ಡಿ

ಗ್ರೀಸ್ - ಅಂದಿನಿಂದ ಇಂದಿನವರೆಗೆ



ಗ್ರೀಸ್ ಇಂದಿನ ಪಾಶ್ಚಾತ್ಯ ಸಂಸ್ಕೃತಿಯ ಮೂಲ ಸ್ಥಾನವಾದ ಗ್ರೀಸ್ ಯುರೋಪಿನ ಒಂದು ಪುರಾತನ ದೇಶ. ಅಥೆನ್ಸ್ ಈ ದೇಶದ ಒಂದು ಪ್ರಸಿದ್ಧ ನಗರ, ಅಥೆನ್ಸ್ ಪ್ರಾಚೀನ ಗ್ರೀಸ್‌ನ ಮಹಾ ವಿಧ್ಯಾಪೀಠ, ಅರ್ಥಾತ್ ಪಾಶ್ಚಾತ್ಯ ಪ್ರಪಂಚಕ್ಕೆ ತತ್ವಶಾಸ್ತ್ರ ಬೀರುವ ನೆಲೆವೀಡಾಗಿತ್ತು. ಅಲ್ಲದೆ ತತ್ವಶಾಸ್ತ್ರ, ಸಾಹಿತ್ಯ, ವಾಸ್ತು ಶಿಲ್ಪ, ರಾಜ್ಯಶಾಸ್ತ್ರ ಇತ್ಯಾದಿಗಳ ಭಂಡಾರವಾಗಿತ್ತು. ತತ್ವಶಾಸ್ತ್ರ ಪಿತಾಮಹ ಸಾಕ್ರೇಟೀಸ್ ಹಾಗೂ ದಾರ್ಶನಿಕ ಪ್ಲೆಟೋ, ರಾಜ್ಯನೀತಿ ಶಾಸ್ತ್ರಜ್ಞ ಅರಿಸ್ಟಾಟಲ್‌ನ ಜನ್ಮ ಸ್ಥಳ ಗ್ರೀಸ್. ಮಹಾವೀರರ ನಾಡೆಂದೆ ಹೆಸರಾಗಿದ್ದ ಗ್ರೀಸ್ ಮಹಾಸಾಮ್ರಾಟ ಅಲೆಕ್ಸಾಂಡರ್‌ನ ಜನ್ಮ ಭೂಮಿ. ಇಡೀ ಗ್ರೀಕ್ ಜನಾಂಗಕ್ಕೆ ಏಕ ರೂಪದ ಆಡಳಿತ ತರಲು ಬಯಸಿದ ಮಹಾನಾಯಕ ಪೆರಿಕ್ಲೀಸ್ ಹಲವು ರಾಜ್ಯಗಳಾಗಿ ಹಂಚಿ ಹೋಗಿದ್ದ ಗ್ರೀಸ್‌ನ್ನು ಒಂದುಗೂಡಲು ಪ್ರಯತ್ನಿಸಿದ್ದ. ಎಲ್ಲಾ ವರ್ಗದ ಜನರಿಗೆ ಆಡಳಿತ ಸಭೆಗಳಲ್ಲಿ ಭಾಗವಹಿಸಿ ಮಾತನಾಡಲು ಅವಕಾಶ ನೀಡಿದ್ದು ಪೆರಿಕ್ಲೀಸ್.

ಮುಂದೆ ರೋಮನ್ನರ ಆಡಳಿತಕ್ಕೆ ಒಳಪಟ್ಟು ನಂತರ ಅನೇಕ ವರ್ಷಗಳ ಕಾಲ ಟರ್ಕಿ ಸುಲ್ತಾನರ ವಸಾಹತುವಾಗಿತ್ತು. 6-7 ನೇ ಶತಮಾನದಲ್ಲಿ ಗ್ರೀಕ್ ನಗರ ರಾಜ್ಯಗಳು ಬಲಿಷ್ಟ ಶಕ್ತಿಯಾಗಿತ್ತು. 1453 ರಲ್ಲಿ ಟರ್ಕಿಯ ವಶವಾಗಿದ್ದ ಗ್ರೀಸ್ ಮುಂದೆ ನಾಲ್ಕು ಶತಮಾನ ಇವರ ಆಡಳಿತದಲ್ಲಿಯೇ ಉಳಿಯಿತು. ಮುಂದೆ 19 ನೇ ಶತಮಾನದ ಮೂರನೆಯ ದಶಕದಲ್ಲಿ ಗ್ರೀಸ್‌ನಲ್ಲಿ ಸ್ವಾತಂತ್ರ್ಯ ಯುದ್ಧ ಆರಂಭವಾಯಿತು. ಕೋಪೋದ್ರಿಕ್ತವಾದ ಟರ್ಕಿ 25 ಸಾವಿರ ಗ್ರೀಕರ ಕಗ್ಗೊಲೆ ನಡೆಸಿತು. 45 ಸಾವಿರ ಗ್ರೀಕರನ್ನು ಗುಲಾಮರನ್ನಾಗಿ ಮಾರಾಟ ಮಾಡಲಾಯಿತು. 1830 ರಲ್ಲಿ ಫ್ರಾನ್ಸ್,ರಷ್ಯಾ, ಬ್ರಿಟನ್ ನೆರವಿನಿಂದ ಟರ್ಕಿ ಸೋಲು ಕಂಡು ಗ್ರೀಸ್ ಸ್ವತಂತ್ರವಾಯಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ಜರ್ಮನಿ ಆಕ್ರಮಣದ ವಿರುದ್ಧ ಗ್ರೀಸ್‌ನಲ್ಲಿ ಕಮ್ಯೂನಿಸ್ಟ್ ಗೆರಿಲ್ಲಾಗಳು ಕಾದಾಡಿದರು. 1950 ರಲ್ಲಿ ಅಂತರಯುದ್ಧಕ್ಕೆ ಒಳಪಟ್ಟ ಗ್ರೀಸ್‌ನಲ್ಲಿ 1967 ರಲ್ಲಿ ಪ್ರಜಾಪ್ರಭುತ್ವ ನೆಲಗೊಂಡಿತ್ತು. (ಗ್ರೀಸ್‌ನಲ್ಲಿ ಕಮ್ಯೂನಿಸ್ಟರ ದಮನ ಹೆಚ್ಚು ಪ್ರಚಾರ ಪಡೆದಿಲ್ಲ) ವೈಭವದಿಂದ ಮೆರೆದಿದ್ದ ಪ್ರಾಚೀನ ಗ್ರೀಸ್‌ಗೂ ಇಂದಿನ ಗ್ರೀಸ್‌ಗೂ ಅಜಗಜಾಂತರ ವ್ಯತ್ಯಾಸವಿದೆ. ಯುರೋಪ್ ಒಕ್ಕೂಟಕ್ಕೆ ಸೇರಿದ ಗ್ರೀಸ್ ಇಂದು ಆರ್ಥಿಕವಾಗಿ ಸದೃಢವಲ್ಲದ ದೇಶವಾಗಿ ಉಳಿದಿದೆ.

ಪ್ರಾಚೀನ ಒಲಂಪಿಕ್ಸ್‌ನ ಗತವೈಭವವನ್ನು ನೆನಪಿಸಿಕೊಳ್ಳಲು 2004 ರ ಆಧುನಿಕ ಒಲಂಪಿಕ್ಸ್ ಗ್ರೀಸ್‌ನ ಅಥೆನ್ಸ್‌ನಲ್ಲಿ ಅಗಸ್ಟ್ 13 ರಿಂದ 29 ರವರೆಗೆ ನಡೆಯುತ್ತಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee Editor : S.Y.GURUSHANTH